"JANAPADA" Monthly - May 2017
"ಜನಪದ" ಮಾಸಿಕ – ಮೇ 2017

Page No. -52
RNI No. KAR/KAN/2010/20676

Regd No. KA/BG/GPO-2526/2015-2017 License to post without prepayment WPP 34, Published on 4th
Dt. 29th & 30th Posted at (Every month), Bangalore PSO, Mysore Road, Bangalore - 26. (Permitted to post on May 8th)

ಅನ್ನಭಾಗ್ಯ
ಹಸಿವು ಮುಕ್ತ ಕರ್ನಾಟಕ

ಕ್ಷೀರಭಾಗ್ಯ
ಕ್ಷೀರಧಾರೆ
ವಿದ್ಯಾಸಿರಿ
ನಮ್ಮ ಮೆಟ್ರೋ

ಕೃಷಿಭಾಗ್ಯ
ರಾಜೀವ್ ಆರೋಗ್ಯಭಾಗ್ಯ
ಶುದ್ಧ ನೀರು
ಋಣಮುಕ್ತ

ವಸತಿ ಭಾಗ್ಯ
ಸೌರಭಾಗ್ಯ
ಪಶುಭಾಗ್ಯ
ಹನಿ ನೀರಾವರಿ

ಮನಸ್ವಿನಿ
ಮೈತ್ರಿ
ನಿರ್ಮಲ ಭಾಗ್ಯ
INVEST KARNATAKA 2016

ವಾರ್ಷಿಕ ಚಂದಾ ರೂ.25/-

# ಜನಪದ

ಮೇ 2017



4 ನುಡಿದಂತೆ ನಡೆಯುತ್ತಿದ್ದೇವೆ...
ಸಾಧನೆಯ ನಾಲ್ಕು ವರ್ಷಗಳು

ಐದನೇ ವರ್ಷದೆಡೆಗೆ ಭರವಸೆಯ ನಡಿಗೆ...

ಬೆಂಗಳೂರಿನಲ್ಲಿ ನಡೆದ ಡಾ. ಬಿ ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಶಂಕುಸ್ಥಾಪನಾ ಸಮಾರಂಭದಲ್ಲಿ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಅವರು ಪಾಲ್ಗೊಂಡಿದ್ದರು. ಅವರೊಂದಿಗೆ ರಾಜ್ಯಪಾಲರಾದ ಶ್ರೀ ವಜುಭಾಯಿ ವಾಲಾ, ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಶ್ರೀ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸಚಿವರಾದ ಶ್ರೀ ಸದಾನಂದ ಹೆಗಡೆ, ಸಚಿವರಾದ ಶ್ರೀ ಆರ್. ರೋಷನ್ ಬೇಗ್, ಶ್ರೀ ಅನಂತಕುಮಾರ್ ಭಾಗವಹಿಸಿದ್ದರು.









ವಾರ್ಷಿಕ ಚಲನಚಿತ್ರ ಪ್ರಶಸ್ತಿ ಪ್ರದಾನ –2016 ಸಮಾರಂಭದಲ್ಲಿ ಜೀವಿತಾವಧಿ ಸಾಧನೆ ಪ್ರಶಸ್ತಿ ಪಡೆದ ಶ್ರೀಮತಿ ಆದವಾನಿ ಲಕ್ಷ್ಮೀದೇವಿ (ಡಾ. ರಾಜಕುಮಾರ್ ಪ್ರಶಸ್ತಿ), ನಿರ್ದೇಶಕರಾದ ಶ್ರೀ ಕೆ ವಿ ರಾಜು ( ಪುಟ್ಟಣ್ಣ ಕಣಗಾಲ್ ಪ್ರಶಸ್ತಿ) ಹಾಗೂ ಕೆ ಚಿನ್ನಪ್ಪ ( ಡಾ. ವಿಷ್ಣುವರ್ಧನ್ ಪ್ರಶಸ್ತಿ) ಅವರಿಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿದರು.



# ಜನಪದ

ಸಂಪುಟ–60
ಸಂಚಿಕೆ–2
ಮೇ 2017

05 ರೈತರ ಬೆನ್ನಿಗೆ ನಿಂತ ಸರ್ಕಾರ
ಚಾಮರಾಜ ಸವಡಿ

12 ಗ್ರಾಮ ಸ್ವರಾಜ್ಯ ; ಕರ್ನಾಟಕದ ಸಾಧನೆ
ಎನ್. ಆರ್. ಶ್ರೀಶ

17 ಹಸಿವು ಮುಕ್ತ ಸಮಾಜದ ಪರಿಕಲ್ಪನೆಯ ಸಾಕಾರ; ಅನ್ನಭಾಗ್ಯ ಯೋಜನೆ
ಎಸ್. ಎಸ್. ಹೂಗಾರ್

19 ಅನ್ನಭಾಗ್ಯ ; ಸರ್ಕಾರದ ಮಹತ್ವದ ಯೋಜನೆ
ಲಕ್ಷ್ಮಣ ಕೊಡಸೆ

22 ಆರೋಗ್ಯ ಸೇವೆಯಲ್ಲಿ ಸದಾ ಮುಂದು...

25 ಕರ್ನಾಟಕ ಸರ್ಕಾರ – ಚಿತ್ರೋದ್ಯಮದ ಕಾಮಧೇನು
ಬಾನಾಸು

28 ಪೌಷ್ಠಿಕಾಂಶದ ಸಿರಿ – ಸಿರಿಧಾನ್ಯಗಳು

32 ಕೈಗಾರಿಕಾಭಿವೃದ್ಧಿಯ ಉತ್ತುಂಗದತ್ತ...
ರಾಜು ಅಡಕಳ್ಳಿ

35 ಗಾಂಧೀ ಭವನದ ರೂವಾರಿ– ಹೋ. ಶ್ರೀನಿವಾಸಯ್ಯ
ವೇಮಗಲ್ ಸೋಮಶೇಖರ್

38 ಕಾರ್ಮಿಕ ಶಕ್ತಿಯ ಧ್ಯೋತಕ – ಮೇ 1
ಡಾ. ಆರ್. ಶಂಕರಪ್ಪ

46 ಬೆಳಕಿನ ಮಹಾಮಾರ್ಗ – ಬುದ್ಧ ಪೂರ್ಣಿಮೆ
ಬನ್ನೂರು ಕೆ. ರಾಜು

48 ಸಹಬಾಳ್ವೆ ಮತ್ತು ಶ್ರಮ ಸಂಸ್ಕೃತಿ ಪಾಠ ಕಲಿಸಿದ ಎನ್ ಎಸ್ ಎಸ್ ಶಿಬಿರ
ಜೆ. ಚಂದ್ರಕಾಂತ್

49 ಕೃಷಿಯಲ್ಲಿಯೇ ನೆಮ್ಮದಿಯ ಬದುಕು
ಗಣಪತಿ ಹಾಸ್ಪುರ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

# ಓದುಗರಿಂದ...

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

**ಮಾದರಿ ರೈತ ಮಹಿಳೆ**


ಬಜೆಟ್ ಸಂಪೂರ್ಣ ಮಾಹಿತಿಯನ್ನು ನೀಡಿದ ಜನಪದಕ್ಕೆ ವಂದನೆಗಳು. ಡಾ. ಬಿ ಆರ್ ಅಂಬೇಡ್ಕರ್ ಕುರಿತ ಲೇಖನ, ಕೃಷಿ ಲೇಖನಗಳು ಮನಸೆಳೆದವು. ನೀರಿನ ಅಭಾವದಲ್ಲಿಯೂ ಜರ್ಬೆರಾ ಬೆಳೆದಂಥ ರೈತ ಮಹಿಳೆ ಶ್ರೀಮತಿ ಸಂಧ್ಯಾ ದೇಶಪಾಂಡೆ ಅಭಿನಂದನಾರ್ಹರು. ಆ ಭಾಗದ ಇನ್ನಿತರ ಕೃಷಿಕರೂ ಪಾಲಿಹೌಸ್ ಮುಖೇನ ಇಂಥ ಪ್ರಯೋಗಗಳನ್ನು ಮಾಡಲು ಅವರು ಮಾದರಿಯಾಗಿದ್ದಾರೆ.

**–ಎನ್. ಶ್ರೀಕಂಠ,** ತರೀಕೆರೆ

ಜನಪರ–ಜನಪ್ರಿಯ ಬಜೆಟ್ ಮಂಡಿಸಿದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳು. ಆಯವ್ಯಯದಲ್ಲಿರುವ ಹಲವು ಜನೋಪಯೋಗಿ ಯೋಜನೆಗಳು ಸ್ವಾಗತಾರ್ಹ.

ಸರ್ಕಾರದ ಪ್ರತಿ ಯೋಜನೆಯ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸುವಂತಹ ಮಾಹಿತಿ ಉತ್ಸವ ಕಾರ್ಯಕ್ರಮವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯೋಜಿಸಿರುವುದಕ್ಕೆ ಸಂತಸವಾಗುತ್ತಿದೆ. ಕೃಷಿ ಲೇಖನಗಳು ಮನ ಸೆಳೆದವು. ಬರ ಪರಿಸ್ಥಿತಿಯಲ್ಲಿಯೂ ನೂತನ ತಂತ್ರಜ್ಞಾನ ಬಳಸಿಕೊಂಡು ಅತ್ಯಧಿಕ ಕಲ್ಲಂಗಡಿ ಬೆಳೆದಿರುವ ರೈತ ರಾಜ್ಯದ ಜನತೆಗೆ ಮಾದರಿಯಾಗಿದ್ದಾರೆ.

**–ರಮೇಶ ಎಸ್ ಸಣ್ಣಕಲ್ಲಗೌಡ್ರ,**
ರಕ್ಕಸಗಿ, ಬಾಗಲಕೋಟೆ ಜಿಲ್ಲೆ




**'ಸರ್ವೋದಯದ ಅಭಿವೃದ್ಧಿ ಮಾದರಿ' ಬಜೆಟ್**

ಏಪ್ರಿಲ್ 2017ರ ಜನಪದ ಮಾಸಿಕದಲ್ಲಿ ಆಯವ್ಯಯ 2017–18 , ಬಜೆಟ್ ಮುಖ್ಯಾಂಶಗಳನ್ನು ನೀಡಿದಕ್ಕಾಗಿ ನಮ್ಮ ನಮನಗಳು. 'ಸರ್ವೋದಯದ ಅಭಿವೃದ್ಧಿ ಮಾದರಿ' ಎಂಬ ಶೀರ್ಷಿಕೆ ಬಹಳ ಅರ್ಥಪೂರ್ಣವಾಗಿದೆ.

ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ರೇಷ್ಮೆ, ಮೀನುಗಾರಿಕೆ, ಸಹಕಾರ, ಜಲ ಸಂಪನ್ಮೂಲ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹೀಗೆ ಸರ್ಕಾರದ ವಿವಿಧ ಇಲಾಖೆಗಳ ಅಭಿವೃದ್ಧಿಗೆ, ಸುಧಾರಣೆಗೆ ಒತ್ತು ನೀಡಿರುವ ಸರ್ಕಾರದ ನಡೆ ಅಭಿನಂದನೀಯ.

**–ಎಮ್. ಎಫ್.ದಖನಿ,**
ವಿಜಯಪುರ

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

ಬಜೆಟ್ ಕುರಿತ ವಿವರವಾದ ಮಾಹಿತಿಗೆ ಧನ್ಯವಾದಗಳು. ಡಾ. ಬಿ. ಆರ್. ಅಂಬೇಡ್ಕರ್ ಅವರ ಕುರಿತಾದ ಲೇಖನ ಬಹಳ ಸ್ವಾರಸ್ಯವಾಗಿ ಮೂಡಿ ಬಂದಿದೆ. ಲೇಖಕರಿಗೆ ಹಾಗೂ ಜನಪದಕ್ಕೆ ವಂದನೆಗಳು.

**–ಶ್ರೀನಿವಾಸ ಎಸ್,** ಮಾಗಡಿ

ಮುಖಪುಟ ಬಹಳ ಆಕರ್ಷಣೀಯವಾಗಿತ್ತು. ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಮಂಡನೆಯ ಮುಖಪುಟ ಚಿತ್ರ , ಜನಪರ–ಜನಪ್ರಿಯ ಎಂಬ ಅಡಿಬರಹ ಮೆರುಗು ನೀಡಿದೆ. ಬಜೆಟ್ ಅಧಿವೇಶನದ ಒಳಾಂಗಣ ಚಿತ್ರಗಳು ಬಹಳ ಸುಂದರವಾಗಿ ಮೂಡಿಬಂದಿದ್ದು. ಉಪಯುಕ್ತ ಮಾಹಿತಿಗಳನ್ನು ಜನಪದ ಮಾಸಿಕ ಒಳಗೊಂಡಿದೆ.

**– ವಿಲ್ಸನ್ ಅಲೆಕ್ಸಾಂಡರ್,**
ಮುಂಡಗೋಡ

ಜನಪರ ಸರ್ಕಾರದ, ಜನಪ್ರೀತಿಯ ಬಜೆಟ್ ಇದು. ಆಯವ್ಯಯದ ವಿವರಗಳೊಡನೆ ಸರ್ಕಾರದ ಅಭಿವೃದ್ಧಿ ಸಾಧನೆಯ ಬಗ್ಗೆ ಮತ್ತು ಸರ್ಕಾರದ ಆಡಳಿತ ವೈಖರಿಯ ಬಗ್ಗೆ ಹಾಗೂ ಈವರೆಗಿನ ಮತ್ತು ಮುಂದಿನ ಆರ್ಥಿಕ ವರ್ಷದ ಮುನ್ನೋಟವನ್ನು ಜನತೆಯ ಮುಂದೆ ತೆರೆದಿಟ್ಟಿದ್ದಾರೆ. ಧನ್ಯವಾದಗಳು.

**– ಬಸವರಾಜ್ ಯಾದವ್,**
ಬಳ್ಳಾರಿ





ಕೃಷಿಗೆ ಒತ್ತು । ಮಳೆಯಾಶ್ರಿತ ಪ್ರದೇಶಕ್ಕೆ ಕೃಷಿಭಾಗ್ಯ । ಮೂಲಸೌಕರ್ಯಗಳ ಅಭಿವೃದ್ಧಿ

# ರೈತನ ಬೆನ್ನಿಗೆ ನಿಂತ ಸರ್ಕಾರ

**ಅತಿವೃಷ್ಟಿ, ಅನಾವೃಷ್ಟಿ ಕಾರಣದಿಂದ ಪ್ರತಿ ವರ್ಷ ಮಳೆಯಾಶ್ರಿತ ಪ್ರದೇಶದ ರೈತರು ಒಂದಲ್ಲ ಒಂದು ಸಂಕಷ್ಟ ಅನುಭವಿಸುತ್ತಿದ್ದಾರೆ. ಆತ್ಮಹತ್ಯೆಯಂತಹ ಪ್ರಕರಣಗಳು ರೈತ ಸಮುದಾಯದ ಆತ್ಮಸ್ಥೈರ್ಯವನ್ನೇ ಉಡುಗಿಸುವಂತಿತ್ತು. ಈ ಹಿನ್ನೆಲೆಯಲ್ಲಿ ಮಳೆಯಾಶ್ರಿತ ರೈತರ ಬದುಕನ್ನು ಉದ್ದೀಪಿಸಲು ಕರ್ನಾಟಕ ಸರ್ಕಾರ 2014–15ನೇ ಸಾಲಿನಲ್ಲಿ 'ಕೃಷಿ ಭಾಗ್ಯ' ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಘೋಷಿಸಿತು. ವರ್ಷದಿಂದ ವರ್ಷಕ್ಕೆ ಹೊಸ ಸೌಲಭ್ಯಗಳ ಸೇರ್ಪಡೆ ಹಾಗೂ ಹೆಚ್ಚುವರಿ ಅನುದಾನದ ಮೂಲಕ, ಈ ಯೋಜನೆ ರೈತರ ಪಾಲಿಗೆ ಆಶಾದಾಯಕವಾಗಿ ಪರಿಣಮಿಸಿತು. ಸತತ ಎರಡು ವರ್ಷಗಳ ಬರಗಾಲದಲ್ಲೂ ಹಲವಾರು ರೈತರು ಯೋಜನೆಯಿಂದಾಗಿ ಸ್ವಾವಲಂಬಿ ಬದುಕು ಹೊಂದಲು ಸಾಧ್ಯವಾಯಿತು. ರೈತರ ಬೆನ್ನಿಗೆ ನಿಂತ ಸರ್ಕಾರದ ಕೃಷಿ ಯೋಜನೆಯ ವಿವಿಧ ಆಯಾಮಗಳ ವಿವರಣೆ ಇಲ್ಲಿದೆ.**

**ಚಾಮರಾಜ ಸವಡಿ**

ಅತಿವೃಷ್ಟಿ, ಅನಾವೃಷ್ಟಿ ಕಾರಣದಿಂದ ಪ್ರತಿ ವರ್ಷ ಮಳೆಯಾಶ್ರಿತ ಪ್ರದೇಶದ ರೈತರು ಒಂದಲ್ಲ ಒಂದು ಸಂಕಷ್ಟ ಅನುಭವಿಸುತ್ತಿದ್ದಾರೆ. ಆತ್ಮಹತ್ಯೆಯಂತಹ ಪ್ರಕರಣಗಳು ರೈತ ಸಮುದಾಯದ ಆತ್ಮಸ್ಥೈರ್ಯವನ್ನೇ ಉಡುಗಿಸುವಂತಿತ್ತು. ಈ ಹಿನ್ನೆಲೆಯಲ್ಲಿ ಮಳೆಯಾಶ್ರಿತ ರೈತರ ಬದುಕನ್ನು ಉದ್ದೀಪಿಸಲು ಕರ್ನಾಟಕ ಸರ್ಕಾರ 2014–15ನೇ ಸಾಲಿನಲ್ಲಿ 'ಕೃಷಿ ಭಾಗ್ಯ' ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಘೋಷಿಸಿತು. ವರ್ಷದಿಂದ ವರ್ಷಕ್ಕೆ ಹೊಸ ಸೌಲಭ್ಯಗಳ ಸೇರ್ಪಡೆ ಹಾಗೂ ಹೆಚ್ಚುವರಿ ಅನುದಾನದ ಮೂಲಕ, ಈ ಯೋಜನೆ ರೈತರ ಪಾಲಿಗೆ ಆಶಾದಾಯಕವಾಗಿ ಪರಿಣಮಿಸಿತು. ಸತತ ಎರಡು ವರ್ಷಗಳ ಬರಗಾಲದಲ್ಲೂ ಹಲವಾರು ರೈತರು ಯೋಜನೆಯಿಂದಾಗಿ ಸ್ವಾವಲಂಬಿ ಬದುಕು ಹೊಂದಲು ಸಾಧ್ಯವಾಯಿತು. ರೈತರ ಬೆನ್ನಿಗೆ ನಿಂತ ಸರ್ಕಾರದ ಕೃಷಿ ಯೋಜನೆಯ ವಿವಿಧ ಆಯಾಮಗಳ ವಿವರಣೆ ಇಲ್ಲಿದೆ.



'ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ...' ಎಂಬ ಜನಪದರ ನುಡಿಯನ್ನು ಅರ್ಥ ಮಾಡಿಕೊಂಡು ಅನುಷ್ಠಾನಗೊಳಿಸಲು ಮುಂದಾಗಿರುವ ರಾಜ್ಯ ಸರ್ಕಾರ, ರೈತರ ಹಿತರಕ್ಷಣೆಯೇ ನಾಡಿನ ಪ್ರಗತಿಗೆ ಮೂಲ ಎಂಬ ಆಶಯವನ್ನು ಕೃಷಿ ಕ್ಷೇತ್ರದಲ್ಲಿ ಸಾಕಾರಗೊಳಿಸಿದೆ. ರೈತರ ನೆರವಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಮೂಲಕ ರಾಜ್ಯದ ಕೃಷಿ ಕ್ಷೇತ್ರದಲ್ಲಿ ಮಹತ್ತರ ಅಭಿವೃದ್ಧಿ ತಂದಿದೆ. ಸಂಕ್ಷಿಪ್ತವಾಗಿ ಕೃಷಿಭಾಗ್ಯ ಎಂದು ಕರೆಯಲಾಗುವ ಯೋಜನೆ ನಾನಾ ಮುಖಗಳನ್ನು ಹೊಂದಿದ್ದು, ರೈತರ ಸಮಗ್ರ ಅಭಿವೃದ್ಧಿಯೇ ಇದರ ಜೀವಾಳ.

ಅನ್ನಭಾಗ್ಯ, ಕ್ಷೀರಭಾಗ್ಯ ಮುಂತಾದ ಯೋಜನೆಗಳನ್ನು ಜಾರಿಗೆ ತಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮಳೆಯಾಶ್ರಿತ ಪ್ರದೇಶದ ರೈತರ ಜೀವನೋಪಾಯ ಉತ್ತಮಪಡಿಸಲು 'ಕೃಷಿ ಭಾಗ್ಯ' ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಸ್ವಾಭಾವಿಕ ಸಂಪನ್ಮೂಲ ಮಣ್ಣು ಮತ್ತು ನೀರಿನ ಸಂರಕ್ಷಣೆಯೊಂದಿಗೆ ಕೃಷಿ ಉತ್ಪಾದಕತೆ ಮತ್ತು ರೈತರು ಹಾಗೂ ಕೃಷಿ ಕಾರ್ಮಿಕರ ಆದಾಯ ಮಟ್ಟ ಹೆಚ್ಚಿಸುವುದು ಕೃಷಿ ಭಾಗ್ಯ ಯೋಜನೆಯ ಪ್ರಮುಖ ಉದ್ದೇಶ.

ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯನ್ನು 2014–15 ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಬದುಗಳ ಮೂಲಕ ಮಳೆನೀರು ಸಂರಕ್ಷಣೆ, ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆಗೆ ವಿಶೇಷ ಆದ್ಯತೆ ನೀಡುವುದು. ಲಾಭದಾಯಕ ಬೆಳೆ ಹಾಗೂ ಹೆಚ್ಚು ವರಮಾನ ತರುವ ತೋಟಗಾರಿಕೆ ಬೆಳೆ, ಪಶುಸಂಗೋಪನಾ ಚಟುವಟಿಕೆ, ಸಂಸ್ಕರಣ ಉದ್ದಿಮೆಗಳಿಗೆ ಉತ್ತೇಜನ ಹಾಗೂ ಕೃಷಿ ವಲಯಕ್ಕೆ ಸಂಬಂಧಿಸಿದ ಮೂಲಸೌಕರ್ಯಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವ ಮೂಲಕ ಕೃಷಿಯಲ್ಲಿ ಸುಸ್ಥಿರತೆ ತರುವ ಆಶಯವನ್ನು ಈ ಯೋಜನೆ ಹೊಂದಿದೆ.

ಮೊದಲ ಹಂತದಲ್ಲಿ ಯೋಜನೆಯನ್ನು 23 ಜಿಲ್ಲೆಗಳ ವ್ಯಾಪ್ತಿಯ 5 ಮುಖ್ಯ ಒಣ ಭೂಮಿ ವಲಯಗಳ 45 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿತ್ತು. ಕೃಷಿ

### ರೈತರಿಗೆ ವಿವಿಧ ಸೌಲಭ್ಯಗಳು

**ಜಿಲ್ಲಾ ಪಂಚಾಯಿತಿ ಯೋಜನೆಗಳು :** ರೈತರಿಗೆ ಸಹಾಯ: ಸದರಿ ಯೋಜನೆಯಡಿ ರೈತರಿಗೆ ಸಸ್ಯ ಸಂರಕ್ಷಣಾ ಔಷಧಿ ಮತ್ತು ಉಪಕರಣಗಳನ್ನು ಶೇ. 50ರ ರಿಯಾಯಿತಿಯಲ್ಲಿ ವಿತರಿಸಲಾಗುವುದು.

**ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆ:** ಆಯ್ಕೆ ಮಾಡಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ವೈಜ್ಞಾನಿಕ ಕೃಷಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಕೃಷಿ ಪರಿಕರ, ಕೃಷಿ ಉಪಕರಣ ಮತ್ತು ಸಸ್ಯ ಸಂರಕ್ಷಣಾ ಉಪಕರಣಗಳನ್ನು ಒದಗಿಸಿಕೊಡಲು ಅವಕಾಶವಿರುತ್ತದೆ.

**ಇತರೆ ಕೃಷಿ ಯೋಜನೆಗಳು:** ರೈತರಿಗೆ ಕಲ್ಟೀವೇಟರ್, ರೋಟೋವೇಟರ್ ಮತ್ತು ಫರೋಓಪನರ್ ಇತ್ಯಾದಿ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ಶೇ. 50ರ ರಿಯಾಯಿತಿಯಲ್ಲಿ ವಿತರಣೆ ಮಾಡಲಾಗುವುದು.

**ಬೇಸಾಯ ಸಂಬಂಧಿ ಚಟುವಟಿಕೆಗಳು:** ರೈತರು, ರೈತ ಮಹಿಳೆಯರು ಮತ್ತು ಅಧಿಕಾರಿಗಳಿಗೆ ತರಬೇತಿಗಳನ್ನು ಏರ್ಪಡಿಸಿ ನವೀನ ತಾಂತ್ರಿಕತೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು.

**ಸಾವಯವ ಗೊಬ್ಬರ:** ರಸಗೊಬ್ಬರಗಳ ಬಳಕೆಯನ್ನು ಮಿತಗೊಳಿಸಿ ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಹರಳು ರೂಪದ ಸಾವಯವ ಗೊಬ್ಬರ, ಎರೆಹುಳು ಗೊಬ್ಬರ, ಸಿಟಿ ಕಾಂಪೋಸ್ಟ್ ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ಶೇ. 50ರ ರಿಯಾಯಿತಿಯಲ್ಲಿ ವಿತರಣೆ ಮಾಡಲಾಗುವುದು.







### ಬಜೆಟ್‌ನಲ್ಲಿ ಕೃಷಿಗೆ ಒತ್ತು

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ 2017–18ನೇ ಸಾಲಿನ ಬಜೆಟ್‌ನಲ್ಲಿ ಕೃಷಿಗೆ 5,080 ಕೋಟಿ ರೂ. ಅನುದಾನವನ್ನು ಪ್ರಕಟಿಸಲಾಗಿದೆ.

- ಕೃಷಿ ಭಾಗ್ಯ ಯೋಜನೆ ಕರಾವಳಿ, ಮಲೆನಾಡು ಪ್ರದೇಶಗಳ ಎಲ್ಲಾ ತಾಲೂಕುಗಳಿಗೆ ವಿಸ್ತರಣೆ. ಅನುದಾನ: ರೂ.600 ಕೋಟಿ
- ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ 31.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಣೆ
- ಹನಿ, ತುಂತುರು ನೀರಾವರಿ ಘಟಕಕ್ಕೆ ಸಹಾಯ ಧನ ರೂ.375 ಕೋಟಿ
- ಕೃಷಿ ಯಂತ್ರಧಾರೆ ಕಾರ್ಯಕ್ರಮ ಹೋಬಳಿಗೆ ವಿಸ್ತರಣೆ. ಅನುದಾನ: ರೂ.122 ಕೋಟಿ
- ಕೃಷಿಯಲ್ಲಿ ಯಂತ್ರೋಪಕರಣ ಬಳಕೆಗೆ ಉತ್ತೇಜನಕ್ಕಾಗಿ ರೈತರ ಖಾತೆಗೆ ಪ್ರೋತ್ಸಾಹ ಧನ. ಅನುದಾನ: ರೂ.100 ಕೋಟಿ
- ಗ್ರಾಮೀಣ ಯುವಕರನ್ನು ಕೃಷಿಗೆ ಸೆಳೆಯಲು ಗ್ರಾಮೀಣ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರ ಸ್ಥಾಪನೆ. ಅನುದಾನ: ರೂ.10 ಕೋಟಿ
- ತೋಟಗಾರಿಕೆ ಬೆಳೆ ಉತ್ಪಾದನೆ 87 ರೈತ ಉತ್ಪಾದನಾ ಸಂಸ್ಥೆ ರಚನೆ
- 87 ಸಾವಿರ ರೈತರನ್ನು ಒಳಗೊಂಡ ರೈತ ಉತ್ಪಾದನಾ ಸಂಸ್ಥೆ
- 1.3 ಲಕ್ಷ ಹೆಕ್ಟೇರ್‌ನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಕೆ
- 20 ಸಾವಿರ ಎಕರೆಗೆ ತೋಟಗಾರಿಕೆ ಬೆಳೆಗಳ ವಿಸ್ತರಣೆ
- 5 ಕೋಟಿ ವೆಚ್ಚದಲ್ಲಿ 40 ಲಕ್ಷ ಉತ್ತಮ ಗುಣಮಟ್ಟದ ಸಸಿ ನೆಡುವ ಸಾಮಗ್ರಿ ವಿತರಣೆ
- 418 ತೋಟಗಳ ಸುಧಾರಣೆಗೆ ಮುಂದಿನ 5 ವರ್ಷದಲ್ಲಿ 10 ಕೋಟಿ
- 100 ಮಾದರಿ ತೋಟಗಳ ಅಭಿವೃದ್ಧಿ ಕಾರ್ಯಕ್ಕೆ ಪ್ರೋತ್ಸಾಹ
- 100 ಮಾದರಿ ತೋಟಗಳ ಅಭಿವೃದ್ಧಿ ಕಾರ್ಯ

ಸಂಬಂಧಿತ ನಾನಾ ಇಲಾಖೆಗಳ ಯೋಜನೆಗಳನ್ನು ಸಮ್ಮಿಲನಗೊಳಿಸಿ 2014–15ನೇ ಸಾಲಿನಲ್ಲಿ 9 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇದನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಮಿಷನ್ ಮೋಡ್ ಮಾದರಿಯಲ್ಲಿ ಹಂತ ಹಂತವಾಗಿ ಐದು ವರ್ಷಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.

ಕೃಷಿ, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ರೇಷ್ಮೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ, ಸಹಕಾರ ಹಾಗೂ ಅರಣ್ಯ ಇಲಾಖೆಗಳು ತಮ್ಮ ಚಾಲ್ತಿಯಲ್ಲಿರುವ ಯೋಜನೆಗಳೊಂದಿಗೆ ಈ ಯೋಜನೆಯನ್ನೂ ಸಹ ಅನುಷ್ಠಾನಗೊಳಿಸಲಿವೆ.

**ಕೃಷಿ ಹೊಂಡ ನಿರ್ಮಾಣ:**

ರಾಜ್ಯದ 25 ಜಿಲ್ಲೆಗಳ 129 ತಾಲ್ಲೂಕುಗಳಲ್ಲಿ 'ಕೃಷಿ ಭಾಗ್ಯ' ಯೋಜನೆ ಜಾರಿಗೊಳಿಸುವ ಮೂಲಕ 66 ಸಾವಿರ ಕೃಷಿ ಹೊಂಡಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆ. ಮಣ್ಣಿನ ಫಲವತ್ತತೆ ಕಾಪಾಡಲು 'ಸಾವಯವ ಭಾಗ್ಯ ಯೋಜನೆ' ಜಾರಿಗೊಳಿಸಿದೆ. ಆಯ್ದ 79 ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ 566 ಹೋಬಳಿಗಳಲ್ಲಿ ಅನುಷ್ಠಾನಗೊಳಿಸಿದ್ದು, ರಾಜ್ಯಾದ್ಯಂತ 54 ಸಾವಿರ ಸಾವಯವ ಕೃಷಿಕರಿಂದ 64 ಸಾವಿರ ಹೆಕ್ಟೇರ್ ಪ್ರದೇಶ ಸಾವಯವ ಕೃಷಿ ಪದ್ಧತಿಗೆ ಪರಿವರ್ತನೆ.

ಇದರ ಜೊತೆಗೆ, ರಾಜ್ಯದ ಗ್ರಾಮೀಣ ಜನರ ಜೀವನಾಧಾರ ಉತ್ತಮಪಡಿಸಲು 'ಭೂಚೇತನ ಪ್ಲಸ್' ಎಂಬ ನೂತನ ಯೋಜನೆ ಪ್ರಾಯೋಗಿಕವಾಗಿ ರಾಜ್ಯದ ಎಂಟು ಜಿಲ್ಲೆಗಳಲ್ಲಿ ಈ ವರ್ಷದಿಂದ ಪ್ರಾರಂಭ ಮಾಡಲಾಗಿದೆ.

**ಯೋಜನೆಯ ವ್ಯಾಪ್ತಿ ಎಷ್ಟು?**

ರಾಜ್ಯದ 23 ಜಿಲ್ಲೆಗಳಲ್ಲಿ ಈಶಾನ್ಯ ಶುಷ್ಕ ವಲಯ, ಉತ್ತರ ಒಣ ವಲಯ, ಮಧ್ಯಮ ಒಣ ವಲಯ, ಪೂರ್ವ ಒಣ ವಲಯ ಮತ್ತು ದಕ್ಷಿಣ ಒಣ ವಲಯ ಎಂದು ಐದು ವಲಯಗಳನ್ನು ಗುರುತಿಸಿದ್ದು, ಕಲಬುರಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಗದಗ, ಧಾರವಾಡ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಹಾಸನ, ಚಿಕ್ಕಮಗಳೂರು, ಬೆಂಗಳೂರು (ಗ್ರಾ), ಬೆಂಗಳೂರು(ನಗರ), ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ 105 ತಾಲೂಕು ಇದರ ವ್ಯಾಪ್ತಿಗೆ ಒಳಪಟ್ಟಿವೆ.

**ಭೌಗೋಳಿಕ ವಿಸ್ತೀರ್ಣ ಎಲ್ಲೆಲ್ಲಿ? ಎಷ್ಟೆಷ್ಟು?**

ಐದೂ ವಲಯಗಳು ಒಟ್ಟು 120.3 ಲಕ್ಷ ಹೆಕ್ಟೇರ್ ಭೌಗೋಳಿಕ ಕ್ಷೇತ್ರವನ್ನು ಹೊಂದಿದ್ದು, ಈ ಪೈಕಿ ಶೇ.60 ಕ್ಷೇತ್ರ ಸಾಗುವಳಿಯಾಗುತ್ತಿದೆ. ಉಳಿದ ಶೇ.40 ಭಾಗ ಬೀಳು ಭೂಮಿಯಾಗಿದೆ. ಈ ವಲಯಗಳಲ್ಲಿ ವಾರ್ಷಿಕ ಸರಾಸರಿ ಮಳೆ 450ರಿಂದ 850 ಮಿ.ಮೀ. ಆಗಿದ್ದು ಸಣ್ಣ, ಅತಿ ಸಣ್ಣ ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡದ ರೈತರಿಗೆ ಈ ಯೋಜನೆಯಲ್ಲಿ ವಿಶೇಷ ಆದ್ಯತೆ ದೊರೆಯಲಿದೆ.

**'ಕೃಷಿಭಾಗ್ಯ' ನೀತಿಯ ಉದ್ದೇಶ**

- ಮಳೆಯಾಶ್ರಿತ ಕೃಷಿಯಲ್ಲೂ ರೈತರು ಅಧಿಕ ಲಾಭ ಪಡೆಯುವಂತೆ ಮಾಡುವುದು

# ಮುಖ್ಯಮಂತ್ರಿಗಳ ರೈತಪರ ಚಿಂತನೆ



2015–16ರಲ್ಲಿ ಮೊದಲ ಬಾರಿಗೆ ಕೃಷಿ ಸಚಿವ ಕೃಷ್ಣ ಬೈರೇಗೌಡ ಅವರ ಆಸಕ್ತಿಯಿಂದ ರೂಪಿತವಾಗಿದ್ದೇ ಕೃಷಿ ಭಾಗ್ಯ ಯೋಜನೆ. ರಾಜ್ಯದ 1 ಲಕ್ಷ ಕುಟುಂಬಕ್ಕೆ ಇದು ಅನುಕೂಲ ತಂದಿದೆ. ಕೃಷಿ ಹೊಂಡ ಯೋಜನೆ ಅತ್ಯಂತ ಉಪಯುಕ್ತ ಯೋಜನೆಯಾಗಿದೆ ಎಂದು ಕೃಷಿಕರೇ ಹೇಳಿಕೊಳ್ಳುತ್ತಿದ್ದಾರೆ.

ರೈತ ಸ್ವಾವಲಂಬಿಯಾಗದಿದ್ದರೆ, ನಮ್ಮ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ರೈತರನ್ನು ನಾವು ಮರೆತರೆ, ಆಹಾರ ಉತ್ಪಾದನೆ ಸಾಧ್ಯವಿಲ್ಲ. ರಾಜಸ್ಥಾನ ರಾಜ್ಯ ಬಿಟ್ಟರೆ ಅತಿ ಹೆಚ್ಚು ಒಣಭೂಮಿ ಇರುವುದು ಕರ್ನಾಟಕದಲ್ಲಿಯೇ. ರಾಜ್ಯದಲ್ಲಿ 1.21 ಲಕ್ಷ ಹೆ. ಕೃಷಿ ಯೋಗ್ಯ ಭೂಮಿ ಇದೆ. ಈ ಪೈಕಿ ಶೇ. 66ರಿಂದ ಶೇ. 70ರಷ್ಟು ಒಣಭೂಮಿ ಬೇಸಾಯಕ್ಕೆ ಒಳಪಟ್ಟಿದೆ. ಮಳೆಯಾಶ್ರಿತ ರೈತರೇ ಹೆಚ್ಚಾಗಿ ಇರುವುದರಿಂದ, ದೊಡ್ಡ ಸಂಖ್ಯೆಯಲ್ಲಿರುವ ರೈತರ ಅಭಿವೃದ್ಧಿ ನಿಟ್ಟಿನಲ್ಲಿ ನಮ್ಮ ಸರ್ಕಾರ ಅಧ್ಯಯನ ನಡೆಸಿಯೇ ಕೃಷಿ ಭಾಗ್ಯ ಯೋಜನೆಯನ್ನು ಜಾರಿಗೊಳಿಸಿದೆ.

ವ್ಯರ್ಥವಾಗಿ ಹರಿದು ಹೋಗುವ ಮಳೆ ನೀರನ್ನು ಸಂಗ್ರಹಿಸಿ ಪಂಪ್‌ಸೆಟ್, ಸ್ಪ್ರಿಂಕ್ಲರ್ ಅಳವಡಿಸಿಕೊಂಡು ರೈತರು ನೀರು ಬಳಸುತ್ತಿದ್ದಾರೆ. ಒಣಭೂಮಿ ಆಶ್ರಿತ ರೈತರಿಗೆ ಕೃಷಿ ಭಾಗ್ಯ ಯೋಜನೆ ವರದಾನವಾಗಿದ್ದು, ಇದಕ್ಕಾಗಿ ರೂ.1,121 ಕೋಟಿ ಅನುದಾನವನ್ನು ನಮ್ಮ ಸರ್ಕಾರ ಒದಗಿಸಿದೆ. ಕೃಷಿ ಹೊಂಡ ಮಾಡಿಕೊಂಡಿರುವ ರೈತರು ಕನಿಷ್ಠ 3ರಿಂದ 8 ಎಕರೆಗೆ ನೀರು ಪೂರೈಸಿಕೊಂಡು, ಬೆಳೆಯನ್ನು ಪಡೆಯುತ್ತಿದ್ದಾರೆ.

ಕೃಷಿಹೊಂಡ, ಪಾಲಿಹೌಸ್, ನೆರಳು ಪರದೆ ಘಟಕಕ್ಕೆ ವ್ಯಾಪಕ ಬೇಡಿಕೆ ಸಿಗುತ್ತಿದೆ. ಬೇರೆ ಇಲಾಖೆಗೆ ಅನುದಾನದ ಕೊರತೆಯಾದರೂ ಚಿಂತೆಯಿಲ್ಲ, ಕೃಷಿ ಇಲಾಖೆಗೆ ಹೆಚ್ಚಿನ ಅನುದಾನ ನೀಡುವಂತೆ ಆರ್ಥಿಕ ಇಲಾಖೆಗೆ ಸೂಚನೆ ನೀಡಲಾಗಿದೆ.

ಕೃಷಿ ಯಂತ್ರಧಾರೆ ಕಾರ್ಯಕ್ರಮ ನಮ್ಮ ಸರ್ಕಾರದ ಮಹತ್ವದ ಕಾರ್ಯಕ್ರಮವಾಗಿದೆ. ಲಕ್ಷಾಂತರ ರೈತರಿಗೆ ನಾವು ಕೃಷಿ ಯಂತ್ರೋಪಕರಣಗಳನ್ನು ಕಡಿಮೆ ಬಾಡಿಗೆ ದರದಲ್ಲಿ ಒದಗಿಸುತ್ತಿದ್ದೇವೆ. ಎಲ್ಲೆಲ್ಲಿ ಕೃಷಿ ಯಂತ್ರವನ್ನು ಬಳಸಬೇಕಾಗಿದೆಯೋ, ಅಲ್ಲಲ್ಲಿ, ಯಂತ್ರೋಪಕರಣಗಳನ್ನು ರೈತರು ಬಳಸಬೇಕು. ಕಡಿಮೆ ಖರ್ಚು, ಅಧಿಕ ಇಳುವರಿ ಇದೇ ರೈತರ ಮೂಲ ಮಂತ್ರವಾಗಬೇಕು.

– **ಮುಖ್ಯಮಂತ್ರಿ ಸಿದ್ದರಾಮಯ್ಯ**



### 132 ತಾಲೂಕುಗಳಲ್ಲಿ ಅನುಷ್ಠಾನ

ಕೃಷಿ ಭಾಗ್ಯ ಯೋಜನೆಯನ್ನು ರಾಜ್ಯದ 25 ಜಿಲ್ಲೆಗಳ 132 ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿ ಹೊಂಡದ ಚಟುವಟಿಕೆ ಸೇರಿದಂತೆ ಜಲಾನಯನ ಕಾಮಗಾರಿಗಳ ಅನುಷ್ಠಾನದ ಕುರಿತು ಅರಿವು ಮೂಡಿಸಲು ಇಲಾಖೆ ವತಿಯಿಂದ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಬೀದಿನಾಟಕ, ಜಾಥ, ಗೋಡೆ ಬರಹ ಮತ್ತು ಗ್ರಾಮ ಸಭೆಗಳನ್ನು ಆಯೋಜಿಸುವುದರ ಮೂಲಕ ಅರಿವನ್ನು ಮೂಡಿಸಲಾಗುತ್ತಿದೆ.

– **ಕೃಷ್ಣ ಬೈರೇಗೌಡ**, ಕೃಷಿ ಸಚಿವ



# ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳು

ಕೃಷಿಭಾಗ್ಯ ಯೋಜನೆ ಹೊರತುಪಡಿಸಿ ರಾಜ್ಯ ಮತ್ತು ಕೇಂದ್ರ ಸರಕಾರಗಳು ರೈತರಿಗಾಗಿ ಹಮ್ಮಿಕೊಂಡಿರುವ ಕೆಲ ಮಹತ್ವದ ಯೋಜನೆಗಳು ಹೀಗಿವೆ:

**ತರಬೇತಿ ಕಾರ್ಯಕ್ರಮಗಳು:**

ರೈತರಿಗೆ ಮತ್ತು ಮಹಿಳಾ ರೈತರಿಗೆ ವೈಜ್ಞಾನಿಕ ಕೃಷಿ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕ್ಷೇತ್ರ ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ತರಬೇತಿ ಕೇಂದ್ರಗಳಲ್ಲಿ ತರಬೇತಿಗಳನ್ನು ಏರ್ಪಡಿಸಲಾಗುತ್ತಿದೆ.

**ಬೆಳೆ ಪ್ರಾತ್ಯಕ್ಷಿಕೆ:**

ಎನ್.ಎಫ್.ಎಸ್.ಎಂ., ಎನ್.ಎಂ.ಒ.ಒ.ಪಿ, ರಾಗಿ ಮತ್ತು ಜೋಳ ಉತ್ಪಾದನೆ ಹೆಚ್ಚಿಸುವ ಯೋಜನೆಯಡಿ ಸಂಶೋಧನಾಧಾರಿತ ನವೀನ ತಾಂತ್ರಿಕತೆಗಳನ್ನು ರೈತರ ಜಮೀನುಗಳಲ್ಲಿ ಅಳವಡಿಸಿ ರೈತ ಸಮುದಾಯಕ್ಕೆ ಪರಿಚಯಿಸಲಾಗುತ್ತಿದೆ.

**ಮಣ್ಣು ಆರೋಗ್ಯ ಅಭಿಯಾನ ಯೋಜನೆ:**

ಮಣ್ಣು ಆರೋಗ್ಯ ಕೇಂದ್ರಗಳಲ್ಲಿ ಮಣ್ಣು ಮಾದರಿಗಳನ್ನು ಇಲಾಖಾವತಿಯಿಂದ ವಿಶ್ಲೇಷಣೆ ಮಾಡಿ ಅವುಗಳ ಗುಣಮಟ್ಟದ ಬಗ್ಗೆ ರೈತರಿಗೆ ಮಾಹಿತಿಯನ್ನು ಒದಗಿಸಲಾಗುತ್ತಿದೆ.

**ಕೃಷಿ ಪರಿಕರಗಳು ಮತ್ತು ಗುಣನಿಯಂತ್ರಣ ಯೋಜನೆ:**

ಗುಣಮಟ್ಟದ ಬಿತ್ತನೆ ಬೀಜಗಳನ್ನು, ಲಘು ಪೋಷಕಾಂಶಗಳನ್ನು, ಜಿಪ್ಸಂ, ಸಾವಯವ ಗೊಬ್ಬರಗಳನ್ನು, ಜೈವಿಕ ಕೀಟನಾಶಕಗಳನ್ನು, ಹಾಗೂ ಸಸ್ಯ ಸಂರಕ್ಷಣಾ ಔಷಧಿ, ಉಪಕರಣಗಳನ್ನು ಶೇ. 50ರ ರಿಯಾಯಿತಿ ದರದಲ್ಲಿ ಎಲ್ಲಾ ರೈತರಿಗೂ ವಿತರಿಸಲಾಗುತ್ತಿದೆ.

**ಕೃಷಿ ಯಾಂತ್ರೀಕರಣ:**

ವೈಜ್ಞಾನಿಕವಾಗಿ, ದೊಡ್ಡ ಪ್ರಮಾಣದಲ್ಲಿ ಯಾಂತ್ರೀಕರಣ ಕೃಷಿ ಮಾಡಲು ಇಚ್ಛೆಯುಳ್ಳ ರೈತರಿಗೆ ಯಂತ್ರಚಾಲಿತ ಕೃಷಿ ಉಪಕರಣಗಳು, ಪವರ್ ಟಿಲ್ಲರ್ ಮತ್ತು ಒಕ್ಕಣೆ ಯಂತ್ರಗಳ ಖರೀದಿಗೆ ಗರಿಷ್ಠ ಮಿತಿಯೊಳಗೆ ಸಾಮಾನ್ಯ ರೈತರಿಗೆ ಶೇ. 50 ಹಾಗೂ ಪ.ಜಾತಿ/ಪ.ಪಂಗಡ ರೈತರಿಗೆ ಶೇ. 90ರ ರಿಯಾಯಿತಿಯಲ್ಲಿ ನೀಡಲಾಗುತ್ತಿದೆ.

**ಕೃಷಿ ಸಂಸ್ಕರಣೆ:**

ಕೃಷಿ ಸಂಸ್ಕರಣಾ ಘಟಕಗಳಾದ ದಾಲ್ ಪ್ರೋಸೆಸರ್, ರಾಗಿ ಕ್ಲೀನಿಂಗ್ ಮೆಷಿನ್, ಫ್ಲೋರ್ಮಿಲ್ ಇತ್ಯಾದಿಗಳನ್ನು ಮತ್ತು ಕಟಾವಿನ ನಂತರ ಕೃಷಿ ಉತ್ಪನ್ನಗಳನ್ನು ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಲು ಟಾರ್ಪಲಿನ್‌ಗಳನ್ನು ಸಾಮಾನ್ಯ ರೈತರಿಗೆ ಶೇ. 50ರ ಸಹಾಯಧನ ಹಾಗೂ ಪ.ಜಾತಿ/ಪ.ಪಂಗಡ ರೈತರಿಗೆ ಶೇ. 90ರ ರಿಯಾಯಿತಿಯಲ್ಲಿ ವಿತರಣೆ ಮಾಡಲಾಗುತ್ತಿದೆ.

**ಸೂಕ್ಷ್ಮ ನೀರಾವರಿ ಯೋಜನೆ:**

ನೀರಿನ ಮಿತಬಳಕೆಗಾಗಿ ಎಲ್ಲಾ ವರ್ಗದ ರೈತರಿಗೆ ಶೇ. 90ರ ರಿಯಾಯಿತಿ ಸೂಕ್ಷ್ಮ ನೀರಾವರಿ ಘಟಕಗಳಾದ ಹನಿ ಹಾಗೂ ತುಂತುರು ನೀರಾವರಿ ಘಟಕಗಳ ವಿತರಣೆ ಮಾಡಲು ಅವಕಾಶವಿರುತ್ತದೆ.

**ಕೃಷಿ ಯಂತ್ರಧಾರೆ:**

ರೈತರಿಗೆ ಸಕಾಲದಲ್ಲಿ ಮತ್ತು ಕಡಿಮೆ ಬಾಡಿಗೆ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲು ಹೋಬಳಿ ಮಟ್ಟದಲ್ಲಿ ಕೃಷಿ ಉಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

**ಸಾವಯವ ಕೃಷಿ ಯೋಜನೆ:**

ಪ್ರತಿ ಹೋಬಳಿಯಲ್ಲಿ 100 ಹೆಕ್ಟೇರ್ ಯೋಜನಾ ಪ್ರದೇಶದಲ್ಲಿ ರೈತರುಗಳಿಗೆ ಸಾವಯವ ಕೃಷಿಗೆ ಪೂರಕವಾದ ಘಟಕಗಳ ಸ್ಥಾಪನೆಗೆ ಸಾಮಾನ್ಯ ರೈತರಿಗೆ ಶೇ. 50 ಹಾಗೂ ವಿಶೇಷ ಘಟಕ ಹಾಗು ಗಿರಿಜನ ಉಪಯೋಜನೆಯಡಿಯಲ್ಲಿನ ರೈತರುಗಳಿಗೆ ಶೇ. 90 ರಂತೆ ಸಹಾಯಧನ ನೀಡಲಾಗುತ್ತಿದೆ.

**ಕೃಷಿ ಅಭಿಯಾನ ಕಾರ್ಯಕ್ರಮ:**

ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸಲು, ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ ಮಾಡಿಕೊಳ್ಳಲು ವಿಜ್ಞಾನಿಗಳೊಂದಿಗೆ ರೈತರ ಸಂವಾದದೊಂದಿಗೆ ಒಟ್ಟು ಮೂರು ದಿನಗಳ ಕಾರ್ಯಕ್ರಮವನ್ನು ಹೋಬಳಿ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

**ಕರ್ನಾಟಕ ರಾಜ್ಯ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ:**

'ಅತಿವೃಷ್ಟಿ, ಅನಾವೃಷ್ಟಿ, ಅಕಾಲಿಕ ಮಳೆ, ಮುಂತಾದ ಪ್ರಕೃತಿ ವಿಕೋಪಗಳು ಸೇರಿದಂತೆ ಹಲವಾರು ಕಾರಣಗಳಿಂದ ಬೆಳೆ ನಷ್ಟ ಉಂಟಾದಾಗ ರೈತನ ನೆರವಿಗೆ ಬರಲು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು 2016–17ನೇ ಸಾಲಿನಿಂದ ಜಾರಿಗೆ ತರಲಾಗಿದೆ.

ಬೆಳೆ ಸಾಲ ಪಡೆದ ರೈತರಿಗೆ ವಿಮೆ ಹೊಂದುವುದು ಕಡ್ಡಾಯವಾಗಿದ್ದು, ಬೆಳೆ ಸಾಲ ಪಡೆಯದ ರೈತರಿಗೆ ಐಚ್ಛಿಕ. 2016ರ ಮುಂಗಾರು ಹಂಗಾಮಿನಲ್ಲಿ ಈ ಜಿಲ್ಲೆಯ 13 ಬೆಳೆಗಳಾದ ಭತ್ತ (ನೀರಾವರಿ), ನೆಲಗಡಲೆ (ಶೇಂಗಾ) (ಮಳೆ ಆಶ್ರಿತ), ಮುಸುಕಿನ ಜೋಳ (ನೀರಾವರಿ), ಮುಸುಕಿನ ಜೋಳ (ಮಳೆ ಆಶ್ರಿತ), ಅವರೆ (ಮಳೆಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆ ಆಶ್ರಿತ), ಹುರುಳಿ (ಮಳೆಆಶ್ರಿತ), ತೊಗರಿ (ಮಳೆ ಆಶ್ರಿತ), ಆಲೂಗಡ್ಡೆ (ನೀರಾವರಿ), ಈರುಳ್ಳಿ (ನೀರಾವರಿ), ಎಲೆಕೋಸು, ಟೊಮ್ಯಾಟೊ (ನೀರಾವರಿ), ಇವುಗಳನ್ನು ಅಧಿಸೂಚಿಸಿದೆ.

**ಕೃಷಿ ಪ್ರಶಸ್ತಿ–ರೈತರಿಗೆ ಉತ್ಪಾದನಾ ಬಹುಮಾನಗಳು:**

ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ರೈತರಲ್ಲಿ ಒಂದು ಆರೋಗ್ಯಕರ ಸ್ಪರ್ಧಾಮನೋಭಾವವನ್ನು ಉಂಟುಮಾಡಿ ಅತಿ ಹೆಚ್ಚು ಇಳುವರಿ ಪಡೆಯುವ ರೈತರನ್ನು ಬಹುಮಾನ ನೀಡುವ ಮೂಲಕ ಉತ್ತೇಜನ ನೀಡಲಾಗುತ್ತಿದೆ.

**ರೈತರ ಆತ್ಮಹತ್ಯೆಗೆ ಪರಿಹಾರ:**

ಸರ್ಕಾರಿ ಸ್ವಾಮ್ಯದ ಅಥವಾ ಮಾನ್ಯತೆ ಪಡೆದ ಅಧಿಕೃತ ಸಾಲ ನೀಡುವ ಸಂಸ್ಥೆಗಳಿಂದ ಅತಿವೃಷ್ಠಿ, ಅನಾವೃಷ್ಠಿ, ಕೀಟಬಾಧೆ, ರೋಗಭಾದೆ ಅಥವಾ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರೆಯದೇ ಪಡೆದ ಸಾಲವನ್ನು ತೀರಿಸಲಾಗದೇ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವು ಉದ್ಭವಿಸಿದಾಗ ಅಂತಹ ಮೃತ ರೈತನ ಕುಟುಂಬಕ್ಕೆ ರೂ. 5 ಲಕ್ಷ ಸಹಾಯಧನ ಒದಗಿಸಲಾಗುವುದು.

**ರೈತರ ಆಕಸ್ಮಿಕ ಮರಣ ಹಾಗೂ ಬಣವೆಗಳ ನಷ್ಟ ಪರಿಹಾರ ಯೋಜನೆ:**

ರೈತರು ಹಾಗೂ ಕೃಷಿ ಕಾರ್ಮಿಕರು ಹಾವು ಕಡಿತದಿಂದ, ಮರಗಳಿಂದ ಬಿದ್ದು ಅಥವಾ ಇತರೆ ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದದಲ್ಲಿ ಪ್ರತಿ ಅರ್ಹ ಕುಟುಂಬಗಳಿಗೆ 1 ಲಕ್ಷ ರೂ ಸಹಾಯಧನವನ್ನು ಹಾಗೂ ಬೆಂಕಿ ಆಕಸ್ಮಿಕಗಳಿಂದ ಹುಲ್ಲು ಮೆದೆ/ಬಣವೆಗಳು ನಷ್ಟವಾದ ಪ್ರಕರಣಗಳಿಗೆ ಗರಿಷ್ಟ ರೂ.10,000ವರೆಗೆ ಈ ಯೋಜನೆಯಡಿ ಪರಿಹಾರ ನೀಡಲಾಗುವುದು.

**ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ:**

ಜಲಾನಯನ ಕಾಮಗಾರಿಗಳಾದ ಮಣ್ಣು ಮತ್ತು ನೀರು ಸಂರಕ್ಷಣಾ ಘಟಕಗಳಾದ ಬದು ನಿರ್ಮಾಣ, ಕೃಷಿ ಹೊಂಡ, ನಾಲಾಬದು, ಚೆಕ್‌ಡ್ಯಾಂ, ಗೋಕಟ್ಟೆ ಇತ್ಯಾದಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಹಾಗೂ ನೀರಿನ ಮಿತಬಳಕೆಗಾಗಿ ಲಘು ನೀರಾವರಿ ಘಟಕಗಳಾದ ಹನಿ ಮತ್ತು ತುಂತುರು ನೀರಾವರಿ ಘಟಕಗಳಿಗೆ ಶೇ. 90 ರಿಯಾಯಿತಿಯನ್ನು ಒದಗಿಸಲಾಗುತ್ತಿದೆ.

**ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆಬೆಳೆಗಳ ಅಭಿಯಾನ:**

ಸದರಿ ಯೋಜನೆಯಡಿ ಎಣ್ಣೆಕಾಳು ಸಮಗ್ರ ಅಭಿವೃದ್ದಿಗೆ ಒತ್ತು ನೀಡಲಾಗಿದೆ. ಸಮತೋಲನ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಸಾಧಿಸಲು ಎಣ್ಣೇಕಾಳು, ಮತ್ತು ಮುಸುಕಿನ ಜೋಳ ಬೆಳೆಯುವ ರೈತರಿಗೆ ಬಿತ್ತನೆ ಬೀಜ, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಸಸ್ಯ ಸಂರಕ್ಷಣಾ ಹಾಗೂ ಕೃಷಿ ಉಪಕರಣಗಳು, ಮಣ್ಣು ಸುಧಾರಕಗಳು, ಲಘುಪೋಷಕಾಂಶಗಳು ಇತ್ಯಾದಿಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

**ಭೂಚೇತನ ಯೋಜನೆ:**

ಖುಷ್ಕಿ ಪ್ರದೇಶದಲ್ಲಿ ರೈತರಿಗೆ ಈ ಯೋಜನೆಯಡಿ ಬರುವ ರೈತರಿಗೆ ಮಣ್ಣು ಪರೀಕ್ಷೆ ಆಧಾರದ ಮೇಲೆ ಮಣ್ಣು ಸುಧಾರಕಗಳು ಮತ್ತು ಲಘು ಪೋಷಕಾಂಶಗಳನ್ನು ಬಳಸಲು ರೈತರ ಮನ ಒಲಿಸಿ ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ.

**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:**

ಈ ಯೋಜನೆಯ ಕೃಷಿ ಯಾಂತ್ರೀಕರಣ ಕಾರ್ಯಕ್ರಮದಡಿ ಕೃಷಿ ಯಂತ್ರೋಪಕರಣಗಳನ್ನು ಶೇಕಡ 50 ಅಥವಾ ಸರ್ಕಾರವು ನಿಗದಿಪಡಿಸಿರುವ ಗರಿಷ್ಠ ರಿಯಾಯಿತಿ ಇವು ಎರಡರಲ್ಲಿ ಯಾವುದು ಕಡಿಮೆಯೋ ಆ ರಿಯಾಯಿತಿಯಲ್ಲಿ ನೀಡಲಾಗುವುದು. ಹಾಗೂ ವಿವಿಧ ಬಿತ್ತನೆ ಬೀಜಗಳ ಪ್ರಮಾಣಿತ ಬಿತ್ತನೆ ಬೀಜಗಳನ್ನು ಶೇಕಡ 50 ಅಥವಾ ಸರ್ಕಾರವು ಪ್ರತಿ ಕೆಜಿಗೆ ನಿಗದಿಪಡಿಸಿರುವ ಗರಿಷ್ಠ ರಿಯಾಯಿತಿಯಲ್ಲಿ ರೈತರಿಗೆ ಒದಗಿಸಲಾಗುವುದು

- ಮಳೆಯ ಬೆಳೆಯಲ್ಲೂ ಸುಸ್ಥಿರತೆ ತರಲು ಆದ್ಯತೆ ನೀಡುವುದು
- ಮಳೆ ನೀರಿನ ನಿರ್ವಹಣೆ ಮೂಲಕ ಕೃಷಿ ಉತ್ಪಾದನೆ
- ರೈತನ ಆದಾಯ ಹೆಚ್ಚಿಸುವುದರ ಜತೆಗೆ ಕೃಷಿ ಅವಲಂಬಿತ ಉದ್ಯೋಗಾವಕಾಶ ಹೆಚ್ಚಿಸುವುದು
- ಒಣಭೂಮಿ ತೋಟಗಾರಿಕೆ ಉತ್ತೇಜಿಸುವುದು

**ಯೋಜನೆಯ ಪ್ರಯೋಜನವೇನು?**

- ಅನಿಯಮಿತ ಮಳೆ/ಮಳೆ ಅನಿಶ್ಚಿತತೆಯಿಂದ ಪಾರಾಗಲು
- ಕ್ಷೀಣಿಸುತ್ತಿರುವ ಅಂತರ್ಜಲ ಸಂಪನ್ಮೂಲ ವೃದ್ಧಿಸಲು
- ಕಡಿಮೆಯಾಗುತ್ತಿರುವ ಮಣ್ಣಿನ ಫಲವತ್ತತೆ ಹೆಚ್ಚಿಸಲು
- ಕೃಷಿ ಕ್ಷೇತ್ರಕ್ಕೆ ಕೂಲಿಕಾರರ ಕೊರತೆ ನೀಗಿಸುವುದು
- ಸಾಗುವಳಿ ವೆಚ್ಚ ಕಡಿಮೆ ಮಾಡುವುದು
- ಕೃಷಿ ಯಂತ್ರೋಪಕರಣಗಳ ಕೊರತೆಯಿಂದ ರೈತರನ್ನು ಪಾರು ಮಾಡಲು

**ಅನುದಾನ ಬಿಡುಗಡೆ ಯಾವಾಗ?**

ಯೋಜನೆ ಅನುಷ್ಠಾನಗೊಳಿಸಿದ ಅಧಿಕಾರಿಗಳು ಪರಿಶೀಲಿಸಿದ ಬಳಿಕ ರೈತರ ಖಾತೆಗೆ ನೇರವಾಗಿ ಆನ್‌ಲೈನ್ ಮೂಲಕ ಹಣ ಜಮಾ ಮಾಡುವರು. ರಾಜ್ಯದಲ್ಲಿ ಪ್ರಸ್ತುತ 740ಕ್ಕೂ ಹೆಚ್ಚು ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ. ಅಂದಾಜು 53 ಲಕ್ಷಕ್ಕೂ ಹೆಚ್ಚು ರೈತ ಕುಟುಂಬಗಳು ಈ ಯೋಜನೆಯ ಪ್ರಯೋಜನ ಪಡೆಯುತ್ತಿವೆ.

ಕೃಷಿ ಭಾಗ್ಯ ಯೋಜನೆಯ ಘಟಕಗಳು ಒಟ್ಟು ಪ್ಯಾಕೇಜ್‌ನ್ನು ಎರಡು ಪ್ರಮುಖ ವರ್ಗಗಳಲ್ಲಿ ರೂಪಿಸಲಾಗಿದೆ. ಮಳೆ ನೀರು ಸಂಗ್ರಹಣೆ ಮತ್ತು ಸಂರಕ್ಷಿತ ನೀರಾವರಿಗೆ ವಿಶೇಷ ಪ್ಯಾಕೇಜ್ ರೂಪಿಸಲಾಗಿದೆ. ಇದರಡಿ ಪಾಲಿಥೀನ್/ಟಾರ್ಪಾಲಿನ್‌ಸಹಿತ ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ), ಕೃಷಿ ಹೊಂಡದಿಂದ ನೀರನ್ನು ಬಳಸಲು ಗರಿಷ್ಠ 5 ಎಚ್.ಪಿ. ಡೀಸೆಲ್ ಪಂಪ್‌ಸೆಟ್ ಅನ್ನು ಶೇ.80ರ ರಿಯಾಯಿತಿ ದರದಲ್ಲಿ ನೀಡಲಾಗುವುದು ಹಾಗೂ ಗರಿಷ್ಠ 2 ಎಚ್.ಪಿ. ಸಾಮರ್ಥ್ಯದ ಸೋಲಾರ್ ಪಂಪ್‌ಸೆಟ್ ಅಳವಡಿಸಲು ಶೇ.50ರಷ್ಟು ಸಹಾಯಧನ ನೀಡಲಾಗುತ್ತದೆ.

**ಪಾಲಿಹೌಸ್ ಸಹಿತ ಮಾದರಿ**

ಇದರಲ್ಲಿ ಸಹಾಯ ಅನುದಾನವು ಒಟ್ಟು ವೆಚ್ಚಕ್ಕೆ ತೋಟಗಾರಿಕೆ ಇಲಾಖೆಯ ಮಾರ್ಗಸೂಚಿ ಅನ್ವಯ ಗರಿಷ್ಠ ಶೇ.50ಕ್ಕೆ ಮಿತಿಗೊಳಿಸಿದೆ. ಈಗಾಗಲೇ ರೈತನು ಪಾಲಿಹೌಸ್ ಘಟಕವನ್ನು ಅಳವಡಿಸಿದ್ದಲ್ಲಿ ಉಳಿದ ಘಟಕಗಳಾದ ಕೃಷಿ ಹೊಂಡ, ಬದು ನಿರ್ಮಾಣ ಡೀಸೆಲ್ ಪಂಪ್‌ಸೆಟ್ ಹಾಗೂ ಲಘು ನೀರಾವರಿ ಘಟಕ ಅಳವಡಿಕೆಗೆ ಆದ್ಯತೆ ನೀಡಲಾಗುವುದು. ಈ ಘಟಕಗಳಿಗೆ ಸಾಮಾನ್ಯವರ್ಗದ ರೈತರಿಗೆ ಶೇ.80ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ, ಪಂಗಡದ ರೈತರಿಗೆ ಶೇ.90ರ ಸಹಾಯಧನ ನೀಡಲಾಗುವುದು.

**ಪಾಲಿಹೌಸ್‌ರಹಿತ ಮಾದರಿ**

ಸ್ಥಳದಲ್ಲಿಯೇ ಮಣ್ಣಿನ ತೇವಾಂಶ ಸಂರಕ್ಷಣೆಗಾಗಿ ಬದು, ಕೃಷಿ ಹೊಂಡ ನಿರ್ಮಾಣ. ಕೃಷಿ ಹೊಂಡದಲ್ಲಿ ಸಂಗ್ರಹಣೆಯಾದ ನೀರನ್ನು ಬಳಸಿಕೊಳ್ಳಲು ಗರಿಷ್ಠ 5 ಎಚ್‌ಪಿ ಸಾಮರ್ಥ್ಯದ ಡೀಸೆಲ್ ಪಂಪ್‌ಸೆಟ್ ಅಳವಡಿಕೆ. ಬೆಳೆಗಳಿಗೆ ನಾನಾ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿಗಾಗಿ ಬಳಸಿಕೊಳ್ಳಲು ರೈತರಿಗೆ ಗರಿಷ್ಠ ಒಂದು (1.0) ಹೆಕ್ಟೇರ್ ಪ್ರದೇಶಕ್ಕೆ ಬೇಕಾಗುವ ಲಘು ನೀರಾವರಿ ಘಟಕವನ್ನು ಒದಗಿಸಲಾಗುವುದು. ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ನಮೂನೆಗಳನ್ನು ಪಡೆದು ಅರ್ಜಿ ಸಲ್ಲಿಸಬಹುದು.

**ಸಾವಯವ ಭಾಗ್ಯ ಯೋಜನೆ**

ರಾಜ್ಯದಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಸಾವಯವ ಭಾಗ್ಯ ಯೋಜನೆ' ಯನ್ನು 2013–14ನೇ ಸಾಲಿನಿಂದ ಹಾಗೂ ಕೇಂದ್ರ ಪುರಸ್ಕೃತ 'ಪರಂಪರಾಗತ ಕೃಷಿ ವಿಕಾಸ' ಯೋಜನೆಯನ್ನು 2015–16ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

'ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ' ಯಲ್ಲಿ ಕೇಂದ್ರದ ನೆರವಿನ ಜೊತೆಗೆ ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ 845 ಕೋಟಿ ರೂ. ಒದಗಿಸಲಾಗಿದ್ದು, ಒಟ್ಟಾರೆ 31.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸೇರ್ಪಡೆಗೊಳಿಸಲಾಗುತ್ತದೆ. 1.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 2 ಹೆಕ್ಟೇರ್ ಪ್ರದೇಶದವರೆಗೆ ಶೇ.90 ರಷ್ಟು ಮತ್ತು 5 ಹೆಕ್ಟೇರ್ ಪ್ರದೇಶದವರೆಗೆ ಶೇ.50 ರಷ್ಟು ಸಹಾಯಧನದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ವಿತರಿಸಲು 375 ಕೋಟಿ ರೂ. ಒದಗಿಸಲಾಗಿದೆ.






ಕೃಷಿ ಯಂತ್ರಧಾರೆ ಕಾರ್ಯಕ್ರಮವನ್ನು ಹೋಬಳಿ ಮಟ್ಟಕ್ಕೆ ವಿಸ್ತರಿಸಲಾಗಿದ್ದು ಇದಕ್ಕಾಗಿ 122 ಕೋಟಿ ರೂ.ಗಳನ್ನು ಮೀಸಲಿರಿಸಿದೆ. ಭತ್ತ, ದ್ವಿದಳ ಧಾನ್ಯಗಳು ಮತ್ತು ಎಣ್ಣೆಬೀಜಗಳ ಉತ್ಪಾದನೆಯನ್ನು ಹೆಚ್ಚಿಸಲು ರೈತರ ಖಾತೆಗೆ ನೇರವಾಗಿ ಪ್ರೋತ್ಸಾಹಧನವನ್ನು ವರ್ಗಾಯಿಸಲು ಹಾಗೂ ತಾಂತ್ರಿಕತೆಯನ್ನು ಉತ್ತೇಜಿಸುವವರ ಅನುಕೂಲಕ್ಕೆ 100 ಕೋಟಿ ರೂ. ಮೀಸಲಿಡಲಾಗಿದೆ.

ಗ್ರಾಮೀಣ ಯುವಕರನ್ನು ಕೃಷಿಯ ಕಡೆಗೆ ಆಕರ್ಷಿಸಲು ಮತ್ತು ಸ್ಥಳೀಯವಾಗಿ ಸಣ್ಣ ಕೃಷಿ ಉಪಕರಣಗಳ ತಯಾರಿಕೆ ಸೌಲಭ್ಯದೊಂದಿಗೆ ಕೃಷಿಯಂತ್ರಗಳ ಬಳಕೆಯನ್ನು ಪ್ರೋತ್ಸಾಹಿಸಲು, ಪ್ರತಿ ತಾಲೂಕು ಕೇಂದ್ರದಲ್ಲಿ ಒಂದರಂತೆ 174 "ಗ್ರಾಮೀಣ ಕೃಷಿ ಯಂತ್ರೋಪಕರಣ/ ಸೇವಾ ಕೇಂದ್ರಗಳನ್ನು" ಸ್ಥಾಪಿಸಲು ಉದ್ದೇಶಿಸಿದೆ. ಈ ಕೇಂದ್ರಗಳ ಸ್ಥಾಪನೆಗೆ 10 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದ್ದು, ಪ್ರತಿ ಕೇಂದ್ರದ ಸ್ಥಾಪನೆಗೆ ಬ್ಯಾಂಕ್ ಲಿಂಕೇಜ್‌ನೊಂದಿಗೆ 5 ಲಕ್ಷ ರೂ.ಗಳ ಸಹಾಯಧನ ಅಥವಾ ಗರಿಷ್ಠ ಶೇ.50 ರಷ್ಟು ಮೊತ್ತವನ್ನು ಒದಗಿಸಲಾಗುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಗರಿಷ್ಠ ಶೇ.75 ರಷ್ಟು ಸಹಾಯಧನ ನೀಡಲಾಗಿದೆ.

ರೈತರಿಗೆ ರೈತ ಸಾರಥಿ ಯೋಜನೆ, ಆತ್ಮಹತ್ಯೆಗೆ ಶರಣಾದ ರೈತರ ಪತ್ನಿಗೆ 2,000 ರೂ. ಪಿಂಚಣಿ, ಶೇ. 3ರ ಬಡ್ಡಿದರದಲ್ಲಿ 10 ಲಕ್ಷ ರೂ.ವರೆಗೆ ಕೃಷಿ ಸಾಲ, ಅಪಘಾತದಲ್ಲಿ ಹಸು, ಎತ್ತು ಸಾವನ್ನಪ್ಪಿದರೆ 10,000 ರೂ ಪರಿಹಾರ, ಎಪಿಎಂಪಿಸಿಯಲ್ಲಿ ವೈಜ್ಞಾನಿಕವಾಗಿ ಹಣ್ಣು ಮಾಗಿಸುವ ವ್ಯವಸ್ಥೆಗೆ 10 ಕೋಟಿ ರೂ., ಪ್ರತಿ ತಾಲೂಕಿಗೆ ಒಂದರಂತೆ 174 ಗ್ರಾಮೀಣ ಕೃಷಿ ಯಂತ್ರೋಪಕರಣ ಕೇಂದ್ರ, ಹೋಬಳಿ ಮಟ್ಟದಲ್ಲಿ 250 ಕೇಂದ್ರ ಸ್ಥಾಪನೆ ಮಾಡಲಾಗುವುದು.

ಇಂತಹ ಹಲವಾರು ಮಹತ್ವದ ಹಾಗೂ ಉಪಯುಕ್ತ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ರಾಜ್ಯ ಸರ್ಕಾರ ರೈತರ ಸಮಗ್ರ ಅಭಿವೃದ್ಧಿಗೆ ಮುಂದಾಗಿದೆ.



# ಗ್ರಾಮ ಸ್ವರಾಜ್ಯ
## ಕರ್ನಾಟಕದ ಸಾಧನೆ



> ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಗ್ರಾಮ ಪಂಚಾಯ್ತಿ ಕಾಯ್ದೆಗೆ ಸಮಗ್ರ ತಿದ್ದುಪಡಿ ತರುವ ಮೂಲಕ ಹಳ್ಳಿಗಳಿಗೆ ಸ್ವರಾಜ್ಯ ತಂದುಕೊಡುವ ನಿಟ್ಟಿನಲ್ಲಿ ಕ್ರಾಂತಿಕಾರಿ ಹೆಜ್ಜೆಯನ್ನಿರಿಸಿದೆ. ಸ್ಥಳೀಯರಿಗೆ ಸಂಪೂರ್ಣ ಅಧಿಕಾರ ನೀಡುವ ಬೃಹತ್ ಕೆಲಸವನ್ನು ಸರ್ಕಾರ ಶಾಸನದ ಮೂಲಕ ಪೂರ್ಣಗೊಳಿಸಿದೆ. ಈಗ ಹಳ್ಳಿಗಳಿಂದ ನಗರಕ್ಕೆ ಬಂದವರು ತಮ್ಮ ತಮ್ಮ ಹಳ್ಳಿಗಳ ಅಭಿವೃದ್ಧಿಗೆ ಕೈಜೋಡಿಸಬೇಕು. ಯುವ ಜನಾಂಗ ಮನಸ್ಸು ಮಾಡಿದರೆ ಹಳ್ಳಿ-ನಗರದ ನಡುವೆ ಇರುವ ಅಂತರವನ್ನು ಹೋಗಲಾಡಿಸಬಹುದು.

ಎನ್. ಆರ್. ಶ್ರೀಶ

ಇದುವರೆಗೆ ಯಾವ ಸರ್ಕಾರವೂ ಕೈಗೊಳ್ಳದ ಕೆಲಸವನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೈಗೊಂಡಿದೆ. ಗ್ರಾಮೀಣ ಬದುಕಿಗೆ ಹೊಸ ರೂಪ ಕೊಡುವ ಮಹತ್ವಪೂರ್ಣ ಕೆಲಸವದು. ಈಗಿನ ತಿದ್ದುಪಡಿಯನ್ನು ನೋಡಿದರೆ ನಗರಕ್ಕೆ ಬಂದು ಉನ್ನತ ಶಿಕ್ಷಣ ಪಡೆದು ಖಾಸಗಿ ಕಂಪನಿಗಳನ್ನು ಸೇರಿರುವ ಯುವಕರು ಮತ್ತು ಯುವತಿಯರು ತಮ್ಮ ತಮ್ಮ ಗ್ರಾಮಗಳಿಗೆ ಹಿಂತಿರುಗಿ ಹೊಸ ಅಲೋಚನೆಗಳ ಮೂಲಕ ತಮ್ಮ ಗ್ರಾಮದ ಚಿತ್ರಣವನ್ನೇ ಬದಲಿಸಬಹುದು. ಪ್ರಸಕ್ತ ಸರ್ಕಾರ ಯುವ ಜನಾಂಗಕ್ಕೆ ಹಳ್ಳಿಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಿದೆ.

### ಗ್ರಾಮ ಸ್ವರಾಜ್ಯದ ನೈಜ ಪರಿಕಲ್ಪನೆ ಜಾರಿಗೆ

ಗ್ರಾಮ ಸ್ವರಾಜ್ಯವನ್ನು ವಾಸ್ತವಿಕ ನೆಲೆಗಟ್ಟಿನ ಆಧಾರದ ಮೇಲೆ ಅನುಷ್ಠಾನಗೊಳಿಸುವ ಉದ್ದೇಶದಿಂದ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ನು "ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್" ಎಂದು ಪುನರ್‌ನಾಮಕರಣಗೊಳಿಸಿ 79 ತಿದ್ದುಪಡಿಗಳನ್ನು ತರಲಾಗಿದೆ. ಈ ಮಸೂದೆಯಲ್ಲಿ ಹಲವಾರು ಕ್ರಾಂತಿಕಾರಕ ಅಂಶಗಳಿದ್ದು ಗ್ರಾಮೀಣ ಜನ-ಜೀವನ ಸುಧಾರಣೆಗೆ ಬಹುದೊಡ್ಡ ಕೊಡುಗೆ ಇದು.

### ಮುಕ್ತ ಸಮಾಜದತ್ತ

ಗ್ರಾಮಗಳನ್ನು ಶೋಷಣೆ ಮುಕ್ತ, ಭಯಮುಕ್ತ, ವ್ಯಾಜ್ಯಮುಕ್ತ, ಬಯಲು ಬಹಿರ್ದೆಸೆ ಮುಕ್ತ ಪರಿಸರಗಳನ್ನಾಗಿ ಪರಿವರ್ತಿಸುವ ಮೂಲಕ ಗ್ರಾಮೀಣಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳನ್ನು ಮತ್ತು ಗ್ರಾಮಸ್ಥರನ್ನು ಅಧಿಕಾರಯುಕ್ತರನ್ನಾಗಿ ಮಾಡಿ ಪ್ರಜಾಪ್ರಭುತ್ವದಲ್ಲಿ "ಪ್ರಜೆಗಳೇ ಪ್ರಭುಗಳು" ಎಂಬ ಆಶಯವನ್ನು ಕಾರ್ಯಗತಗೊಳಿಸುವ ಸಲುವಾಗಿ ಈ ಮಸೂದೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಯನ್ನು ತರುತ್ತದೆ.

ಪ್ರತಿ ಜನವಸತಿಯಿಂದ ಯೋಜನೆಗಳನ್ನು ರೂಪುಗೊಳಿಸಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಕ್ರೂಢೀಕರಿಸಿ ರಾಜ್ಯಮಟ್ಟದಲ್ಲಿ ಪೂರ್ಣ ಸ್ವರೂಪ ನೀಡುವ ಪರಿಣಾಮಕಾರಿ ಹೆಜ್ಜೆ ಇದು. ತನ್ಮೂಲಕ ಗ್ರಾಮೀಣ ಬದುಕಿನ ನೈಜ ಅಗತ್ಯಗಳನ್ನು ಪರಿಗಣಿಸುವ ವ್ಯವಸ್ಥೆ ಜಾರಿಗೆ ತರಲು ಈ ಕಾಯ್ದೆ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಈ ಉದ್ದೇಶ ಈಡೇರಿಕೆಗಾಗಿ ರಾಜ್ಯ ಹಣಕಾಸು ಆಯೋಗ ಶಿಫಾರಸ್ಸು ಮಾಡುವ ಅನುದಾನದಲ್ಲಿ ಪ್ರತಿಶತ 20ರಷ್ಟು ಅನುದಾನವನ್ನು ಮುಕ್ತ ಅನುದಾನವಾಗಿ ನೀಡುವುದರ ಮೂಲಕ ಅವರ ಆಶಯಗಳನ್ನು ಈಡೇರಿಸಲು ಪ್ರಯತ್ನಿಸಲಾಗುವುದು.

ಪಂಚಾಯತಿ ನೀತಿಯ ನಿರ್ದೇಶನಾ ತತ್ವಗಳು ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಈ ಮಸೂದೆಯ ಮೂಲಕ ಜಾರಿಗೆ ತರಲಾಗಿದೆ. ಸ್ಥಳೀಯ ಸಂಸ್ಥೆಗಳು ಶಾಸನಾತ್ಮಕ, ಕಾರ್ಯಕಾರಿ ಮತ್ತು ನ್ಯಾಯಿಕ ಕಾರ್ಯನಿರ್ವಹಣೆಯ ಅವಕಾಶವನ್ನು ಹೊಂದಿರಬೇಕೆಂದು ಪ್ರಯತ್ನಿಸಲಾಗಿದೆ. ಹಲವಾರು ಹೊಸ ಪರಿಕಲ್ಪನೆಗಳನ್ನು ಜಾರಿಗೆ ತರುವ ಈ ಮಸೂದೆಯು ಗ್ರಾಮೀಣ ಬದುಕಿನಲ್ಲಿ ಸ್ವಾವಲಂಬಿ, ಪರಸ್ಪರ ಗೌರವ-ಘನತೆ ಕಾಪಾಡುವ ಸಮಾನತೆಯನ್ನು ಸುನಿಶ್ಚಿತಗೊಳಿಸುತ್ತದೆ. ಪಾರದರ್ಶಕ ವ್ಯವಸ್ಥೆಯನ್ನು ಪಾಲ್ಗೊಳ್ಳುವಿಕೆಯ ಮೂಲಕ ಅನುಷ್ಠಾನಗೊಳಿಸುವ ಮತ್ತು ಕುಂದುಕೊರತೆ ನಿವಾರಣೆಗೆ ಸ್ಪಂದನಶೀಲ ಕಾರ್ಯವಿಧಾನ ಕಲ್ಪಿಸುವ ವ್ಯವಸ್ಥೆ ರೂಪಿಸಿ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ ದಿಸೆಯಲ್ಲಿ ಈ ತಿದ್ದುಪಡಿ ಅಸ್ತ್ರವಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವರಾದ ಎಚ್.ಕೆ. ಪಾಟೀಲ್ ಅವರ ಹೇಳುವಂತೆ, ಹಕ್ಕಿನ ಬದುಕಿನ ಕಡೆಗೆ ಗ್ರಾಮೀಣರನ್ನು ತರುವುದು ತಿದ್ದುಪಡಿಯಾದ ಕಾಯ್ದೆಯ ಉದ್ದೇಶ. ಗ್ರಾಮೀಣಾಭಿವೃದ್ಧಿಯ ಪುನರ್ ವ್ಯಾಖ್ಯಾನ ಈಗಿನ ಅಗತ್ಯವಾಗಿದೆ. 'ಜನರ ಬದುಕಿನ ಗುಣಮಟ್ಟವನ್ನು ಎತ್ತರಿಸುವ ಕೆಲಸ ಗುರುತಿಸುವುದು ಆಗಿರಲಿಲ್ಲ. ಕೇವಲ ಪಂಚಾಯತಿ ಕಟ್ಟಡ, ಸಭಾಭವನ, ರೋಡು-ಬೋರ್ಡು ಇವುಗಳ ಕಡೆಗೇ ನಮ್ಮ ಪಂಚಾಯತಿ ಸದಸ್ಯರ ಗಮನ ನೆಟ್ಟಿತ್ತು. ಈಗ ದೃಷ್ಟಿಕೋನ ಬದಲಾಗಿದೆ. ದೇಶದ ಪ್ರಧಾನಮಂತ್ರಿ ಕುಡಿಯುವ ನೀರಿನ ಗುಣಮಟ್ಟದ್ದೇ ಹಳ್ಳಿಯ ಸಾಮಾನ್ಯನಿಗೂ ಸಿಗಬೇಕು. ಇದು ನನ್ನ ಸಂಕಲ್ಪ'ಎಂದು ಅವರು ಹೇಳುತ್ತಾರೆ.

ಈಗ ದನದ ದೊಡ್ಡಿ, ಸ್ಮಶಾನ, ಮಕ್ಕಳಿಗೆ ಆಟದ ಮೈದಾನ, ಗ್ರಾಮೀಣ ಆರೋಗ್ಯ, ಒಟ್ಟು ನೈರ್ಮಲ್ಯ, ಶುದ್ಧ ಕುಡಿಯುವ ನೀರು, ಶೌಚಾಲಯ, ಸ್ನಾನ ಕೊಠಡಿ ಸೌಕರ್ಯ ತಳಮಟ್ಟದಿಂದ ಮೇಲ್ಮುಖವಾಗಿ ಯೋಜನೆ, ನಮ್ಮ ಗ್ರಾಮ ನಮ್ಮ ಯೋಜನೆ ಕಲ್ಪನೆ, ಜನರೇ ನೇರ ನಿರೂಪಿಸಿದ ಯೋಜನೆಗಳು.

ಪಂಚಾಯತಿಗಳ ಮೂಲಕ ರೈತರಿಗೆ ಪಹಣಿ ಪತ್ರ (ಆರ್‌ಟಿಸಿ) ವಿತರಿಸುವುದು ದೇಶದಲ್ಲಿಯೇ ಪ್ರಥಮವಾಗಿದೆ. ಅಭಿವೃದ್ಧಿಗೆ ಸಂಬಂಧಿಸಿದ 43 ಸೇವೆಗಳು, ಕಂದಾಯ ಇಲಾಖೆಯ 39 ಸೇವೆಗಳು ಹಾಗೂ ಇನ್ನಿತರ 17 ಸೇವೆಗಳನ್ನು ಒಗ್ಗೂಡಿಸಿ ಒಂದೇ ಸೂರಿನಡೆ ಒದಗಿಸುವ 4,023 ಬಾಪೂಜಿ ಸೇವಾ ಕೇಂದ್ರಗಳನ್ನು ಗ್ರಾಮಪಂಚಾಯತಿ ಕಚೇರಿಯಲ್ಲೇ ಸ್ಥಾಪಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಕುರಿತು ಉನ್ನತ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಗದಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ಸ್ಥಾಪನೆ ಮಹತ್ವದ ಉಪಕ್ರಮವಾಗಿದೆ. ಈ ಸಲದ ಆಯವ್ಯಯದಲ್ಲಿ ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ ಒಂದು ಕೋಟಿ ರೂಪಾಯಿಗಳ ಅನುದಾನದ ಜತೆಗೆ ಒಂದು ಸಾವಿರ ಗ್ರಾಮಗಳನ್ನು ಎರಡು ವರ್ಷಗಳಲ್ಲಿ ಅಭಿವೃದ್ಧಿಪಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನ ನಾಲ್ಕು ಕೋಟಿ ರೂಪಾಯಿಗಳಿಗೆ ಹೆಚ್ಚಿಸುವ ಪ್ರಸ್ತಾಪ ಆಯವ್ಯಯದಲ್ಲಿ ಮಾಡಲಾಗಿದೆ. ಹಾಗೆಯೇ ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರ ಗೌರವಧನ ಹೆಚ್ಚಿಸುವ ಪ್ರಸ್ತಾಪವನ್ನೂ ಮಾಡಲಾಗಿದೆ.



## ಜನವಸತಿ ಸಭೆ

ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ವ್ಯಾಖ್ಯಾನಿಸಲಾಗಿದೆ. ಗ್ರಾಮೀಣ ಜನಪ್ರತಿನಿಧಿಗಳು ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆಯನ್ನು ಅಳವಡಿಸಿಕೊಳ್ಳಲು ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆಸ್ತಿ ಮತ್ತು ಹೊಣೆಗಾರಿಕೆಗಳ ಪಟ್ಟಿಯನ್ನು ಘೋಷಣೆ ಮಾಡುವುದು ಕಡ್ಡಾಯಗೊಳಿಸಲಾಗಿದೆ.

ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದ ಯೋಜಿತ ಅಭಿವೃದ್ಧಿಯ ಪದ್ಧತಿ ಅಥವಾ ವ್ಯವಸ್ಥೆಯಲ್ಲಿ ಇದ್ದ ಅಂತರವನ್ನು ನಿವಾರಿಸುವ ಸಲುವಾಗಿ ಗ್ರಾಮಗಳ ಅಭಿವೃದ್ಧಿಗಾಗಿ ಪಟ್ಟಣ ಮತ್ತು ನಗರ ಯೋಜನಾ ಪದ್ಧತಿಯನ್ನು ಗ್ರಾಮಗಳಿಗೂ ವಿಸ್ತರಿಸುವ ಕ್ರಮಕ್ಕೆ ಇದೇ ಮೊದಲ ಬಾರಿ ಕೈ ಹಾಕಲಾಗಿದೆ. ಯೋಜಿತ ಅಭಿವೃದ್ಧಿಯ ಪರಿಣಾಮಕಾರಿ ಹೆಜ್ಜೆಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಅಭಿವೃದ್ಧಿಯ ನಿಯಮಗಳನ್ನು ಪಾಲಿಸಲು ಕಟ್ಟುನಿಟ್ಟಾದ ಅವಕಾಶಗಳನ್ನು ಕಾಯ್ದೆಯಲ್ಲಿ ಒದಗಿಸಲಾಗಿದೆ.

ರಾಜ್ಯ ಪುನಾರಚನೆಯ ನಂತರ ಮೊದಲ 40 ವರ್ಷಗಳಲ್ಲಿ ಪಂಚಾಯತ್ ರಾಜ್ ಕಾನೂನು ಮೂರು ಬಾರಿ ಅಂದರೆ 1959, 1985 ಮತ್ತು 1993 ರಲ್ಲಿ ವ್ಯಾಪಕವಾಗಿ ಬದಲಾವಣೆ ಕಂಡು ರಾಜ್ಯದ ಪಂಚಾಯತ್ ರಾಜ್ ಇತಿಹಾಸದಲ್ಲಿ ಗಮನಾರ್ಹ ಮೈಲಿಗಲ್ಲುಗಳಾದವು.

ಹಿರಿಯ ರಾಜಕಾರಣಿಗಳಾದ ಕೆ.ಆರ್.ರಮೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಪಂಚಾಯತ್ ರಾಜ್ ಕಾಯ್ದೆಗೆ ಸಮಗ್ರ ತಿದ್ದುಪಡಿ ತರುವ ಪ್ರಾಮಾಣಿಕ ಯತ್ನ ಗಾಂಧೀಜಿ ಕಲ್ಪನೆಯ ಗ್ರಾಮ ಸ್ವರಾಜ್ಯದ ಕನಸು ಸಾಕಾರಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ. ಸಮಿತಿ ನೀಡಿದ ವರದಿಯನ್ನು ಅನುಸರಿಸಿ ಪ್ರಕರಣಗಳಿಗೆ ತಿದ್ದುಪಡಿ ತರಲಾಗಿದೆ. ಜತೆಗೆ ಕಾಯ್ದೆಗೆ ಮರುನಾಮಕರಣ ಮಾಡಲಾಗಿದೆ.

## ನಮ್ಮ ಗ್ರಾಮ ನಮ್ಮ ಯೋಜನೆ

30 ಜಿಲ್ಲೆಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ವರದಿಗಳನ್ನು ಸಿದ್ಧಪಡಿಸಲಾಗಿದೆ. ಇದರ ಆಧಾರದ ಮೇಲೆ ಪ್ರತಿ ಗ್ರಾಮಗಳ ಅಗತ್ಯಗಳನ್ನು ಪಟ್ಟಿ ಮಾಡಿ ವಾರ್ಡ್ ಸಭೆ ಮತ್ತು ಗ್ರಾಮಸಭೆಗಳಲ್ಲಿ ಚರ್ಚಿಸಿ ತೀರ್ಮಾನಿಸಿವುದು ಈ ಕಾರ್ಯಕ್ರಮದ ಮೂಲ ಉದ್ದೇಶ. ಪ್ರತಿ ವರ್ಷ ಏಪ್ರಿಲ್/ಮೇ ತಿಂಗಳಲ್ಲಿ ಇದಕ್ಕಾಗಿ ಸಭೆಗಳನ್ನು ನಡೆಸಲಾಗುವುದು. ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಅನುಷ್ಠಾನಕ್ಕೆ ಬಂದು 22 ವರ್ಷಗಳಾಗಿವೆ. ರಾಜ್ಯದಲ್ಲಿ ನೈರ್ಮಲ್ಯ ವ್ಯವಸ್ಥೆಯು ಸಂಪೂರ್ಣವಾಗಿ ಕುಸಿದು ಹೋಗಿತ್ತು. 85 ಲಕ್ಷ ಗ್ರಾಮೀಣ ಕುಟುಂಬಗಳಲ್ಲಿ 30 ಲಕ್ಷ ಕುಟುಂಬಗಳಿಗೆ ಮಾತ್ರ ವೈಯಕ್ತಿಕ ಶೌಚಾಲಯ ವ್ಯವಸ್ಥೆ ಲಭ್ಯವಿತ್ತು. ಈ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದಾಗ ಇನ್ನೂ 55 ಲಕ್ಷ ವೈಯಕ್ತಿಕ ಶೌಚಾಲಯವನ್ನು ನಿರ್ಮಿಸಬೇಕಾದ ಬಹುದೊಡ್ಡ ಸವಾಲು ಸರ್ಕಾರದ ಎದುರಿಗಿತ್ತು. ಈ ಪೈಕಿ ಸರಾಸರಿ 15 ಲಕ್ಷ ಶೌಚಾಲಯಗಳನ್ನು ನಿರ್ಮಿಸಿದ ಖ್ಯಾತಿ ಇಂದಿನ ಸರ್ಕಾರದ್ದಾಗಿದೆ.




## ರಾಷ್ಟ್ರೀಯ ಪುರಸ್ಕಾರ

ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸತತ ಮೂರು ವರ್ಷಗಳಿಂದ ಕೇಂದ್ರ ಸರ್ಕಾರ ನೀಡುವ ಇ- ಪುರಸ್ಕಾರವನ್ನು ಗಳಿಸುತ್ತಾ ಬಂದಿದೆ. ಪಂಚಾಯತ್‌ಗಳಿಗೆ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಮೂಲಕ ಅಂತರ್ಜಾಲ ಸಂಪರ್ಕ ಕಲ್ಪಿಸಿ ಆಡಳಿತದಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ಉತ್ತರದಾಯಿತ್ವ ಹೆಚ್ಚಿಸುವಲ್ಲಿ ರಾಜ್ಯ ಸರ್ಕಾರ ಪರಿಣತಿಯನ್ನು ಗಳಿಸಿದೆ. ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಬಳಸುವುದರಲ್ಲಿ ರಾಜ್ಯ ಸರ್ಕಾರ ದೇಶದಲ್ಲಿ ಮೊದಲ ಸ್ಥಾನ ಗಳಿಸಿದೆ.

ಗ್ರಾಮ ಪಂಚಾಯತಿಗಳನ್ನು ಕೆಲಸ ಮಾಡುವ ನೌಕರರಿಗೆ ಸೇವಾ ಭದ್ರತೆ ನೀಡುವ ಕೆಲಸವನ್ನು ಕೈಗೊಳ್ಳಲಾಗಿದ್ದು, 30465 ನೌಕರರಿಗೆ ಇದರ ಲಾಭ ಲಭಿಸಿದೆ. ಉಳಿದಿರುವ 15 ಸಾವಿರ ಹೆಚ್ಚಿನ ನೌಕರರಿಗೆ ಮೇ ತಿಂಗಳಲ್ಲಿ ಸೇವಾ ಭದ್ರತೆ ಒದಗಿಸಲು ತೀರ್ಮಾನಿಸಲಾಗಿದೆ. ಇದಲ್ಲದೆ ನೌಕರರಿಗೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆ ಒದಗಿಸುವ ಕೆಲಸವನ್ನು 'ಪಂಚತಂತ್ರ' ದ ಮೂಲಕ ಕೈಗೊಳ್ಳಲಾಗುತ್ತಿದೆ. ಗ್ರಾಮ ಪಂಚಾಯ್ತಿಯ ವಾರ್ಷಿಕ ಆದಾಯದ ಶೇಕಡ 40 ರಷ್ಟು ಹಣವನ್ನು ಸಿಬ್ಬಂದಿಯ ವೇತನಕ್ಕೆ ಬಳಸಿಕೊಳ್ಳಲು ತಿಳಿಸಲಾಗಿದೆ. ಪ್ರತಿ ತಿಂಗಳು 5 ನೇ ತಾರೀಖಿಗಿಂತ ಮೊದಲು ವೇತನ ಪಾವತಿ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ.





ವೈಯಕ್ತಿಕ ಶೌಚಾಲಯಗಳ ನಿರ್ಮಾಣದಲ್ಲಿ ಕರ್ನಾಟಕವೇ ದೇಶದಲ್ಲಿ ಮುಂದಿದೆ. ರಾಷ್ಟ್ರದಲ್ಲಿ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆ 3 ಪ್ರಶಸ್ತಿಗಳನ್ನು ಪಡೆದಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ವರ್ಗಾಯಿಸುವ ವ್ಯವಸ್ಥೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕವಾಗಿದೆ.

ರಾಜ್ಯದ ಗ್ರಾಮಗಳ ವಿಕಾಸಕ್ಕಾಗಿ 21 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ರೈತರು ಧಾನ್ಯಗಳನ್ನು ಒಕ್ಕಣೆ ಮಾಡಲು ಪ್ರತಿ ಹಳ್ಳಿಯಲ್ಲೂ ಒಂದು ಕಣ ನಿರ್ಮಿಸಿಕೊಡುವ ಕೆಲಸವನ್ನು ಕೈಗೊಳ್ಳಲಾಗಿದೆ. ಮಕ್ಕಳಿಗೆ ಆಟದ ಮೈದಾನ ನಿರ್ಮಿಸಿಕೊಡಲಾಗುತ್ತಿದೆ. ಪ್ರತಿ ಹಳ್ಳಿಯಲ್ಲೂ ಈಗ ಸ್ಮಶಾನದ ಸಮಸ್ಯೆ ತಲೆದೋರಿದೆ. ಅದಕ್ಕಾಗಿ ಈಗ ಕ್ರಮಕೈಗೊಳ್ಳಲಾಗುತ್ತಿದೆ. ಸಣ್ಣ ಹಿಡುವಳಿದಾರರು ಹಾಗೂ ದಲಿತರಿಗೆ ತಮ್ಮ ಭೂಮಿಯನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಕಷ್ಟದ ಕೆಲಸ. ಅದಕ್ಕೆ ನೆರವಾಗಲು ಪ್ರತ್ಯೇಕ ಕಾರ್ಯಕ್ರಮ ರೂಪಿಸಲಾಗಿದೆ. ಪ್ರತಿ ಹಳ್ಳಿಗೂ ನಳದ ಮೂಲಕ ಕುಡಿಯುವ ನೀರು ನೀಡುವ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಕುರಿ/ದನದ ದೊಡ್ಡಿ ನಿರ್ಮಿಸಿಕೊಡುವ ಕೆಲಸವೂ ನಡೆದಿದೆ. ಕೆರೆಗಳ ಅಭಿವೃದ್ಧಿ, ಹೊಲಗಳಿಗೆ ರಸ್ತೆ ನಿರ್ಮಿಸಿಕೊಡುವುದು ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ರೈತರಿಗೆ ಮಾಹಿತಿ ಒದಗಿಸಲು ರಾಜೀವ್‌ಗಾಂಧಿ ಮಾಹಿತಿ ಕೇಂದ್ರಗಳನ್ನು ಹಳ್ಳಿಗಳಲ್ಲಿ ಆರಂಭಿಸಲಾಗಿದೆ. ಹಳ್ಳಿಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉತ್ತೇಜಿಸಲು ರಂಗಮಂದಿರ ನಿರ್ಮಿಸಲಾಗುತ್ತಿದೆ.

ಬತ್ತಿ ಹೋದ ಕೊಳವೆಬಾವಿಗಳನ್ನು ಪುನರುಜ್ಜೀವನಗೊಳಿಸುವುದು, ಹಳ್ಳಿಗಳಲ್ಲಿ ಗೋದಾಮುಗಳನ್ನು ನಿರ್ಮಿಸುವುದು, ಮಕ್ಕಳಿಗೆ ಉದ್ಯಾನವನಗಳನ್ನು ನಿರ್ಮಿಸಿಕೊಡುವುದು, ಬಹು ಕಮಾನು ಚೆಕ್ ಡ್ಯಾಂ ನಿರ್ಮಿಸುವುದು, ನೈರ್ಮಲ್ಯ ಕಾಪಾಡಲು ತಿಪ್ಪೆಗಳನ್ನು ಸರಿಯಾಗಿ ಸಂರಕ್ಷಿಸುವುದು, ಗ್ರಾಮೀಣ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿಗೆ ನೆರವು ನೀಡುವುದು ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

## ಡಿಸೆಂಬರ್‌ಗೆ ರಾಜ್ಯ ಬಯಲು ಶೌಚಾಲಯ ಮುಕ್ತ

ರಾಜ್ಯ ಬಯಲು ಬಹಿರ್ದೆಸೆಯಿಂದ ಮುಕ್ತವಾಗಲಿದೆ. 2018ರೊಳಗೆ ರಾಜ್ಯವನ್ನು ಬಯಲು ಶೌಚಾಲಯದಿಂದ ಮುಕ್ತಗೊಳಿಸಲು ತೀರ್ಮಾನಿಸಲಾಗಿತ್ತು. ಈಗ ಅದನ್ನು ಈ ವರ್ಷದ ಡಿಸೆಂಬರ್ ಒಳಗೆ ಸಾಧಿಸಲು ತೀರ್ಮಾನಿಸಲಾಗಿದೆ. ಶೇಕಡ 71 ರಷ್ಟು ಶೌಚಾಲಯ ನಿರ್ಮಾಣಗೊಂಡಿದೆ. ಶೇಕಡ 29 ರಷ್ಟು ಬಾಕಿ ಇದೆ. ಉಳಿದ 25 ಲಕ್ಷ ಶೌಚಾಲಯ ನಿರ್ಮಿಸಲಾಗುವುದು. ಇದುವರೆಗೆ ರಾಜ್ಯದಲ್ಲಿ 1470 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಒದಗಿಸಲಾಗಿದೆ. 9250 ಶುದ್ಧ ಕುಡಿಯುವ ನೀರು ಘಟಕ ಸ್ಥಾಪಿಸಲಾಗಿದೆ. ಇನ್ನೂ 2500 ಘಟಕಗಳನ್ನು 6 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಉದ್ಯೋಗಯಲ್ಲಿ ಕೇಂದ್ರ ಸರ್ಕಾರ 6 ಕೋಟಿ ಯಿಂದ 10ಕೋಟಿ ಮಾನವ ದಿನಗಳ ಸೃಷ್ಟಿಗೆ ಅನುಮೋದನೆ ನೀಡಿದೆ. ಮಾರ್ಚ್ ಅಂತ್ಯದವರೆಗೆ 9.15 ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. 2017-18 ರಲ್ಲಿ ಮತ್ತೆ 10 ಕೋಟಿ ಮಾನವ ದಿನ ಹಂಚಿಕೆಯಾಗಿದ್ದು 12 ಕೋಟಿ ದಿನಗಳನ್ನು ಸೃಷ್ಟಿಸಲು ಗುರಿ ಹೊಂದಲಾಗಿದೆ. 2.28 ಲಕ್ಷ ಕುರಿ/ದನದ ದೊಡ್ಡಿ ನಿರ್ಮಿಸಲಾಗಿದೆ. 7227 ಆಟದ ಮೈದಾನ 3818 ಶ್ಮಶಾನ, 7235 ರೈತರ ಕಣ ನಿರ್ಮಾಣ, 2.19 ಲಕ್ಷ ಭೂ ಅಭಿವೃದ್ಧಿ ಕಾಮಗಾರಿ, 47038 ತೋಟಗಾರಿಕೆ ಅಭಿವೃದ್ಧಿ ಕಾಮಗಾರಿ, ನಮ್ಮ ಹಳ್ಳಿ-ನಮ್ಮ ನೀರು ಯೋಜನೆಯಲ್ಲಿ 66165 ಕಾಮಗಾರಿ, 36487 ಕೊಳವೆಬಾವಿಗಳ ಮರು ಪೂರಣ ಕಾಮಗಾರಿ ಪೂರ್ಣಗೊಂಡಿದೆ.






### ಮಾನವ ಸಂಪನ್ಮೂಲ

ಬೇರೆ ಯಾವ ರಾಜ್ಯದಲ್ಲೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಮೀಕ್ಷೆ ಗ್ರಾಮಮಟ್ಟದಲ್ಲಿ ನಡೆದಿಲ್ಲ. ಮೈಸೂರಿನಲ್ಲಿರುವ ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಅಧ್ಯಯನ ಸಂಸ್ಥೆ ಈ ಕೆಲಸವನ್ನು ಕೈಗೊಂಡು ವಿವರವಾದ ವರದಿಗಳನ್ನು ಪ್ರಕಟಿಸಿದೆ. ಹಿಂದೆ ಯೋಜನೆಗಳನ್ನು ಸಿದ್ದಪಡಿಸುವಾಗ ಭೌತಿಕ ಸಂಪನ್ಮೂಲವನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. ಅಮರ್ತ್ಯಸೇನ್ ಹಾಗೂ ಮೆಹಬೂಬ್ ಉಲ್ ಹಕ್ ಅವರ ಚಿಂತನೆಯಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಸೂಚ್ಯಂಕವನ್ನು ಕಂಡು ಹಿಡಿಯುವ ಬೃಹತ್ ಕಾರ್ಯವನ್ನು ಗ್ರಾಮೀಣ ಮಟ್ಟದಲ್ಲಿ ಕೈಗೊಳ್ಳಲಾಗಿದೆ. ಇದರಿಂದ ಪ್ರತಿ ಗ್ರಾಮದಲ್ಲೂ ಜನರ ಜೀವನ ಮಟ್ಟ, ಬಡತನ, ಅಸ್ತಿಗಳ ವಿವರ, ಅಹಾರ ಮತ್ತು ಪೌಷ್ಟಿಕತೆ, ಆರೋಗ್ಯ ಮತ್ತು ಶಿಕ್ಷಣದಲ್ಲಿ ಸಮಾನತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ವಿವಿಧ ಮಾನದಂಡಗಳಲ್ಲಿ ಇವುಗಳನ್ನು ಅಧ್ಯಯನ ಮಾಡಿರುವುದರಿಂದ ಹಣಕಾಸು ಹಂಚಿಕೆಗೆ ಅನುಕೂಲವಾಗಿದೆ. ಪ್ರತಿ ಗ್ರಾಮ ಯಾವ ವಿಷಯದಲ್ಲಿ ಹಿಂದುಳಿದಿದೆ ಎಂಬುದನ್ನು ಗುರುತಿಸಿ ಅನುದಾನ ಹಂಚಿಕೆಗೆ ಅನುಕೂಲವಾಗಿದೆ.

ಪಂಚಾಯತಿಗಳು ಶಾಸನಸಭೆಗಳಾಗಬೇಕು, ಕಾರ್ಯಾಂಗವಾಗಬೇಕು, ನ್ಯಾಯಾಂಗವಾಗಬೇಕು ಎಂಬ ಗಾಂಧೀಜಿಯವರ ಕಲ್ಪನೆಯಂತೆ ಪಂಚಾಯತಿಗಳಿಗೆ ನಿಯಮ ರೂಪಿಸುವ ಅಧಿಕಾರ, ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಗತ್ಯ ಕಾನೂನು ಬಲ ಸಮಾಜದಲ್ಲಿ ಸಮಾನತೆ ತರುವ ದಿಸೆಯಲ್ಲಿ ಸಕ್ರಿಯ ಕಾರ್ಯಕ್ರಮಗಳಿಗಾಗಿ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ವ್ಯಾಖ್ಯಾನಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸುವ ಮೂಲಕ ಗ್ರಾಮೀಣ ಪರಿಸರವನ್ನು ಸುಂದರಗೊಳಿಸುವ ಪ್ರಯತ್ನ ಈ ತಿದ್ದುಪಡಿಗಳಿಂದ ಕೈಗೂಡಲಿದೆ.

ಪರಿಣಾಮಕಾರಿಯಾದ ಸೇವಾ ವ್ಯವಸ್ಥೆ, ಫಲಾನುಭವಿಗಳೇ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶ ಒದಗಿಸುವ ಸಾಮುದಾಯಿಕ ಗುತ್ತಿಗೆ ವ್ಯವಸ್ಥೆ, ಕಾಲಮಿತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಪೂರ್ಣಗೊಳಿಸುವಿಕೆ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಆದಾಯದ ಮೂಲ ವಿಸ್ತರಿಸುವ ಕ್ರಮಗಳಿಗೆ ಈ ಮಸೂದೆ ನಾಂದಿ ಹಾಡಿದೆ.

ಗ್ರಾಮೀಣ ಪರಿಸರದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಹಣಕಾಸಿನ ಋಣಭಾರ, ಬಡತನ ಅಥವಾ ಇತರೇ ಕಾರಣಗಳಿಗಾಗಿ ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳುವ ಮಾನಸಿಕ ಸ್ಥಿತಿಯಿಂದ ಪೀಡಿತರಾದ ರೈತರು ಮತ್ತು ಇತರರು ಸಾಮಾಜಿಕ, ಆರ್ಥಿಕ ಸ್ಥಿತಿಗಳ ಒತ್ತಡಕ್ಕೆ ಸಿಲುಕಿ ನಾಜೂಕಾದ ಪರಿಸ್ಥಿತಿ ಎದುರಿಸುವ ಸಂದರ್ಭದಲ್ಲಿ ಸೂಕ್ತವಾದಂತಹ ಆತ್ಮವಿಶ್ವಾಸ ಮತ್ತು ಧೈರ್ಯ ತುಂಬುವ ವಾತಾವರಣ ನಿರ್ಮಾಣ ಮಾಡುವ ಪ್ರಯತ್ನದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಈ ಮಸೂದೆ ನೆರವಾಗಲಿದೆ.



## ಹಸಿವು ಮುಕ್ತ ಸಮಾಜದ ಪರಿಕಲ್ಪನೆಯ ಸಾಕಾರ

# ಅನ್ನಭಾಗ್ಯ ಯೋಜನೆ

ಎಸ್. ಎಸ್. ಹೂಗಾರ್

**ಹ**ಸಿವು ಮುಕ್ತ ರಾಜ್ಯವನ್ನಾಗಿಸಲು ರಾಜ್ಯದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಜಾರಿಗೆ ತಂದ 'ಅನ್ನಭಾಗ್ಯ ಯೋಜನೆ' ಅವರೇ ಹೇಳಿರುವಂತೆ 'ಹಸಿದವರಿಗೆ ಮಾತ್ರ ಅನ್ನದ ಮಹತ್ವದ ಅರಿವಾಗುತ್ತದೆ', ಹಸಿವಾದ ವೇಳೆಯಲ್ಲಿ ಹೊಟ್ಟೆತುಂಬ ಅನ್ನ (ಆಹಾರ) ಸಿಗುವ ಭಾಗ್ಯವಂತರಿಗೆ 'ಹಸಿದವರು' ಎನ್ನಲಾಗದು.

ಇತ್ತೀಚಿನ 5–6 ವರ್ಷಗಳಲ್ಲಿ ಮಳೆಯ ಅಭಾವದಿಂದಾಗಿ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಇದ್ದಾಗಲೂ ಸಹ 'ಅನ್ನಭಾಗ್ಯ ಯೋಜನೆ' ಯಿಂದಾಗಿ ಆಹಾರವಿಲ್ಲದೆ, ತೀವ್ರ ಸಂಕಷ್ಟಕ್ಕೆ ಸಿಲುಕಿ ಬಳಲಿರುವಂತಹ ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಲಿಲ್ಲ. ಇದು 'ಅನ್ನಭಾಗ್ಯ ಯೋಜನೆ' ಯ ಮಹತ್ವವನ್ನೂ, ಅದರಿಂದ ಉಂಟಾಗಿರುವ ಸಕಾರಾತ್ಮಕ ಪರಿಣಾಮವನ್ನೂ ಗಮನಿಸಿದಲ್ಲಿ, ಇಂತಹ ಯೋಜನೆಯನ್ನು ರೂಪಿಸಿದ ಮುಖ್ಯಮಂತ್ರಿಯವರಿಗೂ, ಇದನ್ನು ಅನುಷ್ಠಾನಗೊಳಿಸುವಲ್ಲಿ ಶ್ರಮಿಸಿದ ಹಿಂದಿನ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ದಿನೇಶ್ ಗುಂಡೂರಾವ್, ಹಾಲಿ ಮಂತ್ರಿಗಳಾಗಿರುವ ಸನ್ಮಾನ್ಯ ಶ್ರೀ ಯು.ಟಿ.ಖಾದರ್ ಹಾಗೂ ಇಲಾಖಾ ಅಧಿಕಾರಿಗಳ ಕಾರ್ಯತತ್ಪರತೆಯನ್ನು ಶ್ಲಾಘಿಸಲೇಬೇಕಾಗುತ್ತದೆ.



ಹಸಿವಾದ ವೇಳೆಯಲ್ಲಿ ಒಂದು ಹಿಡಿ ಅನ್ನಕ್ಕಾಗಿ ಪರಿತಪಿಸುವವರು "ಹಸಿದವರು" ಎನಿಸಿಕೊಳ್ಳುವರು. ಇಂಥಹವರಿಗೆ 'ಅನ್ನಭಾಗ್ಯ' ಯೋಜನೆಯಡಿ ಪ್ರತಿ ಬಿ.ಪಿ.ಎಲ್. ಕಾರ್ಡ್ ಇರುವ ಬಡವನಿಗೆ ಉಚಿತ ಅಕ್ಕಿ ನೀಡುವುದು ಸಾಮಾಜಿಕ ಕಳಕಳಿಯುಳ್ಳ ಹಾಗೂ ಬಡವರು ದುಡ್ಡಿಲ್ಲದೆ, ದುಡಿಮೆ ಇಲ್ಲದೇ ಇರುವಾಗಲೂ ಹಸಿದು ಮಲಗುವುದು ಸಾರ್ವಕಾಲಿಕ ಸಾಮಾಜಿಕ, ಕಳಂಕ ಎಂದರಿತ ಮುಖ್ಯಮಂತ್ರಿ ಸಿದ್ದರಾಮಯ್ಯನವರಂಥ ಧೀಮಂತ ನಾಯಕರಿಂದ ಮಾತ್ರ ಜಾರಿಗೊಳಿಸಲು ಸಾಧ್ಯವಾಗುವುದು.

ಈ ರೀತಿ ಉಚಿತ ಅಕ್ಕಿ ನೀಡುವುದರಿಂದ ಕೂಲಿ ಕಾರ್ಮಿಕರು ಹಾಗೂ ಬಡವರನ್ನು ಸೋಮಾರಿಗಳನ್ನಾಗಿ ಪರಿವರ್ತಿಸುವ ಯೋಜನೆ ಎಂದು ಈ ಯೋಜನೆಯನ್ನು ಹೀಯಾಳಿಸುವವರು ಸಂಕುಚಿತ ಮನಸ್ಸುಳ್ಳವರು ಹಾಗೂ ಕೂಲಿ ಕಾರ್ಮಿಕ, ಬಡವರು ಅದೇ ಹಂತದಲ್ಲಿಯೇ ಇರಲೆಂದು ಬಯಸುವವರಾಗಿರುತ್ತಾರೆ. ಅಕ್ಕಿ ದೊರೆಯುವುದರಿಂದ ಬಡವರು ಸೋಮಾರಿಗಳಾಗಲು ಸಾಧ್ಯವಿಲ್ಲ. '7' ಕೆ.ಜಿ. ಅಕ್ಕಿಯ ಜೊತೆಗೆ ತರಕಾರಿ, ಹಾಲು, ಬೇಳೆಕಾಳು, ಇತರೆ ದಿನಸಿ ಕೊಂಡುಕೊಳ್ಳಲು ಅವರು ದುಡಿಯಲೇ ಬೇಕಾಗುತ್ತದೆ. ಆದರೆ ಒಂದು ಮನೆಯಲ್ಲಿ ಸರಿ ಸುಮಾರು 7 ರಿಂದ 35 ಕೆ.ಜಿ. ಯವರೆಗೆ ಅಕ್ಕಿಯ ದಾಸ್ತಾನು ಇದ್ದಲ್ಲಿ ತಾವು ಒಂದೆರಡು ದಿನ ದುಡಿಮೆ ಇಲ್ಲದಿದ್ದರೂ ಉಪವಾಸ ಮಲಗಬೇಕಿಲ್ಲವೆಂಬ ವಿಶ್ವಾಸವೇ ಇಂಥಹ ಬಡವರ ಮನೋಸ್ಥೈರ್ಯವನ್ನು ಹೆಚ್ಚಿಸುತ್ತದೆ ಎಂದರೆ ತಪ್ಪಾಗಲಾರದು.

ಕರ್ನಾಟಕ ರಾಜ್ಯದಲ್ಲಿ ಕಡುಬಡವರ ಸಂಖ್ಯೆ ಒಟ್ಟು ಜನಸಂಖ್ಯೆಯ 23.2% ರಷ್ಟಿದೆ. ಬಡತನಕ್ಕೆ ಹಲವಾರು ಕಾರಣಗಳಿದ್ದು, ಬಡತನದಿಂದಾಗಿ ಹುಟ್ಟುವ ಮಕ್ಕಳೂ ಸಹ ಅಪೌಷ್ಟಿಕತೆಯಿಂದ ಬಳಲುತ್ತಿರುತ್ತಾರೆ. ಇದು ಒಂದು ಸಾಮಾಜಿಕ ಪಿಡುಗಾಗಿದ್ದು, ಇದರ ದುಷ್ಪರಿಣಾಮಗಳನ್ನು ವಿಶ್ಲೇಷಿಸಿ ಇದರಿಂದಾಗುವ ದುಷ್ಪರಿಣಾಮಗಳನ್ನು ತಕ್ಕಮಟ್ಟಿಗೆ ತಡೆಯುವಲ್ಲಿ 'ಅನ್ನಭಾಗ್ಯ ಯೋಜನೆ' ಯನ್ನು ಮಾನ್ಯ ಮುಖ್ಯಮಂತ್ರಿಯವರು ಆರಂಭಿಸಿರುವುದು ಕರ್ನಾಟಕ ರಾಜ್ಯದ ಅತ್ಯಂತ ಪ್ರಮುಖ 'ಭಾಗ್ಯವೆಂದು' ಹೇಳಬೇಕಾಗುತ್ತದೆ.

ಉತ್ತರ ಕರ್ನಾಟಕದ ಜಿಲ್ಲೆಗಳಾದ ವಿಜಾಪುರ, ಗುಲಬರ್ಗ, ರಾಯಚೂರು, ಬಳ್ಳಾರಿ, ಭಾಗಶಃ ಬೆಳಗಾವಿ ಇಲ್ಲಿಂದ ಬಹುತೇಕ ಸಣ್ಣ, ಅತಿಸಣ್ಣ ರೈತರು, ಕೂಲಿ ಕಾರ್ಮಿಕರು ದುಡಿಮೆ ಇಲ್ಲದಾದಾಗ ಗೋವಾ, ಮಹಾರಾಷ್ಟ್ರ ರಾಜ್ಯದ ಪ್ರಮುಖ ನಗರಗಳಿಗೆ ಹಾಗೂ ಬೆಂಗಳೂರಿಗೆ ವಲಸೆ ಹೋಗುವುದು ಸಾಮಾನ್ಯವಾಗಿದ್ದು, 'ಅನ್ನಭಾಗ್ಯ ಯೋಜನೆ' ಜಾರಿಯಾದ ನಂತರ ಗುಳೆ ಹೋಗುವವರ ಸಂಖ್ಯೆ ಗಣನೀಯವಾಗಿ ಇಳಿದಿದೆ ಎಂದು ಅಂಕಿ ಅಂಶಗಳು ಸಾಬೀತುಪಡಿಸಿರುತ್ತವೆ. ತಮ್ಮ ನೆಲವನ್ನು ಬಿಟ್ಟು ಅರಿಯದ ಊರಿಗೆ ಚಿಕ್ಕ ಚಿಕ್ಕ ಮಕ್ಕಳು, ವೃದ್ಧರೊಂದಿಗೆ ಗುಳೆ ಹೋಗುವವರ ಮನಃಸ್ಥಿತಿಯನ್ನು ಹಾಗೂ ಅದರಿಂದಾಗುವ ಪರಿಣಾಮಗಳನ್ನು ಮನೋವೈಜ್ಞಾನಿಕ ಸಂಶೋಧನೆಗೆ ಒಳಪಡಿಸಿದರೆ ಹತ್ತು ಹಲವು ಮನಕಲಕುವ ಘಟನೆಗಳು ಹೊರಬರುವುದರಲ್ಲಿ ಸಂಶಯವಿಲ್ಲ. ಇಂಥಹ 'ಗುಳೆ' ಪ್ರಸಂಗಗಳು ಕಡಿಮೆಯಾಗಿವೆ ಎಂದಲ್ಲಿ ಇದೊಂದು 'ಅಭೂತಪೂರ್ವ' ಸಾಧನೆ ಎಂದೇ ಪರಿಗಣಿಸಬೇಕಲ್ಲವೆ?

'ಅನ್ನಭಾಗ್ಯ ಯೋಜನೆ' ಜೊತೆಗೆ ಮಾನ್ಯ ಮುಖ್ಯಮಂತ್ರಿಯವರು ಬಡ ಮಕ್ಕಳಿಗಾಗಿ ಕ್ಷೀರಭಾಗ್ಯ ಹಾಗೂ ಮೊಟ್ಟೆಭಾಗ್ಯವನ್ನು ಆರಂಭಿಸಿರುವುದು 'ಹಸಿವುಮುಕ್ತ' ಸಮಾಜದ 'ಆರೋಗ್ಯಯುಕ್ತ' ಸದೃಢ ಏಳಿಗೆಗೆ ಸಹಾಯಕಾರಿ. ಇದು ಅವರ ದೂರದೃಷ್ಟಿ ಹಾಗೂ ಸಬಲ ಸಮಾಜ ನಿರ್ಮಾಣಕ್ಕಾಗಿ ಅವರಲ್ಲಿನ ತುಡಿತವನ್ನು ಎತ್ತಿ ತೋರಿಸುತ್ತವೆ. ತಮ್ಮ ಮಕ್ಕಳು ಪೌಷ್ಠಿಕ ಆಹಾರವನ್ನು ಸೇವಿಸಿ ಸದೃಢರಾಗಿ ಬೆಳೆಯುವುದನ್ನು ಎಲ್ಲ ತಂದೆ ತಾಯಿಯರು ಬಯಸುತ್ತಾರೆ. ಇಂತಹ 'ಸಂತೃಪ್ತ' ಭಾವನೆಯನ್ನು ಬಡ ಕುಟುಂಬದವರಿಗೆ ನೀಡಿರುವ ಮಾನ್ಯ ಮುಖ್ಯಮಂತ್ರಿಯವರನ್ನು ಕರ್ನಾಟಕದ ಜನರು ಸದಾ ಸ್ಮರಿಸುವುದರಲ್ಲಿ ಸಂಶಯವೆ ಇಲ್ಲ.

ಇತ್ತೀಚಿನ 5–6 ವರ್ಷಗಳಲ್ಲಿ ಮಳೆಯ ಅಭಾವದಿಂದಾಗಿ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಇದ್ದಾಗಲೂ ಸಹ 'ಅನ್ನಭಾಗ್ಯ ಯೋಜನೆ' ಯಿಂದಾಗಿ ಆಹಾರವಿಲ್ಲದೆ, ತೀವ್ರ ಸಂಕಷ್ಟಕ್ಕೆ ಸಿಲುಕಿ ಬಳಲಿರುವಂತಹ ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಲಿಲ್ಲ. ಇದು 'ಅನ್ನಭಾಗ್ಯ ಯೋಜನೆ' ಯ ಮಹತ್ವವನ್ನೂ, ಅದರಿಂದ ಉಂಟಾಗಿರುವ ಸಕಾರಾತ್ಮಕ ಪರಿಣಾಮವನ್ನೂ ಗಮನಿಸಿದಲ್ಲಿ, ಇಂತಹ ಯೋಜನೆಯನ್ನು ರೂಪಿಸಿದ ಮುಖ್ಯಮಂತ್ರಿಯವರಿಗೂ, ಇದನ್ನು ಅನುಷ್ಠಾನಗೊಳಿಸುವಲ್ಲಿ ಶ್ರಮಿಸಿದ ಹಿಂದಿನ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ದಿನೇಶ್ ಗುಂಡೂರಾವ್, ಹಾಲಿ ಮಂತ್ರಿಗಳಾಗಿರುವ ಸನ್ಮಾನ್ಯ ಶ್ರೀ ಯು.ಟಿ.ಖಾದರ್ ಹಾಗೂ ಇಲಾಖಾ ಅಧಿಕಾರಿಗಳ ಕಾರ್ಯತತ್ಪರತೆಯನ್ನು ಶ್ಲಾಘಿಸಲೇ ಬೇಕಾಗುತ್ತದೆ.

'ಹಸಿವು ಮುಕ್ತ' ಸಮಾಜದ ಕಲ್ಪನೆಯೇ ಒಂದು 'ಸಮಗ್ರ ಯೋಜನೆ'ಯಾಗಿದ್ದು, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಮನೋವೈಜ್ಞಾನಿಕ ಕ್ಷೇತ್ರಗಳಲ್ಲಿ ಸಕಾರಾತ್ಮಕ ಬೆಳವಣಿಗೆಯನ್ನು ಸಾಧಿಸುವ ನಿಟ್ಟಿನಲ್ಲಿ ಅದ್ಭುತ ಪರಿಕಲ್ಪನೆ ಎಂದೇ ಭಾವಿಸಬೇಕಾಗುತ್ತದೆ. ಭಾವನಾತ್ಮಕವಾಗಿ ಪರಿಗಣಿಸಿದಲ್ಲಿ ಹೊಟ್ಟೆ ತುಂಬ ಪೌಷ್ಠಿಕ ಆಹಾರವನ್ನು ಸೇವಿಸಿ ಸುಖದ ಬದುಕು ಬದುಕುತ್ತಿರುವರ ಮಧ್ಯದಲ್ಲಿ ತಮ್ಮ ಹಣೆಬರಹವೊ ದುರಾದೃಷ್ಟವೊ ಎಂಬ ಗೊಂದಲದಲ್ಲಿ ಹೊಟ್ಟೆ ತುಂಬ ಊಟ ಮಾಡದೆ ಮಕ್ಕಳನ್ನು ಸರಿಯಾಗಿ ಸಾಕಲಿಕ್ಕಾಗದೆ ಪ್ರತಿದಿನವೂ ಆಸೆ ಕಣ್ಣುಗಳಿಂದಲೇ ಬದುಕು ಸವೆಸುತ್ತಿದ್ದ ಬಡ ಜನರಿಗೆ ಕನಿಷ್ಠ ಅನ್ನಕ್ಕಾದರೂ ಖಾತ್ರಿ ಮಾಡಿಕೊಟ್ಟು, ಗೌರವಯುತ ಬದುಕನ್ನು ನೀಡಿರುವ ಅನ್ನಭಾಗ್ಯ ಯೋಜನೆ ನಿರಂತರವಾಗಿ ಸಾಗಲಿ. ಇಂತಹ ಯೋಜನೆ ಸಮಗ್ರ ಭಾರತವಲ್ಲದೆ, ಜಗತ್ತಿನ ಇತರೆ ಬಡರಾಷ್ಟ್ರಗಳಿಗೂ ಹಬ್ಬಿ 'ಹಸಿವು ಮುಕ್ತ ಪ್ರಪಂಚ'ದ ಕಲ್ಪನೆ ಸಾಕಾರಗೊಳ್ಳಲಿ ಎಂದು ಆಶಿಸೋಣ.

ಸ್ವಾಮಿ ವಿವೇಕಾನಂದರು ಹೇಳಿರುವಂತೆ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಸರ್ವರ ಉದ್ಧಾರವೂ ಅನಿವಾರ್ಯ. ಕೆಲವರ ಉದ್ಧಾರ ಮಾತ್ರ ರಾಷ್ಟ್ರದ ಉದ್ಧಾರವೆನಿಸದು ಎಂದು ಹೇಳಿರುವ ಮಾತನ್ನು ಗಮನಿಸಿದಾಗ ಮತ್ತು ಅವರೇ ಹೇಳಿರುವಂತೆ ಹಸಿದ ಹೊಟ್ಟೆಯಲ್ಲಿದ್ದವರ ಮುಂದೆ ವೇದಾಂತ, ರಾಷ್ಟ್ರಭಕ್ತಿ, ಉದ್ಧಾರ ಮುಂತಾದ ಮಾತುಗಳು ಅರ್ಥಹೀನವಾಗಿರುತ್ತವೆ ಎಂಬ ಖಚಿತ ನುಡಿಗಳನ್ನು ಗಮನಿಸಿದಾಗ ಮಾನ್ಯ ಮುಖ್ಯಮಂತ್ರಿಯವರ 'ಅನ್ನಭಾಗ್ಯ ಯೋಜನೆ' ನಮ್ಮ ರಾಜ್ಯದ ಸಮಗ್ರ ಅಭಿವೃದ್ಧಿಗೆ ಮುನ್ನುಡಿ ಎಂದೇ ಭಾವಿಸಬೇಕಲ್ಲವೆ? ಇಂತಹ ಯೋಜನೆ ಸಮಗ್ರ ಭಾರತವಲ್ಲದೆ ಜಗತ್ತಿನ ಇತರೆ ಬಡರಾಷ್ಟ್ರಗಳಿಗೂ ಹಬ್ಬಿ, 'ಹಸಿವು ಮುಕ್ತ' ಪ್ರಪಂಚದ ಪರಿಕಲ್ಪನೆ ಸಾಕಾರಗೊಳ್ಳಲಿ ಎಂದು ಹಾರೈಸೋಣ.



# ಅನ್ನಭಾಗ್ಯ | ಸರ್ಕಾರದ ಮಹತ್ವದ ಯೋಜನೆ



ಲಕ್ಷ್ಮಣ ಕೊಡಸೆ

ಬಡಜನರ ಬಗೆಗಿನ ನೈಜ ಕಾಳಜಿಯ ಫಲಶ್ರುತಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ 'ಅನ್ನಭಾಗ್ಯ ಯೋಜನೆ'. ಹಸಿವು ಮುಕ್ತ ಸಮಾಜದ ಕನಸು ಕಂಡ ಸರ್ಕಾರ, ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಸ್ವಾಭಿಮಾನದ ಬಾಳು ಬಾಳಬೇಕೆನ್ನುವ ಸದಾಶಯದಿಂದ ಈ ಯೋಜನೆ ಜಾರಿಗೆ ತಂದಿದೆ.

2013ರ ಮೇ 13ರಂದು ಕರ್ನಾಟಕದ 22ನೆಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಶ್ರೀ ಸಿದ್ಧರಾಮಯ್ಯ ಅವರು ಅಂದು ನಡೆಸಿದ ಏಕವ್ಯಕ್ತಿ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ಐತಿಹಾಸಿಕ ನಿರ್ಧಾರ ಅನ್ನಭಾಗ್ಯ ಯೋಜನೆ.

ಚುನಾವಣಾ ಕಾಲದಲ್ಲಿ ಪಕ್ಷ ಪ್ರಕಟಿಸುವ ಪ್ರಣಾಳಿಕೆ ಕೇವಲ ಕಾಗದದಲ್ಲಿ ಉಳಿದು ಬಿಡಬಾರದು. ಅದು ಅಧಿಕಾರದ ದಿನಗಳಲ್ಲಿ ಅನುಷ್ಠಾನಕ್ಕೆ ಬಂದು ಸರ್ಕಾರಕ್ಕೆ ಮಾರ್ಗದರ್ಶಿಯಾಗಬೇಕು ಎಂದು ಸಿದ್ಧರಾಮಯ್ಯ ಅವರು ನಿರ್ಧರಿಸಿದ್ದರು. ಅದರ ಫಲವಾಗಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರುಗಳಿಗೆಯಲ್ಲಿಯೇ 'ಅನ್ನಭಾಗ್ಯ', 'ಕ್ಷೀರಭಾಗ್ಯ' ಮತ್ತು ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಸಾಲ ಮನ್ನಾ ಕಾರ್ಯಕ್ರಮಗಳನ್ನು ಘೋಷಿಸಿದರು.

ಕರ್ನಾಟಕದಲ್ಲಿ ಯಾರೊಬ್ಬರೂ ಹಸಿವಿನಿಂದ ಬಳಲಬಾರದು. ಬಡಜನರು ಯಾರ ಬಳಿಯೂ ಅನ್ನಕ್ಕಾಗಿ ಕೈಚಾಚದೆ ಸ್ವಾಭಿಮಾನದ ಬದುಕನ್ನು ಸಾಗಿಸಬೇಕು; ಈ ಯೋಜನೆಯಿಂದ ಬಡಜನರ ಪೌಷ್ಟಿಕತೆ ಕೂಡ ಉತ್ತಮಗೊಳ್ಳಬೇಕು ಎನ್ನುವುದು





ಸರ್ಕಾರದ ಆಶಯ. ಈ ಯೋಜನೆಗಾಗಿ 2013ರ ವರ್ಷ 4300 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿತ್ತು.

ಬಡತನದ ಕೆಳಗಿನ ರೇಖೆಯ (ಬಿಪಿಎಲ್) ಇಲ್ಲವೇ ಅಂತ್ಯೋದಯ ಅನ್ನ ಯೋಜನೆಯ ಕಾರ್ಡ್ ಹೊಂದಿರುವ ವ್ಯಕ್ತಿಯ ಮನೆಯಲ್ಲಿ ಒಬ್ಬರೇ ಇದ್ದರೆ ತಿಂಗಳಿಗೆ 10 ಕಿಲೋ ಆಹಾರ ಧಾನ್ಯ, ಇಬ್ಬರಿದ್ದರೆ 20 ಕಿಲೋ, ಮೂರು ಮತ್ತು ಅದಕ್ಕಿಂತ ಹೆಚ್ಚಿಗೆ ಇದ್ದರೆ 30 ಕಿಲೋ ಧಾನ್ಯವನ್ನು ವಿತರಿಸುವುದು ಯೋಜನೆಯ ಉದ್ದೇಶ.

ಅನ್ನಭಾಗ್ಯ ಯೋಜನೆ 2013ರ ಜುಲೈ ತಿಂಗಳಿಂದ ಜಾರಿಯಲ್ಲಿದೆ. ರಾಜ್ಯ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು 2014ರ ಜನವರಿಯಿಂದ ಅಳವಡಿಸಿಕೊಂಡಿದ್ದು ಬಡ ಕುಟುಂಬಗಳಿಗೆ ಆಸರೆಯಾಗಿ ನಿಂತಿದೆ. 2013–14ರ ಸಾಲಿನಲ್ಲಿ ರೂ. 3050 ಕೋಟಿ, 2014–15ರ ಸಾಲಿನಲ್ಲಿ ರೂ 4365 ಕೋಟಿ ಹಣ ಈ ಯೋಜನೆಯಲ್ಲಿ ವೆಚ್ಚವಾಗಿದೆ. 2017–18ನೇ ಸಾಲಿನಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಒಟ್ಟಾರೆಯಾಗಿ 3,636 ಕೋಟಿ ರೂ. ಒದಗಿಸಲಾಗಿದೆ.

ಕಳೆದ ನಾಲ್ಕು ವರ್ಷದಲ್ಲಿ ರಾಜ್ಯವನ್ನು ಹಸಿವು ಮುಕ್ತಗೊಳಿಸುವ ಸರ್ಕಾರದ ಮಹತ್ವಾಕಾಂಕ್ಷೆಯ ಅನ್ನ ಭಾಗ್ಯ ಯೋಜನೆಯಿಂದ ಬಡತನ ರೇಖೆಗಿಂತ ಕೆಳಗಿರುವ 1.08 ಕೋಟಿ ಕುಟುಂಬಗಳು ಈ ಯೋಜನೆಯ ಲಾಭ ಪಡೆದಿದ್ದಾರೆ. ಈ ಯೋಜನೆಗೆ ಪ್ರತಿ ತಿಂಗಳು 2.93 ಲಕ್ಷ ಟನ್ ಆಹಾರ ಧಾನ್ಯ ಬಿಡುಗಡೆಯಾಗುತ್ತಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಅವರ ಪೌಷ್ಠಿಕಾಂಶದಲ್ಲಿ ಸಾಕಷ್ಟು ಪ್ರೊಟೀನ್‌ಗಳು ದೊರೆಯುವುದನ್ನು ಖಾತರಿಪಡಿಸಲು ಅನ್ನಭಾಗ್ಯ ಯೋಜನೆಯ ಭಾಗವಾಗಿ ಒಂದು ಪಡಿತರ ಚೀಟಿಗೆ ಒಂದು ಕೆ.ಜಿ ಬೇಳೆ ನೀಡುವುದಕ್ಕೆ ಪ್ರಸಕ್ತ ಸಾಲಿನಿಂದ ಚಾಲನೆ ನೀಡಲಾಗಿದೆ.

ಯೋಜನೆಯ ಯಶಸ್ಸನ್ನು ಮನಗಂಡು 2017–18ನೇ ಸಾಲಿನಲ್ಲಿ ಮೊದಲು ನೀಡುತ್ತಿದ್ದ ತಲಾ ಐದು ಕೆ.ಜಿ. ಆಹಾರ ಧಾನ್ಯ ಪ್ರಮಾಣವನ್ನು ಜನತೆಯ ಬೇಡಿಕೆ ಮೇರೆಗೆ ಪ್ರತಿ ವ್ಯಕ್ತಿಗೆ ಏಳು ಕೆ.ಜಿ.ಗೆ ಏರಿಸಲಾಗಿದೆ. ಪಡಿತರ ವ್ಯವಸ್ಥೆಯಿಂದ ಸುಮಾರು 20 ಲಕ್ಷ ಬಡಕುಟುಂಬಗಳನ್ನು ಅನ್ನಭಾಗ್ಯ ಯೋಜನೆ ವ್ಯಾಪ್ತಿಯಲ್ಲಿ ಈಗಾಗಲೇ ತರಲಾಗಿದೆ. ಅರ್ಹತಾ ಮಾನದಂಡಗಳನ್ನು ಸರಳಗೊಳಿಸಿ ಹೊಸ ಪಡಿತರ ಚೀಟಿ ವಿತರಣೆಯ ಸೇವೆಯನ್ನು ಸಕಾಲ ಯೋಜನೆಯಡಿ ತರಲಾಗಿದೆ. ಅದರಂತೆ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಅರ್ಜಿದಾರರ ಮನೆ ಬಾಗಿಲಿಗೆ ಸ್ಪೀಡ್ ಪೋಸ್ಟ್ ಮುಖಾಂತರ ತಲುಪಿಸಲಾಗುತ್ತಿದೆ.

ಸಾಮಾಜಿಕ ಸೇವೆಯಲ್ಲಿ ನಿರತವಾಗಿರುವ ನಾರಿ ನಿಕೇತನ, ವೃದ್ಧಾಶ್ರಮ, ಅಂಧಮಕ್ಕಳ ಶಾಲೆ, ಬಡವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ, ಭಿಕ್ಷುಕರ ಪುನರ್ವಸತಿ ಕೇಂದ್ರ ಮುಂತಾದವುಗಳಿಗೆ ಅನ್ನಭಾಗ್ಯ ಮಾದರಿಯಂತೆಯೇ ಉಚಿತವಾಗಿ ಆಹಾರ ಧಾನ್ಯ ನೀಡುತ್ತಿರುವುದು ರಾಜ್ಯಸರ್ಕಾರದ ಜನಪರ ನಿಲುವಿಗೆ ನಿದರ್ಶನ.

ರಾಜ್ಯದ ಅನಿಲರಹಿತ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕ ಒದಗಿಸಿ ರಾಜ್ಯವನ್ನು ಪಡಿತರ ಸೀಮೆಎಣ್ಣೆಮುಕ್ತ ರಾಜ್ಯವನ್ನಾಗಿ ಮಾಡಲು 'ಅನಿಲ ಭಾಗ್ಯ' ಯೋಜನೆಯನ್ನು ರೂಪಿಸಲಾಗಿದೆ. ಇದರಲ್ಲಿ ಐದು ಲಕ್ಷ ಅರ್ಹ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕಕ್ಕಾಗಿ ಪ್ರತಿ ಫಲಾನುಭವಿಗೆ 1600



**2013ರ ಮೇ 13ರಂದು ಕರ್ನಾಟಕದ 22ನೆಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಶ್ರೀ ಸಿದ್ದರಾಮಯ್ಯ ಅವರು ಅಂದು ನಡೆಸಿದ ಏಕವ್ಯಕ್ತಿ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ಐತಿಹಾಸಿಕ ನಿರ್ಧಾರ ಅನ್ನಭಾಗ್ಯ ಯೋಜನೆ.**





ರೂ. ಸಹಾಯಧನ ವಿತರಣೆ ಹಾಗೂ ಅನಿಲ ಸೌಲಭ್ಯ ಹೊಂದಿದ ಗ್ರಾಮೀಣ ಪ್ರದೇಶದ ಪಡಿತರ ಚೀಟಿದಾರರಿಗೆ, ತಮಗೆ ಹಂಚಿಕೆಯಾದ ಸೀಮೆಎಣ್ಣೆ ಅಥವಾ ಉಚಿತ ರೀಚಾರ್ಜಬಲ್ ಎಲ್.ಇ.ಡಿ. ಸೆಟ್‌ಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗುತ್ತದೆ.

ನ್ಯಾಯಬೆಲೆ ಅಂಗಡಿ ಮಟ್ಟದ ಜಾಗೃತಿ ಸಮಿತಿಗಳನ್ನು ಸದೃಢಗೊಳಿಸಿ ಅವರ ಮೂಲಕ ಸಾಮಾಜಿಕ ಲೆಕ್ಕಪರಿಶೋಧನೆ. ಇ–ಆಡಳಿತ ಇಲಾಖೆಯೊಂದಿಗೆ ಎಲ್ಲಾ ನ್ಯಾಯಬೆಲೆ ಅಂಗಡಿಗಳನ್ನು 'ಸೇವಾಸಿಂಧು' ಕೇಂದ್ರವನ್ನಾಗಿ ಪರಿವರ್ತಿಸುವುದು.

ಹೆಚ್ಚುವರಿ ಗ್ರಾಹಕ ವ್ಯಾಜ್ಯ ಪೀಠಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಿ ಎಲ್ಲಾ ಬಾಕಿ ಉಳಿದ ವ್ಯಾಜ್ಯಗಳನ್ನು ಶಾಸನಬದ್ಧ ಮೂರು ತಿಂಗಳ ಅವಧಿಯೊಳಗೆ ಇತ್ಯರ್ಥಗೊಳಿಸಲು ಅನುವು ಮಾಡುವುದು.

ಅನ್ನಭಾಗ್ಯ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ 'ಪಡಿತರ ಖಾತ್ರಿ' ಯೋಜನೆಯನ್ನು ರೂಪಿಸಲಾಗಿದೆ. ಪಡಿತರ ಖಾತ್ರಿ ಯೋಜನೆ 2014ರ ಫೆಬ್ರುವರಿ ತಿಂಗಳಿನಿಂದ ಜಾರಿಯಾಗಿದೆ. ಇದರಿಂದ ಪ್ರತಿತಿಂಗಳು ಒಂದರಿಂದ ಹತ್ತನೇ ದಿನಾಂಕದವರೆಗೆ ಬೆಳಗ್ಗೆ 8 ರಿಂದ 12 ಮತ್ತು ಸಂಜೆ 4 ರಿಂದ 8 ಗಂಟೆಯವರೆಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆದಿರುವುದು (ಭಾನುವಾರವೂ ಸೇರಿದಂತೆ) ಕಡ್ಡಾಯವಾಗಿದೆ.

ಅನ್ನಭಾಗ್ಯ ಯೋಜನೆಯ ಮೇಲ್ವಿಚಾರಣೆಗೆ ಪ್ರತಿ ನ್ಯಾಯಬೆಲೆ ಅಂಗಡಿ, ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ನಗರ ಸಭೆ ಇಲ್ಲವೆ ಪುರಸಭೆ ಹಾಗೂ ಜಿಲ್ಲಾ ಮಟ್ಟದಲ್ಲಿ ಹೀಗೆ ಪ್ರತಿ ಹಂತದಲ್ಲೂ ಜಾಗೃತ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಆಹಾರಧಾನ್ಯಗಳ ವಿತರಣೆಯ ಮೇಲ್ವಿಚಾರಣೆ ನಡೆಸಲಿವೆ. ಹಾಗೆಯೇ ಆಹಾರ ಧಾನ್ಯಗಳ ದುರ್ಬಳಕೆ ಮಾಡಿಕೊಳ್ಳುವ ಕುಟುಂಬ ಇಲ್ಲವೇ ಬಡವರಿಂದ ಆಹಾರಧಾನ್ಯಗಳನ್ನು ಮರು ಖರೀದಿಸುವ ವ್ಯಾಪಾರಸ್ಥರ ಮೇಲೂ ಜಾಗೃತ ಸಮಿತಿ ಕಣ್ಣಿಡಲಿದೆ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ನಿಯಂತ್ರಣ ಕೊಠಡಿಯಲ್ಲಿ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ. ಶುಲ್ಕ ರಹಿತವಾದ 18004259338 ಈ ದೂರವಾಣಿಗೆ ಬಳಕೆದಾರರು ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. ಈ ನಿಯಂತ್ರಣ ಕೊಠಡಿಗೆ ಬರುವ ದೂರುಗಳಿಗೆ ಇದೇ ಸಹಾಯವಾಣಿಯು ಗ್ರಾಹಕ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ಸಹಾಯವಾಣಿಯ ಸಂಖ್ಯೆ ಎಲ್ಲ ಪಡಿತರ ಚೀಟಿಗಳಲ್ಲಿಯೂ ಮುದ್ರಿತವಾಗಿರುತ್ತದೆ.

ಇದರ ಜೊತೆಗೆ ಶುಲ್ಕ ರಹಿತವಾದ ಇನ್ನೊಂದು ಸಹಾಯವಾಣಿ 1967ರಲ್ಲಿ ಲಭ್ಯವಿದೆ. ಅನ್ನಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ಉಂಟಾಗುವ ಗೊಂದಲಗಳು ಹಾಗೂ ಪಡಿತರ ಚೀಟಿ ವಿತರಣೆ ವ್ಯವಸ್ಥೆಯಲ್ಲಿನ ತೊಂದರೆಗಳ ಬಗ್ಗೆ ಈ 'ಆಹಾರವಾಣಿ' ಎಂಬ ಉಚಿತ ಸಹಾಯವಾಣಿಯಲ್ಲಿ ದೂರು ದಾಖಲಿಸಿ ಪರಿಹಾರ ಪಡೆಯಬಹುದು.



# ಆರೋಗ್ಯ ಸೇವೆಯಲ್ಲಿ ಸದಾ ಮುಂದು..

ರಾಜ್ಯದ ಜನರಿಗೆ ಸಮಗ್ರ ಆರೋಗ್ಯ ಸೇವೆಗಳನ್ನು ನೀಡುವಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಪ್ರಸ್ತುತ ರಾಜ್ಯದಲ್ಲಿ 21 ಜಿಲ್ಲಾಸ್ಪತ್ರೆ, 12 ಪ್ರಧಾನ ಆಸ್ಪತ್ರೆಗಳು, 206 ಸಮುದಾಯ ಆರೋಗ್ಯ ಕೇಂದ್ರಗಳು, 146 ತಾಲೂಕು ಆಸ್ಪತ್ರೆಗಳು, 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 8871 ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಬೆಂಗಳೂರು, ಮೈಸೂರು, ಕೆಜಿಎಫ್‌ಗಳಲ್ಲಿ ಸಾಂಕ್ರಮಿಕ ರೋಗಗಳ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿ ಸಾಂಕ್ರಾಮಿಕ ರೋಗಗಳಾದ ಕಾಲರಾ, ವಾಂತಿಭೇದಿ ರೋಗ, ಗಂಟಲು ಮಾರಿ, ನಾಯಿಕೆಮ್ಮು, ಹೆಚ್1ಎನ್1 ಮುಂತಾದ ಸಾಂಕ್ರಾಮಿಕ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಎಲ್ಲಾ ಜಿಲ್ಲಾಸ್ಪತ್ರೆ ಮತ್ತು ಪ್ರಧಾನ ಆಸ್ಪತ್ರೆಗಳಲ್ಲಿ ಬ್ಲಡ್ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದ್ದು, ಇವುಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಹೆಚ್‌ಐವಿ ಪರಿಶೋಧನಾ ಸೌಲಭ್ಯವನ್ನು ಈ ಕೇಂದ್ರಗಳಲ್ಲಿ ಕಲ್ಪಿಸಲಾಗಿದೆ. ರಕ್ತ ಶೇಖರಣಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ.

ಇಲಾಖೆಯ 21 ಜಿಲ್ಲಾಸ್ಪತ್ರೆ, 3 ಪ್ರಧಾನ ಆಸ್ಪತ್ರೆ ಹಾಗೂ 35 ತಾಲೂಕು ಅಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯವನ್ನು ಒದಗಿಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ತಾಲೂಕು ಅಸ್ಪತ್ರೆಗಳಿಗೂ ಕೂಡಾ ಈ ಸೌಲಭ್ಯವನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

**ಟೆಲಿಮೆಡಿಸನ್**

ಗ್ರಾಮಾಂತರ ಪ್ರದೇಶಗಳ ರೋಗಿಗಳಿಗೆ ವಿಶೇಷ ತಜ್ಞರ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ 21 ಜಿಲ್ಲಾ ಆಸ್ಪತ್ರೆ ಹಾಗೂ 5 ತಾಲ್ಲೂಕು ಆಸ್ಪತ್ರೆಗಳನ್ನು ಟೆಲಿಮೆಡಿಸಿನ್ ಕಾರ್ಯಕ್ರಮದಡಿಯಲ್ಲಿ ಬೆಂಗಳೂರಿನ 9 ಹಾಗೂ ಮೈಸೂರಿನ 2 ವಿಶೇಷ ಪರಿಣಿತ ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸಿ ವಿಡಿಯೋ ಸಂವಾದದ ಮೂಲಕ ವೈದ್ಯಕೀಯ ಸಲಹೆಯನ್ನು ನೀಡಲಾಗುತ್ತಿದೆ.

ಟೆಲಿಮೆಡಿಸಿನ್ ಸೌಲಭ್ಯವನ್ನು ಪ್ರಾಥಮಿಕ ಹಂತದಲ್ಲಿ ಚಾಮರಾಜನಗರ, ಮಂಡ್ಯ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಕಾರವಾರ, ಚಿಕ್ಕಮಗಳೂರು, ಗದಗ ಜಿಲ್ಲಾಸ್ಪತ್ರೆ ಮತ್ತು ಮದ್ದೂರು, ಸಾಗರ, ಯಾದಗಿರಿ ತಾಲೂಕು ಆಸ್ಪತ್ರೆಗಳು, ಹಬ್ ಕೇಂದ್ರಗಳಾದ ಜಯದೇವ ಹೃದ್ರೋಗ ಸಂಸ್ಥೆ, ಸೇಂಟ್‌ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ, ನಾರಾಯಣ ಹೃದಯಾಲಯ, ನಿಮ್ಹಾನ್ಸ್ ಹಾಗೂ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸಲಾಯಿತು. ದ್ವಿತೀಯ ಹಂತದಲ್ಲಿ ಕೋಲಾರ, ಮಡಿಕೇರಿ, ಬೆಳಗಾವಿ, ಧಾರವಾಡ, ದಾವಣಗೆರೆ, ಕಲ್ಬುರ್ಗಿ, ಉಡುಪಿ ಹಾಗೂ ಲಿಂಗಸುಗೂರು ತಾಲೂಕು ಆಸ್ಪತ್ರೆಗಳಿಗೆ ಈ ಸೌಲಭ್ಯ ಒದಗಿಸಲಾಯಿತು. ಬೆಂಗಳೂರಿನ ಬೌರಿಂಗ್, ಲೇಡಿ ಕರ್ಜನ್ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ನೆಫ್ರೋ ಯೂರಾಲಜಿ ಸಂಸ್ಥೆಗಳನ್ನು ಹಬ್ ಕೇಂದ್ರಗಳಾಗಿ ಗುರುತಿಸಲಾಯಿತು.

ಪ್ರಸಕ್ತ ಸಾಲಿನಲ್ಲಿ ಟೆಲಿಮೆಡಿಸನ್ ಸೌಲಭ್ಯವನ್ನು ಬೀದರ್, ವಿಜಯಪುರ ಹಾಗೂ ಕೊಪ್ಪಳ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತಿದೆ.

ಆರೋಗ್ಯ ಕವಚ (108) ಆಂಬ್ಯುಲೆನ್ಸ್ ಸೇವೆ: ಇಲ್ಲಿಯವರೆಗೆ 711 ಆರೋಗ್ಯ ಕವಚ, ಆಂಬ್ಯುಲೆನ್ಸ್ ವಾಹನಗಳು ಇದ್ದದ್ದು ಪ್ರಸಕ್ತ ಸಾಲಿನಲ್ಲಿ ವಾಹನಗಳ ಸಂಖ್ಯೆಯನ್ನು 1538 ಅಂಬ್ಯುಲೆನ್ಸ್ ವಾಹನಗಳಿಗೆ ಏರಿಸಲಾಗಿದೆ.

ಬೈಕ್ ಆಂಬ್ಯುಲೆನ್ಸ್: ನಗರ ಪ್ರದೇಶಗಳಲ್ಲಿ ಬೈಕ್ ಆಂಬ್ಯುಲೆನ್ಸ್ ಸೇವೆ ಉಪಯುಕ್ತವಾಗಿದೆ. ಪ್ರಸ್ತುತ 30 ಬೈಕ್ ಅಂಬ್ಯುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರಿನಲ್ಲಿ 19 ಬೈಕ್ ಆಂಬ್ಯುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ.

ಕಳೆದ 9 ತಿಂಗಳಿನಿಂದ 15 ವರ್ಷದ ಮಕ್ಕಳಿಗೆ ಮಿಸಲ್ಸ್ ಮತ್ತು ರೋಬೆಲ್ಲಾ ನಿರೋಧಕ ಚುಚ್ಚುಮದ್ದು ನೀಡಲಾಗಿದ್ದು, ಈ ಕಾರ್ಯಕ್ರಮದಲ್ಲಿ 74,89.712 ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದು ನೀಡಲಾಗಿದೆ.

ಸಾಮಾನ್ಯ ಜನರಿಗೆ ಗುಣಮಟ್ಟದ ಔಷಧಿಗಳನ್ನು ಕಡಿಮೆ



**ರಾಜ್ಯದ ಜನರಿಗೆ ಸಮಗ್ರ ಆರೋಗ್ಯ ಸೇವೆಗಳನ್ನು ನೀಡುವಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಪ್ರಸ್ತುತ ರಾಜ್ಯದಲ್ಲಿ 21 ಜಿಲ್ಲಾಸ್ಪತ್ರೆ, 12 ಪ್ರಧಾನ ಆಸ್ಪತ್ರೆಗಳು, 206 ಸಮುದಾಯ ಆರೋಗ್ಯ ಕೇಂದ್ರಗಳು, 146 ತಾಲೂಕು ಆಸ್ಪತ್ರೆಗಳು, 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 8871 ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.**





ಬೆಲೆಯಲ್ಲಿ ಒದಗಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ 200 ಜನೌಷಧಿ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ.

ರಾಜ್ಯದಲ್ಲಿ 1898 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ 56 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಶವಾಗಾರ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ.

ಮಾರಣಾಂತಿಕ ರೋಗಗಳಿಂದ ನರಳುತ್ತಿರುವ ರೋಗಿಗಳಿಗೆ ಉಪಶಾಮಕ ಆರೈಕೆ ನೀಡಲು ರಾಜ್ಯದ 6 ಜಿಲ್ಲಾಸ್ಪತ್ರೆಗಳಲ್ಲಿ (ಬೆಂಗಳೂರು, ಮಂಗಳೂರು, ಹಾಸನ, ಧಾರವಾಡ ಶಿವಮೊಗ್ಗ ಮತ್ತು ಮೈಸೂರು) ಉಪಶಾಮಕ ಆರೈಕೆ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ, ಜಯನಗರ ಹಾಗೂ ಸಂಜಯ್‌ಗಾಂಧಿ ಅಪಘಾತ ಚಿಕಿತ್ಸಾ ಕೇಂದ್ರಗಳಲ್ಲಿ ಈ ಆಸ್ಪತ್ರೆ ತಂತ್ರಾಂಶ ಅಳವಡಿಸಲಾಗಿದೆ.

5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ ಕಡಿಮೆಗೊಂಡ 6 ರಾಜ್ಯಗಳ ಪೈಕಿ ಕರ್ನಾಟಕವು ಒಂದಾಗಿದೆ. ಪ್ರಸ್ತುತ 5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವು 1000 ಸಜೀವ ಜನನಕ್ಕೆ 31 ಆಗಿರುತ್ತದೆ. ತಾಯಂದಿರ ಮರಣ ಪ್ರಮಾಣ ಈ ಮೊದಲು ಪ್ರತಿ 1 ಲಕ್ಷ ಜೀವಂತ ಜನನಗಳಿಗೆ 213 ಇದ್ದದ್ದು ಈಗ 133 ಕ್ಕೆ ಇಳಿದಿದೆ.



ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ತೀವ್ರ ಮಾನಸಿಕ ಕಾಯಿಲೆಯುಳ್ಳ ರೋಗಿಗಳ ಆರೈಕೆಗೆ ವೃತ್ತಿ ತರಬೇತಿ ನೀಡಿ ಪುನಶ್ಚೇತನಗೊಳಿಸಲು ಪುನರ್ ವಸತಿ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ 15 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ನಡೆಸಲಾಗುತ್ತಿದೆ.

**ಆರೋಗ್ಯ ಸಹಾಯವಾಣಿ (104)**

ಜನರಿಗೆ ಆರೋಗ್ಯದ ಬಗ್ಗೆ ಮಾಹಿತಿ ನೀಡಲು ಒಂದು ಕರೆ ಕೇಂದ್ರವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಬೆಂಗಳೂರಿನಲ್ಲಿ ಮತ್ತೊಂದು ಕರೆ ಕೇಂದ್ರವನ್ನು ಸ್ಥಾಪಿಸಲಾಗಿದೆ.





## ಕರ್ನಾಟಕ ಸರ್ಕಾರ

# ಚಿತ್ರೋದ್ಯಮದ ಕಾಮಧೇನು

ಬಾನಾಸು

ದೇಶದ ಯಾವ ರಾಜ್ಯವೂ ನೀಡದ ಉತ್ತೇಜನವನ್ನು ಕರ್ನಾಟಕ ಸರ್ಕಾರ ಕನ್ನಡ ಚಿತ್ರೋದ್ಯಮಕ್ಕೆ ನೀಡುತ್ತಿದೆ. 1966–67ನೇ ಸಾಲಿನಿಂದ ಆರಂಭವಾದ ಈ ಉತ್ತೇಜನದಿಂದ ಮದರಾಸಿನಲ್ಲಿ ನೆಲೆಸಿದ್ದ ಕನ್ನಡ ಚಿತ್ರೋದ್ಯಮ ಸಂಪೂರ್ಣವಾಗಿ ಕರ್ನಾಟಕಕ್ಕೆ ಬರುವ ಹಾಗಾಯಿತು; ಮಾತ್ರವಲ್ಲ, ಹೆಚ್ಚು ಹೆಚ್ಚು ಸದಭಿರುಚಿಯ, ಸಮಾಜಮುಖಿ ಚಿತ್ರಗಳ ನಿರ್ಮಾಣಕ್ಕೆ ದಾರಿಯಾಯಿತು.

ಕನ್ನಡ ಚಲನಚಿತ್ರ ಚರಿತ್ರೆಯಲ್ಲಿ ಎಪ್ಪತ್ತರ ದಶಕವನ್ನು ಸುವರ್ಣ ದಶಕ ಎಂದೇ ಉಲ್ಲೇಖಿಸಲಾಗುತ್ತಿದೆ. ಚಿತ್ರರಂಗದ ಸೃಜನಶೀಲರಿಗೆ ಇಂತಹದೊಂದು ಇತಿಹಾಸ ನಿರ್ಮಿಸುವಲ್ಲಿ ಸರ್ಕಾರದ ಉತ್ತೇಜನವೇ ಒತ್ತಾಸೆಯಾಗಿತ್ತು ಎನ್ನುವುದು ಉಲ್ಲೇಖಾರ್ಹ. ಚಲನಚಿತ್ರಗಳಿಗೆ ಸಹಾಯಧನ, ತೆರಿಗೆ ವಿನಾಯಿತಿ, ವಾರ್ಷಿಕ ಪ್ರಶಸ್ತಿಗಳು, ವೈಯಕ್ತಿಕ ಪ್ರಶಸ್ತಿಗಳು, ಜೀವಿತಾವಧಿ ಕೊಡುಗೆಗೆ ಪ್ರಶಸ್ತಿಯ ಗೌರವ ಇವೇ ಮೊದಲಾದವು ಕನ್ನಡ ಮತ್ತು ಪ್ರಾದೇಶಿಕ ಭಾಷಾ ಚಿತ್ರರಂಗದ ಪ್ರಗತಿಗೆ ಪೂರಕವಾಗಿವೆ.

ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಮೇಲೆ ಚಿತ್ರರಂಗದ ಕಾಯಕಲ್ಪಕ್ಕೆ ಇನ್ನಷ್ಟು ಉತ್ತೇಜನ ಸಿಕ್ಕಿದೆ. ಮುಖ್ಯಮಂತ್ರಿಗಳು ಉದ್ಯಮ ಕೇಳಿದ್ದನ್ನೆಲ್ಲ ಮರುಪ್ರಶ್ನಿಸದೆ ನೀಡಿದರು. ಕನ್ನಡ ಚಿತ್ರರಂಗದ ಪಾಲಿಗೆ ಅವರು ಅಕ್ಷರಶಃ ಕಾಮಧೇನುವಾಗಿದ್ದಾರೆ. ಮುಖ್ಯಮಂತ್ರಿಯಾಗುವ ಮೊದಲು, ಅವರು ಅರ್ಥಸಚಿವರಾಗಿದ್ದ ದಿನಗಳಲ್ಲಿನ ಕೊಡುಗೆ ಕೂಡಾ ಕಡಿಮೆ ಏನಲ್ಲ.

ಕನ್ನಡ ಮತ್ತು ಪ್ರಾದೇಶಿಕ ಭಾಷಾ ಚಿತ್ರಗಳಿಗೆ ಸಂಪೂರ್ಣ ಮನರಂಜನಾ ತೆರಿಗೆ ವಿನಾಯಿತಿ ನೀಡುವ ಮೂಲಕ ಪರಭಾಷಾ ಚಿತ್ರಗಳ ಜೊತೆ ವ್ಯಾವಹಾರಿಕವಾಗಿ ಇನ್ನಷ್ಟು ಸಮರ್ಥವಾಗಿ ಸ್ಪರ್ಧಿಸುವಂತೆ ಅವರು ತೊಂಬತ್ತರ ದಶಕದಲ್ಲಿಯೇ ಅನುಕೂಲ ಮಾಡಿಕೊಟ್ಟಿದ್ದರು. ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸ್ಥಾಪನೆಯ ನಿರ್ಧಾರವೂ ಆಗಲೇ ಆಗಿತ್ತು. ಇತರ ಕಾರಣಗಳಿಂದಾಗಿ ಅದು ಅಧಿಕೃತವಾಗಿ ಕಾರ್ಯನಿರ್ವಹಿಸಲು ವರ್ಷಗಳು ಬೇಕಾದವು. ಮಕ್ಕಳ ಚಿತ್ರಗಳಿಗೆ ವಿಶೇಷ ಸಹಾಯಧನ ಇಪ್ಪತ್ತೈದು ಲಕ್ಷ ನೀಡುವ ಕೊಡುಗೆಯೂ ಅವರದೇ.

### ಸಹಾಯಧನ

ಹಾಲಿ ಸರ್ಕಾರದ ಚುಕ್ಕಾಣಿ ಕೈಗೆತ್ತಿಕೊಂಡ ನಂತರ ಕನ್ನಡ ಮತ್ತು ಪ್ರಾದೇಶಿಕ ಭಾಷಾ ಚಿತ್ರರಂಗಗಳಿಗೆ ಅವರು ನೀಡಿದ ಕೊಡುಗೆ ಗಣನೀಯ. ವಿಶೇಷವಾಗಿ ಸಹಾಯಧನ. ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸುವ ವೇಳೆ ಸದಭಿರುಚಿಯ, ಉತ್ತಮ ಗುಣಮಟ್ಟದ 75 ಚಿತ್ರಗಳಿಗೆ ಸಹಾಯಧನ ನೀಡಲಾಗುತ್ತಿತ್ತು. ಅವರು ಈ ಸಂಖ್ಯೆಯನ್ನು 100ಕ್ಕೆ ಏರಿಸಿದರು.



ಕನ್ನಡದಲ್ಲಿ ತಯಾರಾಗುವ ಚಿತ್ರಗಳ ಸಂಖ್ಯೆ ಕಳೆದೆರಡು ವರ್ಷಗಳಲ್ಲಿ ಇನ್ನೂರರ ಗಡಿದಾಟಿದೆ. 2016ರಲ್ಲಿ 209 ಕನ್ನಡ ಚಿತ್ರಗಳು ತಯಾರಾಗಿವೆ. ತುಳು, ಕೊಡವ, ಕೊಂಕಣಿ, ಬಂಜಾರ ಮೊದಲಾದ ಭಾಷೆಗಳಲ್ಲಿ ತಯಾರಾದ ಚಿತ್ರಗಳೂ ಸೇರಿ ಈ ಸಂಖ್ಯೆ 225 ದಾಟಿದೆ. ಈ ಸಾಲಿನಿಂದ 100ರ ಬದಲು 125 ಚಿತ್ರಗಳಿಗೆ ಸಹಾಯಧನ ನೀಡಲು ಸರ್ಕಾರ ನಿರ್ಧರಿಸಿದೆ.

ಮಕ್ಕಳ ಚಿತ್ರಗಳು, ಐತಿಹಾಸಿಕ ಚಿತ್ರಗಳು, ಪ್ರವಾಸೋದ್ಯಮಕ್ಕೆ ಪೂರಕವಾಗುವ ಚಿತ್ರಗಳಿಗೆ ಇಪ್ಪತ್ತೈದು ಲಕ್ಷ ರೂ, ಸಾಹಿತ್ಯ ಕೃತಿ ಆಧರಿಸಿದ ಚಿತ್ರಗಳು ಮತ್ತು ಪ್ರಶಸ್ತಿ ವಿಜೇತ ಚಿತ್ರಗಳಿಗೆ ಹದಿನೈದು ಲಕ್ಷ ರೂ.ಗಳಂತೆ ಸಹಾಯಧನ ನೀಡಲಾಗುತ್ತಿದೆ. ಉಳಿದಂತೆ ತಲಾ ಹತ್ತು ಲಕ್ಷ ರೂ. ಸಹಾಯಧನ.

### ಪ್ರಶಸ್ತಿ ಪ್ರದಾನ ದಿನಾಂಕ

ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ನಿಗದಿತ ದಿನಾಂಕ ಈ ತನಕ ಇರಲಿಲ್ಲ. 1994ರಲ್ಲಿ ಹಿರಿಯ ಪತ್ರಕರ್ತ ವಿ.ಎನ್.ಸುಬ್ಬರಾಯರ ಅಧ್ಯಕ್ಷತೆಯ ತಜ್ಞರ ಸಮಿತಿಯ ಶಿಪಾರಸುಗಳಲ್ಲಿ ಈ ಒತ್ತಾಯವೂ ಇತ್ತು. ಈ ಬಾರಿ, 2016ರ ಸಾಲಿನ ಪ್ರಶಸ್ತಿ ಪ್ರದಾನದಿಂದ ಆ ಬೇಡಿಕೆ ಈಡೇರಿದೆ. 2015ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ನೀಡಿದ ಆಶ್ವಾಸನೆಯಂತೆ, ಈ ಬಾರಿ ಏಪ್ರಿಲ್ 24, ವರನಟ ಡಾ. ರಾಜಕುಮಾರ್ ಅವರ ಜನ್ಮದಿನದಂದು ಪ್ರಶಸ್ತಿ ಪ್ರದಾನ ನಡೆದಿದೆ. ಮುಂದಿನ ವರ್ಷಗಳಲ್ಲಿಯೂ ಇದು ಮುಂದುವರೆಯಲಿದೆ.

### ಜನತಾ ಚಿತ್ರಮಂದಿರಗಳ ನಿರ್ಮಾಣಕ್ಕೆ ಪ್ರೋತ್ಸಾಹ

ಕನ್ನಡ ಚಿತ್ರಗಳು ಚಿತ್ರಮಂದಿರಗಳ ಕೊರತೆಯನ್ನು ಎದುರಿಸುತ್ತಿವೆ. ಇದರಿಂದಾಗಿ ಅವುಗಳ ಬಿಡುಗಡೆ ಕಷ್ಟಸಾಧ್ಯವಾಗುತ್ತಿದೆ. 2016–17 ನೇ ಸಾಲಿನ ಮುಂಗಡಪತ್ರದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಜನತಾ ಚಿತ್ರಮಂದಿರ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಲಾಗುವುದು ಎಂದು ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಆದೇಶವನ್ನು ಹೊರಡಿಸಲಾಗಿದೆ. ರಾಜ್ಯದ ಯಾವುದೇ ಭಾಗದಲ್ಲಿ ನಿರ್ಮಾಣವಾಗುವ ಕನಿಷ್ಠ 200 ಆಸನಗಳ ಸಾಮರ್ಥ್ಯದ ಏಕಪರದೆ ಅಥವಾ ಕನಿಷ್ಠ 150 ಆಸನಗಳು ಹೊಂದಿದ ಬಹುಪರದೆ ಚಿತ್ರಮಂದಿರಗಳು ಜನತಾ ಚಿತ್ರಮಂದಿರ ಯೋಜನೆಯಡಿ ಪ್ರೋತ್ಸಾಹಧನ ಪಡೆಯುವ ಅರ್ಹತೆ ಹೊಂದಿರುತ್ತವೆ.

ಹೊಸದಾಗಿ ನಿರ್ಮಾಣವಾಗುವ ಏಕಪರದೆ ಚಿತ್ರ ಮಂದಿರಗಳಿಗೆ 50 ಲಕ್ಷ ರೂ. ಅದೇ ರೀತಿ ಬಹುಪರದೆ ಚಿತ್ರಮಂದಿರಗಳಿಗೂ ಸಹ ಪ್ರತಿ ಪರದೆಗೆ ಗರಿಷ್ಠ 50 ಲಕ್ಷ ರೂ. ಪ್ರೋತ್ಸಾಹಧನ ನೀಡಲಾಗುವುದು. ಗರಿಷ್ಠ ಎರಡು ಪರದೆಗಳಿಗೆ ಈ ಸೌಲಭ್ಯ ವಿಸ್ತರಿಸಲು ಅವಕಾಶವಿರುತ್ತದೆ. ಈಗಾಗಲೇ ಚಾಲ್ತಿಯಲ್ಲಿರುವ ಏಕಪರದೆ ಚಿತ್ರಮಂದಿರವನ್ನು ಬಹುಪರದೆ ಚಿತ್ರ ಮಂದಿರವನ್ನಾಗಿ ಮಾರ್ಪಡಿಸಿದಲ್ಲಿ ಮೂಲ ಪರದೆ ಹೊರತುಪಡಿಸಿ ಹೊಸದಾಗಿ ನಿರ್ಮಾಣವಾಗುವ ಪ್ರತಿ ಪರದೆಗೂ ಗರಿಷ್ಟ 25 ಲಕ್ಷ ರೂ. ಪ್ರೋತ್ಸಾಹ ಧನ ನೀಡಲಾಗುವುದು ಎಂದಿದೆ ಆದೇಶ. ರಾಜ್ಯಾದ್ಯಂತ 300 ಜನತಾ ಚಿತ್ರಮಂದಿರಗಳಿಗೆ ಈ ಸಹಾಯ ಸಿಗಲಿದೆ.

### ಮಲ್ಟಿಪ್ಲೆಕ್ಸ್‌ಗಳಲ್ಲಿ

ಚಿತ್ರಮಂದಿರ ಸಂಕೀರ್ಣ(ಮಲ್ಟಿಪ್ಲೆಕ್ಸ್)ಗಳಲ್ಲಿ ಕನ್ನಡ ಚಿತ್ರಗಳ ಕುರಿತ ಮಲತಾಯಿ ಧೋರಣೆಯ ಕುರಿತಂತೆ ಸಾಕಷ್ಟು ದೂರು ಇತ್ತು. ಜೊತೆಗೆ ಅವು ವಿಧಿಸುವ ಪ್ರವೇಶ ಶುಲ್ಕ. ಈ ಬಾರಿಯ ಮುಂಗಡ ಪತ್ರದಲ್ಲಿ ಅದರ ಕುರಿತಂತೆಯೂ ಹೇಳಲಾಗಿದೆ. ಅಲ್ಲಿ ಗರಿಷ್ಠ 200 ರೂಪಾಯಿಗೆ ಮೀರದಂತೆ ಪ್ರವೇಶದರ ಇರಬೇಕು ಹಾಗೂ ಕನ್ನಡ ಚಿತ್ರಗಳಿಗೆ ಮಧ್ಯಾಹ್ನ 1.30ರಿಂದ 7.30ರ ವರೆಗೆ ಪ್ರದರ್ಶನ ಸಮಯ ನೀಡಬೇಕು ಎಂದು ಹೇಳಿದ್ದಾರೆ. ನೆರೆಯ ತಮಿಳುನಾಡಿನಲ್ಲಿ ಪ್ರವೇಶದರದಲ್ಲಿ ನಿಯಂತ್ರಣ ಇದೆ.

### ದತ್ತಿನಿಧಿ ಮೊತ್ತ ಏರಿಕೆ

ಕನ್ನಡ ಚಿತ್ರರಂಗದ ಕಾರ್ಮಿಕರು, ತಂತ್ರಜ್ಞರು ಮತ್ತು ಕಲಾವಿದರ ಆರೋಗ್ಯಸೇವೆಗಾಗಿ ಈಗಾಗಲೇ ದತ್ತಿನಿಧಿಯೊಂದನ್ನು ಸ್ಥಾಪಿಸಲಾಗಿತ್ತು. ಅದಕ್ಕಾಗಿ ಈ ಹಿಂದೆ ಒಂದು ಕೋಟಿ ರೂ. ಇಡಲಾಗಿತ್ತು. ಈ ಬಾರಿ ಮುಂಗಡಪತ್ರದಲ್ಲಿ ಅದನ್ನು ಹತ್ತು ಕೋಟಿಗೆ ಏರಿಸಲಾಗಿದೆ. 'ಮಾಸ್ತಿಗುಡಿ' ಚಿತ್ರದ ಸಂದರ್ಭದಲ್ಲಿ ದುರಂತ ಸಾವಿಗೀಡಾದ ಇಬ್ಬರು ಕಲಾವಿದರ ಕುಟುಂಬಕ್ಕೆ ತಲಾ ಐದು ಲಕ್ಷ, ನಿರ್ದೇಶಕ ಎ.ಟಿ.ರಘು ಅವರ ಚಿಕಿತ್ಸೆ ವೆಚ್ಚಕ್ಕೆ ಐದು ಲಕ್ಷ ರೂಪಾಯಿಗಳನ್ನು ನೀಡಲಾಗಿದೆ.

### ಅಮೃತಮಹೋತ್ಸವ ಭವನ

ಕನ್ನಡ ವಾಕ್ಚಿತ್ರ ಅಮೃತಮಹೋತ್ಸವ 2009ರಲ್ಲಿ ನಡೆಯಿತು. ಅದರ ನೆನಪಲ್ಲಿ ಕಟ್ಟಲಾಗುತ್ತಿರುವ 'ಅಮೃತಭವನ'ದ ಕಾಮಗಾರಿ ಬಹುತೇಕ ಪೂರ್ಣವಾಗಿದೆ. ಅಲ್ಲಿ ಚಲನಚಿತ್ರ ಅಕಾಡೆಮಿಯ ಕಾರ್ಯಾಲಯ, ಪ್ರದರ್ಶನ ಮಂದಿರ, ಚಲನಚಿತ್ರಕ್ಕೆ ಸಂಬಂಧ ಪಟ್ಟ ಗ್ರಂಥಾಲಯ, ಪ್ರಾಚ್ಯಾಗಾರ ಮುಂತಾದವು ಇರಲಿವೆ. ಚಲನಚಿತ್ರ ಕುರಿತ ಅಧ್ಯಯನ, ಸಂಶೋಧನೆ ಮಾಡುವ ಆಸಕ್ತರಿಗೆ ಇದು ಪೂರಕ ಸಂಪನ್ಮೂಲ ಕೇಂದ್ರವಾಗುವಂತೆ ನೋಡಿಕೊಳ್ಳುವ ಇಂಗಿತ ಸರ್ಕಾರದ್ದು.

### ಡಾ.ರಾಜ್, ಡಾ.ವಿಷ್ಣು ಸ್ಮಾರಕಗಳು

ಬೆಂಗಳೂರಿನಲ್ಲಿ ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ವರನಟ ಡಾ. ರಾಜಕುಮಾರ್ ಸ್ಮಾರಕವನ್ನು ಮಾನ್ಯ ಮುಖ್ಯಮಂತ್ರಿಗಳು 2014ರ ನವೆಂಬರ್ 29ರಂದು ಲೋಕಾರ್ಪಣೆ ಮಾಡಿದರು. ಕೇಂದ್ರ ಸಚಿವ ಅನಂತಕುಮಾರ್, ರಾಜ್ಯ ಮಂತ್ರಿಮಂಡಲದ ಸದಸ್ಯರು, ಜನಪ್ರಿಯ ಕಲಾವಿದರಾದ ರಜನಿಕಾಂತ್, ಚಿರಂಜೀವಿ ಸೇರಿದಂತೆ ಭಾರತೀಯ ಚಿತ್ರೋದ್ಯಮದ ಗಣ್ಯರು ಈ ಸಮಾರಂಭಕ್ಕೆ ಸಾಕ್ಷಿಯಾದರು. ರಾಜಕುಮಾರ್ ಅವರ ಪುಣ್ಯತಿಥಿ ಮತ್ತು ಜನ್ಮದಿನಗಳಂದು ಸಹಸ್ರಾರು ಮಂದಿ, ಇತರ ದಿನಗಳಲ್ಲಿ ನೂರಾರು ಮಂದಿ ಅಲ್ಲಿಗೆ ಭೇಟಿ ನೀಡಿ ತಮ್ಮ ಗೌರವ ಸಲ್ಲಿಸುತ್ತಿದ್ದಾರೆ.

ಬೆಂಗಳೂರಿನಲ್ಲಿ ಸ್ಥಾಪನೆಯಾಗಬೇಕಾಗಿದ್ದ ಡಾ.ವಿಷ್ಣುವರ್ಧನ್ ಸ್ಮಾರಕದ ತಾಂತ್ರಿಕ ಅಡಚಣೆಗಳ ಕಾರಣ ಸ್ಥಗಿತವಾಗಿತ್ತು. ಇದೀಗ ಅವರ ಹುಟ್ಟೂರಾದ ಮೈಸೂರಲ್ಲಿ ಅದನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಅದಕ್ಕಾಗಿ 11 ಕೋಟಿ ರೂಪಾಯಿ ನೀಡಲಾಗಿದೆ.

### ಮೈಸೂರಲ್ಲಿ ಚಿತ್ರನಗರಿ

ಭಾರತ ಚಿತ್ರೋದ್ಯಮ ಇತಿಹಾಸದಲ್ಲಿ ಚಿತ್ರನಗರಿಯ ಕನಸನ್ನು ಮೊದಲು ಕಂಡ ರಾಜ್ಯ ಕರ್ನಾಟಕ (ಆಗ ಮೈಸೂರು). ದೇವರಾಜ ಅರಸು ಅವರ ಆಡಳಿತಾವಧಿಯಲ್ಲಿ ಬೆಂಗಳೂರಿನ ಹೊರವಲಯದ ಹೆಸರಘಟ್ಟದ ಬಳಿ, ಸುಮಾರು ನಾನೂರು ಎಕರೆ ಪ್ರದೇಶದಲ್ಲಿ ಚಿತ್ರನಗರಿಯ ಯೋಜನೆ 1972ರಲ್ಲಿ ಶಂಕುಸ್ಥಾಪನೆಯೊಂದಿಗೆ ಅರಂಭವಾಗಿತ್ತು. ಆದರೆ ಅದು ಕಾರಣಾಂತರಗಳಿಂದ ಈಡೇರಲಿಲ್ಲ. ಇದೀಗ ಮಾನ್ಯ ಮುಖ್ಯಮಂತ್ರಿಗಳು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಚಲನಚಿತ್ರ ಸಂಸ್ಕೃತಿ ಹರಡಲು ಪೂರಕವಾಗುವ ಚಿತ್ರನಗರಿಯ ಯೋಜನೆ ಕಾರ್ಯಗತಗೊಳಿಸಲು ಸಿದ್ಧರಾಗಿದ್ದಾರೆ. ಅವರ ಮಹತ್ವಾಕಾಂಕ್ಷೆಯ ಈ ಯೋಜನೆಗೆ ತಮ್ಮ ಸ್ವಕ್ಷೇತ್ರದ ಇಮ್ಮಾವು ಗ್ರಾಮದಲ್ಲಿ 110 ಎಕರೆ ಜಾಗವನ್ನು ನೀಡಲಾಗಿದೆ. ಪ್ರವಾಸೋದ್ಯಮ ಇಲಾಖೆ ಈ ಜವಾಬ್ದಾರಿಯನ್ನು ನಿರ್ವಹಿಸಲಿದೆ.

ಪ್ರವಾಸೋದ್ಯಮ ಇಲಾಖೆ ಚಿತ್ರನಗರಿಯ ಸ್ಥಾಪನೆ ಮಾತ್ರವಲ್ಲದೆ ರಾಜ್ಯದಲ್ಲಿ ಚಲನಚಿತ್ರ ಪ್ರವಾಸೋದ್ಯಮದ ನಿಟ್ಟಿನಲ್ಲೂ ಯೋಚಿಸುತ್ತಿದೆ. ರಾಮನಗರದಲ್ಲಿ ಹಿಂದಿ ಚಿತ್ರ 'ಶೋಲೆ' ಚಿತ್ರೀಕರಣವಾದ ಪ್ರದೇಶ ಸೇರಿದಂತೆ ಹಲವು ಚಿತ್ರೀಕರಣ ತಾಣಗಳು ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಲಿದೆ. ಅಂತೆಯೇ ದೇಶವಿದೇಶಗಳ ಆಸಕ್ತ ಚಲನಚಿತ್ರ ತಯಾರಕರನ್ನು ನಾಡಿನ ವಿವಿಧ ಪ್ರೇಕ್ಷಣೀಯ ತಾಣಗಳಲ್ಲಿ ಚಿತ್ರೀಕರಿಸಲು ಅನುಕೂಲ ವಾತಾವರಣ ಕಲ್ಪಿಸಿ ಆಹ್ವಾನಿಸುವ ಇರಾದೆ ಇದೆ. ಈಗಾಗಲೇ ಚಿತ್ರೀಕರಣಕ್ಕೆ ಅನುಮತಿ ನೀಡುವ ಏಕಗವಾಕ್ಷಿ ಪದ್ಧತಿ, ಜಾಲತಾಣಗಳ ಮೂಲಕ ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಚಲನಚಿತ್ರ ಘಟಕ ಕಲ್ಪಿಸಿದೆ.

### ಅಕಾಡೆಮಿಯ ಮೂಲಕ

ರಾಜ್ಯ ಚಲನಚಿತ್ರ ಅಕಾಡೆಮಿಯ ಮೂಲಕ ಚಲನಚಿತ್ರ ಸಂಸ್ಕೃತಿಯನ್ನು ಪಸರಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದ 6, 7, 8 ಮತ್ತು 9ನೇ ಆವೃತ್ತಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆಯಿತು. ಬೆಂಗಳೂರು ಚಿತ್ರೋತ್ಸವ ಮೈಸೂರಿಗೂ ವಿಸ್ತರಿಸಿದ್ದು 8ನೇ ಆವೃತ್ತಿಯಿಂದ. ಈ ಮೂಲಕ ಮೈಸೂರಿನ ಚಿತ್ರಾಸಕ್ತರಿಗೆ ದೇಶವಿದೇಶಗಳ ಚಿತ್ರಗಳನ್ನು ನೋಡುವ ಅವಕಾಶವನ್ನು ಕಲ್ಪಿಸಿಕೊಡಲಾಯಿತು. ಬೆಂಗಳೂರಿನಲ್ಲಿ ವಿಧಾನಸೌಧದ ಮುಂದೆ ಉದ್ಘಾಟನೆ, ಮೈಸೂರು ಅರಮನೆಯ ಮುಂದೆ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ. ದೇಶದಲ್ಲಿ ನಡೆಯುತ್ತಿರುವ ಚಿತ್ರೋತ್ಸವಗಳಲ್ಲೇ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವ ಮಹತ್ವದ್ದಾಗಿ ಸ್ಥಾನ ಪಡೆಯುತ್ತಿದೆ.

ಅಕಾಡೆಮಿಯು ಚಲನಚಿತ್ರ ರಸಗ್ರಹಣ ಶಿಬಿರ, ಬೇರೆ ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳ ಉತ್ಸವ, ಪನೋರಮಾ ಚಿತ್ರಗಳ ಪ್ರದರ್ಶನ ಇವೇ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡ ಚಿತ್ರೋದ್ಯಮ ಮತ್ತು ಮಾಧ್ಯಮಗಳಿಗೆ ನೆರವಾಗುತ್ತಿದೆ. ಕಳೆದ ವರ್ಷ ಮಕ್ಕಳ ಚಿತ್ರೋತ್ಸವವನ್ನು ಕೂಡಾ ಹಮ್ಮಿಕೊಳ್ಳಲಾಗಿದೆ. ಪ್ರಶಸ್ತಿ ವಿಜೇತ ಚಿತ್ರಗಳ ಉತ್ಸವವನ್ನು ಈ ಬಾರಿಯಿಂದ ಆರಂಭಿಸಲಾಗಿದೆ. 2016ರಲ್ಲಿ ತಯಾರಾಗಿ ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿ ಪಡೆದ ಮತ್ತು ಭಾರತದ ಅಂತರಾಷ್ಟ್ರೀಯ ಚಿತ್ರೋತ್ಸವದ ಪನೋರಮಾ ವಿಭಾಗದಲ್ಲಿ ಪ್ರದರ್ಶನ ಕಂಡ ಕನ್ನಡ ಮತ್ತು ಪ್ರಾದೇಶಿಕ ಭಾಷಾ ಚಿತ್ರಗಳನ್ನು ರಾಜಧಾನಿ ಮಾತ್ರವಲ್ಲದೆ ಇತರ ನಗರಗಳಲ್ಲೂ ಏರ್ಪಡಿಸುವ ಯೋಜನೆ ಇದು.

ಚಲನಚಿತ್ರ ಸಂಗೀತವನ್ನು ನಾಡಿನಾದ್ಯಂತ ಪಸರಿಸುವ ಕೆಲಸವೂ ನಡೆದಿದೆ. ಎಲ್ಲ ಜಿಲ್ಲೆಗಳಲ್ಲಿ ವಾರ್ತಾ ಇಲಾಖೆ ಗಾನಯಾನ ಕಾರ್ಯಕ್ರಮದ ಮೂಲಕ ಈ ಕೆಲಸವನ್ನು ಮಾಡುತ್ತಿದೆ.

ನಮ್ಮ ಕಲಾವಿದರು, ತಂತ್ರಜ್ಞರು ಯಾರಿಗೇನೂ ಕಡಿಮೆ ಇಲ್ಲ. ಒಳ್ಳೆಯ ಕಥೆ, ಸಾಮಾಜಿಕ ಸಂದೇಶದ ಚಿತ್ರಗಳನ್ನು ಉದ್ಯಮ ನೀಡಲಿ. ದ್ವಂದ್ವಾರ್ಥದ ಸಂಭಾಷಣೆ ಬೇಡ. ಅಶ್ಲೀಲತೆ ಬೇಡ. ಭಾಷೆ ಗಂಭೀರವಾಗಿರಲಿ, ಘನತೆಯಿಂದ ಕೂಡಿರಲಿ, ಕನ್ನಡ ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತಿರಲಿ, ಆ ನಿಟ್ಟಿನಲ್ಲಿ ಚಿತ್ರರಂಗ ಹೆಜ್ಜೆ ಇಡಲಿ' ಎಂದು ಕನ್ನಡ ಚಲನಚಿತ್ರೋದ್ಯಮದ ಪ್ರಗತಿಗೆ ಪೂರಕವಾದ ಎಲ್ಲ ಬೇಡಿಕೆಗಳಿಗೂ ಸ್ಪಂದಿಸಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪ್ರಶಸ್ತಿ ಪ್ರದಾನದ ದಿನ ಹೇಳಿದ ಮಾತನ್ನು ನಡೆಸಿಕೊಡಬೇಕಾದ ಹೊಣೆ ಚಲನಚಿತ್ರೋದ್ಯಮದ ಮೇಲಿದೆ.



# ಪೌಷ್ಟಿಕಾಂಶದ ಸಿರಿ
# 'ಸಿರಿಧಾನ್ಯಗಳು'

**ಕ**ಳೆದ ಮೂರ್‍ನಾಲ್ಕು ವರ್ಷಗಳ ಹಿಂದೆ ಬೆಳೆ ಮತ್ತು ಇಳುವರಿಗಳ ಕುರಿತು ಮಾನ್ಯ ಕೃಷಿ ಸಚಿವರಾದ ಶ್ರೀ ಕೃಷ್ಣ ಬೈರೇಗೌಡ ಅವರು ಬೆಳೆ ಸಮೀಕ್ಷೆ ನಡೆಸುವಾಗ ಸಾಂಪ್ರದಾಯಿಕ ಬೆಳೆಗಳಾದ ರಾಗಿ (ದಕ್ಷಿಣ ಭಾಗದಲ್ಲಿ) ಹಾಗೂ ಜೋಳ (ಉತ್ತರಕರ್ನಾಟಕದಲ್ಲಿ) ಬೆಳೆಗಳ ಇಳುವರಿ ಗಮನೀಯವಾಗಿ ಕುಂಠಿತವಾಗುತ್ತಿರುವುದರ ಕುರಿತು ಆತಂಕ ವ್ಯಕ್ತಪಡಿಸಿದ್ದರು.

ಕರ್ನಾಟಕದಲ್ಲಿ ರಾಗಿ ಮತ್ತು ಜೋಳ ಪ್ರಮುಖ ಕೃಷಿ ಬೆಳೆಗಳು. ಅಂತದ್ದರಲ್ಲಿ ಕೋಲಾರ ಭಾಗದಲ್ಲಿ ಸ್ವತಃ ರಾಗಿ ಫಸಲು ತೆಗೆಯುತ್ತಿದ್ದ ಮಾನ್ಯ ಸಚಿವರಿಗೆ ಬೆಳೆಗಳ ಪ್ರಮಾಣ ಕುಂಠಿತವಾದದ್ದು ಬೇಸರ ಮೂಡಿಸಿದ್ದು ಸಹಜ. 'ರಾಗಿ ಮತ್ತು ಜೋಳ ನಾಡಿನ ಪ್ರಮುಖ ಬೆಳೆಗಳು. ಅಂತದ್ದರಲ್ಲಿ ಈ ಬೆಳೆಗಳನ್ನು ಬೆಳೆಯುವ ಪ್ರಮಾಣವೇ ಏಕರೆಗಟ್ಟಲೆ ಕುಗ್ಗಿದರೆ ಹೇಗೆ?' ಎಂದು ಅವರು ತಮ್ಮ ಆತಂಕ ವ್ಯಕ್ತಪಡಿಸಿದರು.

2010–11ರಲ್ಲಿ 7.88 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯುತ್ತಿದ್ದರೆ, 2012–13 ರ ಸಾಲಿನಲ್ಲಿ ಬೆಳೆಯ ಬಿತ್ತನೆ 6.46 ಲಕ್ಷ ಹೆಕ್ಟೇರ್‌ಗಳಿಗೆ ಕುಸಿದಿತ್ತು. ಇನ್ನು ಇಳುವರಿಯ ಪ್ರಮಾಣ 2010–11 ರ ಸಾಲಿನಲ್ಲಿ 14.99 ಲಕ್ಷ ಟನ್ ಇದ್ದದ್ದು 2012–13 ರ ಸಾಲಿನಲ್ಲಿ 8.59 ಲಕ್ಷ ಟನ್‌ಗಳಿಗೆ ಕುಸಿದಿತ್ತು. ಜೋಳದ ಕಥೆಯೂ ಹೆಚ್ಚು ಕಡಿಮೆ ಇದೇ.

"ಕನಿಷ್ಠ ಪ್ರಮಾಣದ ನೀರನ್ನು ಹೀರಿಕೊಂಡು ಉತ್ಕೃಷ್ಟ ಪ್ರಮಾಣದ ಪೌಷ್ಟಿಕಾಂಶಗಳನ್ನು ನೀಡುವುದು ಸಿರಿಧಾನ್ಯ ಬೆಳೆಗಳ ಹೆಗ್ಗಳಿಕೆ. ಆದರೆ ಮಾರುಕಟ್ಟೆಯಲ್ಲಿ ಅಕ್ಕಿ ಮತ್ತು ಗೋಧಿಗೆ ಸಿಕ್ಕಂಥ ಪ್ರಾಮುಖ್ಯತೆ ಇತರ ಧಾನ್ಯಗಳಿಗೆ ಸಿಗದೆ ಇರುವುದು ಸಾಂಪ್ರದಾಯಿಕ ಬೆಳೆ ಪ್ರಮಾಣವನ್ನು ಕುಗ್ಗಿಸಿದೆ" ಎನ್ನುವುದು ಮಾನ್ಯ ಸಚಿವರ ಅಭಿಪ್ರಾಯ.

ನಗರ ಪ್ರದೇಶ ಹಾಗೂ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಿರಿಧಾನ್ಯಗಳ ಉಪಯುಕ್ತತೆಯ ಬಗ್ಗೆ ಅರಿವು ಮೂಡಿಸುವ, ವ್ಯಾಪಕ ಪ್ರಚಾರ ಕೈಗೊಳ್ಳುವ ಅಗತ್ಯವಿದೆ. ಗ್ರಾಹಕರು ನಾರಿನಂಶ ಹೆಚ್ಚಾಗಿರುವ ಪದಾರ್ಥಗಳನ್ನು ಕೊಳ್ಳಲು ಮಾರುಕಟ್ಟೆಯಲ್ಲಿ ಎಷ್ಟೆಲ್ಲಾ ಹಣ ವ್ಯಯಿಸುತ್ತಾರೆ? ಅದಕ್ಕಿಂತಲೂ ಕಡಿಮೆ ಬೆಲೆಯಲ್ಲಿ ಸಿಗುವ, ಸ್ಥಳೀಯವಾಗಿ ಬೆಳೆಯಲಾಗುವ, ಪೌಷ್ಟಿಕಾಂಶಗಳಲ್ಲೂ ಉತ್ಕೃಷ್ಟವಾಗಿರುವ ಈ ಧಾನ್ಯಗಳ ಮೇಲೇಕೆ ಹಣ ವ್ಯಯಿಸಬಾರದು? ಮಾರುಕಟ್ಟೆಯಲ್ಲಿ ಸಿರಿಧಾನ್ಯಗಳ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬಾರದೇಕೆ? ಎನ್ನುವುದು ಅವರ ಅಭಿಪ್ರಾಯ.

**ಮಾರುಕಟ್ಟೆಯಲ್ಲಿ ಸಿರಿಧಾನ್ಯ ಜನಪ್ರಿಯಗೊಳಿಸುವುದು ಹೇಗೆ?**

ಈ ಯೋಜನೆ ಅಥವಾ ಕಾರ್ಯಕ್ರಮದ ಉದ್ದೇಶ ಬಹು ಗುರಿಗಳನ್ನು ಹೊಂದಿದ್ದು ನಗರ ಪ್ರದೇಶಗಳಲ್ಲಿ ಜನಪ್ರಿಯವಾಗಿರುವ ಪಿಜ್ಜಾ, ಪಾಸ್ತಾ, ಬರ್ಗರ್ ಗಳನ್ನು ತಯಾರಿಸುವ ನಿಟ್ಟಿನಲ್ಲಿಯೂ ಈ ಸಿರಿಧಾನ್ಯಗಳ ಬಳಕೆ ಮಾಡಿಕೊಳ್ಳಬಹುದೆ? ಪ್ರತಿ ಎಕರೆಯಲ್ಲಿ ಉತ್ಕೃಷ್ಟ ಮಟ್ಟದ ಸಿರಿಧಾನ್ಯಗಳ ಉತ್ತಮ ಇಳುವರಿ ಪಡೆಯಲು ಮತ್ತು ಅದನ್ನು ಮಾರುಕಟ್ಟೆ ಸ್ನೇಹಿಯನ್ನಾಗಿಸಿ ಕೃಷಿಕರಿಗೆ ನೆರವಾಗುವುದರ ಮೂಲಕ ಇದೊಂದು ಲಾಭದಾಯಕ ಕೃಷಿ ಎಂಬುದನ್ನು ರೈತರಿಗೆ ಮನವರಿಕೆ ಮಾಡಿಕೊಡುವುದು.

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯವು ಸತತ ಬರಗಾಲವನ್ನು ಎದುರಿಸಿದೆ. ಈ ಬಾರಿಯೂ ಮುಂಗಾರು ಏರುಪೇರಾದಲ್ಲಿ ಕಡಿಮೆ ನೀರು ಬೇಡುವ 'ಸಿರಿಧಾನ್ಯ ಕೃಷಿ' ರೈತರಿಗೆ ವರವಾಗಬಲ್ಲುದು ಎಂಬುದು ರೈತ ಪ್ರತಿನಿಧಿಗಳ ಅನಿಸಿಕೆ





ಕೂಡಾ. ರಾಜ್ಯದಲ್ಲಿ ಸಾವಯವ ಹಾಗೂ ಸಿರಿಧಾನ್ಯ ಕೃಷಿಕರ 14 ಒಕ್ಕೂಟಗಳಿವೆ. ಈ ಒಕ್ಕೂಟಗಳು ನಮ್ಮ ಹಳೆಯ ಸಾಂಪ್ರದಾಯಿಕ ಕೃಷಿ ಮತ್ತು ಮಾದರಿಗಳನ್ನು ಪುನಃ ರೈತರಿಗೆ ಪರಿಚಯಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದು ಕೃಷಿಯಲ್ಲಿ ನೀರಿನ ಕೊರತೆಯನ್ನು ಸಮರ್ಥವಾಗಿ ಎದುರಿಸುವ ಬಗ್ಗೆ ಪಾಠ ಹೇಳುತ್ತಿವೆ.

'ಪ್ರಸ್ತುತ ಸನ್ನಿವೇಶದಲ್ಲಿ ನಾವು ನಮ್ಮ ಕೃಷಿ ವಿಧಾನಗಳನ್ನು ಬದಲಾಯಿಸಿಕೊಳ್ಳಬೇಕಿದೆ. ಕಡಿಮೆ ನೀರಿನಲ್ಲಿ ಬೆಳೆಯಬಹುದಾದ ರಾಗಿ ಹಾಗೂ ಕಿರುಧಾನ್ಯಗಳನ್ನು ಬೆಳೆಸುವತ್ತ ಚಿತ್ತ ಹರಿಸಬೇಕಿದೆ' ಎನ್ನುತ್ತಾರೆ ರೈತ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ. ಆದರೆ ಈ ಧಾನ್ಯಗಳಿಗೆ ಒಳ್ಳೆಯ ಮಾರುಕಟ್ಟೆ ಲಾಭಾಂಶ ದೊರಕದಿರುವುದು ಸಮಸ್ಯೆ. ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ ಕನಿಷ್ಠ 5000 ರೂಪಾಯಿಗಳಾದರು ಸಿಕ್ಕರೆ, ನಾವು ರಾಗಿ ಬೆಳೆಯಬಹುದು ಜೀವನ ಸಾಗಿಸಬಹುದು ಎನ್ನುತ್ತಾರೆ.

"ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ರಾಗಿ ಹಾಗು ಜೋಳಕ್ಕೆ ಕ್ರಮವಾಗಿ (ಪ್ರತಿ ಕ್ವಿಂಟಾಲ್‌ಗೆ) ರೂ. 1650 ಹಾಗೂ ರೂ. 1600 ಬೆಂಬಲ ಬೆಲೆಗಳನ್ನು ಘೋಷಿಸಿವೆ. ರೈತರ ಶ್ರಮಕ್ಕೆ ಇದು ತಕ್ಕ ಪ್ರತಿಫಲವಲ್ಲ. ಒಬ್ಬ ಕೃಷಿಕನಾಗಿ ನಾನೂ ಸಹ, ಬಾಳೆಹಣ್ಣು ಹಾಗೂ ಇತರ ಬೆಳೆಗಳನ್ನು ಬೆಳೆದಾಗಲೇ ಅಲ್ಪ ಸ್ವಲ್ಪ ಲಾಭ ಕಂಡಿದ್ದು" ಎನ್ನುತ್ತಾರೆ ಮಾನ್ಯ ಕೃಷಿ ಸಚಿವ ಕೃಷ್ಣ ಬೈರೇಗೌಡ ಅವರು.

ಕರ್ನಾಟಕದಲ್ಲಿ ಸಿರಿಧಾನ್ಯಗಳ ಬಗ್ಗೆ ನಿಧಾನವಾಗಿಯಾದರೂ ಜಾಗೃತಿ ಮೂಡುತ್ತಿದೆ ಎನ್ನುವುದು ಸಮಾಧಾನದ ವಿಷಯ. ಸಿರಿಧಾನ್ಯಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಅಭಿವೃದ್ಧಿ ಪಡಿಸಿ ಭವಿಷ್ಯದ ದಿನಗಳಲ್ಲಿ ಇವನ್ನು ಹೆಚ್ಚು ಹೆಚ್ಚು ಬೆಳೆಯುವ ಕುರಿತು ಜಾಗೃತಿ ಮೂಡಿಸುವ ಅವಶ್ಯಕತೆಯಿದೆ. ಬೇಡಿಕೆ ಹಾಗೂ ಪೂರೈಕೆಗಳು ಸಮಪ್ರಮಾಣದಲ್ಲಾದರೆ ಕೃಷಿಕರಿಗೂ ತಕ್ಕ ವರಮಾನ ಸಿಗಬಹುದು ಎನ್ನುವುದು ಅವರ ಅಭಿಪ್ರಾಯ.





'ಭತ್ತ ಹಾಗೂ ಕಬ್ಬು ಬೆಳೆಯುತ್ತಿರುವ ರೈತರಿಗೆ ಸಿರಿಧಾನ್ಯಗಳನ್ನು ಬೆಳೆಯಿರಿ ಎಂದು ಹೇಳುವುದು ಕಷ್ಟವೆ. ಆದರೆ ಪ್ರಾಕೃತಿಕ ಸಮಸ್ಯೆಗಳು ಹಾಗೂ ನೀರಿನ ಕೊರತೆಯ ಸಮಸ್ಯೆಗಳು ಅವರನ್ನು ಕಡೆಗೊಮ್ಮೆ ಆ ಸ್ಥಿತಿಗೆ ತಳ್ಳಬಹುದು. ಸದ್ಯಕ್ಕೆ ಆ ಪರಿಸ್ಥಿತಿ ಉದ್ಭವಿಸಿಲ್ಲ. ರೈತರು ಈಗ ಬಹು ಪ್ರಮಾಣದಲ್ಲಿ ರಾಗಿಯನ್ನಷ್ಟೇ ಬೆಳೆಯುತ್ತಿದ್ದಾರೆ. ಜಾನುವಾರುಗಳ ಮೇವಿನ ಕೊರತೆಯನ್ನೂ ಇದು ತುಸು ಮಟ್ಟಕ್ಕೆ ನೀಗುತ್ತದೆ ಎನ್ನುವ ಕಾರಣಕ್ಕೆ. ಆದರೆ ಮಾರುಕಟ್ಟೆಯ ಬದಲಾವಣೆಯಾಗದೆ ರಾಗಿ ಬೆಳೆಯುವ ಪ್ರದೇಶವನ್ನು ವಿಸ್ತರಿಸುವುದು ಸಾಧ್ಯವಿಲ್ಲ' ಎನ್ನುತ್ತಾರೆ ಕೋಡಿಹಳ್ಳಿ ಚಂದ್ರಶೇಖರ.

ಉತ್ತಮ ಆರೋಗ್ಯಕ್ಕೆ ವಿವಿಧ ಸಿರಿಧಾನ್ಯಗಳನ್ನು ಬಳಸುವುದರ ಕುರಿತಾಗಿ ನಗರ ಪ್ರದೇಶಗಳಲ್ಲಿ ಕ್ರಮೇಣ ಜಾಗೃತಿ ಮೂಡುತ್ತಿದೆ. ಕೃಷಿ ಇಲಾಖೆಯೂ ಕೂಡ ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿ ಈವರೆಗೆ 50 ಸಿರಿಧಾನ್ಯ ಮೇಳಗಳನ್ನು ಏರ್ಪಡಿಸಿದ್ದು, ಉಳಿದ 29 ಜಿಲ್ಲಾ ಕೇಂದ್ರಗಳಲ್ಲಿಯೂ ಸಿರಿಧಾನ್ಯ ಮೇಳ ನಡೆದಿದೆ. ಈ ಮೇಳಗಳಲ್ಲಿ ಸಿರಿಧಾನ್ಯಗಳಲ್ಲಿರುವ ಪೌಷ್ಟಿಕಾಂಶಗಳ ಹಾಗೂ ಇವುಗಳ ಬಳಕೆಯಿಂದಾಗುವ ಆರೋಗ್ಯ ಲಾಭಗಳು, ಅಕ್ಕಿ ಮತ್ತು ಗೋಧಿಯ ಹೊರತಾಗಿಯೂ ನಾವೇಕೆ ಸಿರಿಧಾನ್ಯಗಳನ್ನು ಉಪಯೋಗಿಸಬೇಕು ಎನ್ನುವುದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಸಿರಿಧಾನ್ಯಗಳನ್ನು ಬಳಸಿ ದೋಸೆ ಮತ್ತು ಇಡ್ಲಿ ಮಾತ್ರವಲ್ಲದೆ ಚಕ್ಕುಲಿ, ಕುರ್‌ಕುರೆ, ಕುಕೀಸ್, ಡೆಸರ್ಟ್ಸ್, ಪಾಸ್ತಾಗಳನ್ನು ತಯಾರಿಸಬಹುದು. ತಯಾರಕರ ಮಳಿಗೆಗಳಲ್ಲಿ ಇವುಗಳನ್ನು ಪ್ರದರ್ಶಿಸಿರುವುದಲ್ಲದೆ ಮೇಳಕ್ಕೆ ಬರುವ ಗ್ರಾಹಕರಿಗೆ ಅಲ್ಲಿಯೇ ರಾಗಿದೋಸೆ ಇತ್ಯಾದಿ ಸಿದ್ಧಪಡಿಸಿ ಕೊಡಲಾಗುತ್ತಿದೆ. ಮೇಳಕ್ಕೆ ಬರುವ ಗ್ರಾಹಕರ ಸಂಖ್ಯೆಯೂ ಈಗೀಗ ಹೆಚ್ಚುತ್ತಿದೆ ಎನ್ನುತ್ತಾರೆ ಅವರು.

ಕೃಷಿ ಇಲಾಖೆ ಪಂಚತಾರಾ ಹೋಟೆಲುಗಳ ಬಾಣಸಿಗರಿಗೂ ಸಿರಿಧಾನ್ಯಗಳ ಬಳಕೆಯ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದೆ. ಬೆಂಗಳೂರಿನಲ್ಲಿ ಸಿರಿಧಾನ್ಯಗಳ ತಿಂಡಿ ತಿನಿಸುಗಳನ್ನು ನೀಡಬಲ್ಲ ಹೋಟೆಲ್, ರೆಸ್ಟೋರೆಂಟ್‌ಗಳು ಶುರುವಾಗುತ್ತಿವೆ. ನಮ್ಮ ಹೋಟೆಲ್‌ನಲ್ಲಿ ಸಿರಿಧಾನ್ಯಗಳಿಂದ ಮಾಡಿದ ಪಿಜ್ಜಾ, ಐಸ್‌ಕ್ರೀಮ್, ಬರ್ಗರ್, ಬ್ರೆಡ್ ಗಳು ಬಲು ಜನಪ್ರಿಯವಾಗಿವೆ ಎನ್ನುತ್ತಾರೆ 'ಫರ್ಗಾಟನ್'ರೆಸ್ಟೊರೆಂಟ್‌ನ ಸಂಪರ್ಕಾಧಿಕಾರಿ ಜಯರಾಂ ಇವರ ರೆಸ್ಟೊರೆಂಟ್‌ನಲ್ಲಿ ರಾಗಿ, ನವಣೆ, ಸಜ್ಜೆ, ಅರ್ಕ, ಊದಲು,ಬರಗುಗಳನ್ನು ಬಳಸಿ ಮಾಡಲಾದ ಖಾದ್ಯಗಳು ಸಿಗುತ್ತವೆ.


**ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯವು ಸತತ ಬರಗಾಲವನ್ನು ಎದುರಿಸಿದೆ. ಈ ಬಾರಿಯೂ ಮುಂಗಾರು ಏರುಪೇರಾದಲ್ಲಿ ಕಡಿಮೆ ನೀರು ಬೇಡುವ 'ಸಿರಿಧಾನ್ಯ ಕೃಷಿ' ರೈತರಿಗೆ ವರವಾಗಬಲ್ಲುದು**

ನಗರಪ್ರದೇಶಗಳಲ್ಲಿ ಸಾವಯವ ಹಾಗೂ ಸಿರಿಧಾನ್ಯ ಮಳಿಗೆಗಳು ಗಣನೀಯವಾಗಿ ತಲೆ ಎತ್ತುತ್ತಿರುವ ಹಿನ್ನೆಲೆಯಲ್ಲಿ ಸಿರಿಧಾನ್ಯಗಳಿಗೆ ವ್ಯಾಪಕ ಬೇಡಿಕೆ ಇದೆ. ಹಾಗಾದರೆ ಈ ಬೇಡಿಕೆಯನ್ನು ಪೂರೈಸುವುದ ಹೇಗೆ? ಈ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಲು ಕೃಷಿ ಇಲಾಖೆಯು ಹೈದರಾಬಾದ್‌ನ ಖಅಖಖಖಂಖ (ಒಣಭೂಮಿ ಬೆಳೆಗಳ ಅಂತರರಾಷ್ಟ್ರೀಯ ಅಧ್ಯಯನ ಸಂಸ್ಥೆ), ಜೀವ ವಿಜ್ಞಾನದ ರಾಷ್ಟ್ರೀಯ ಕೇಂದ್ರ ಹಾಗೂ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳೊಂದಿಗೆ ರಾಗಿ, ಜೋಳ, ತೊಗರಿ, ಕಡಲೆ ಮುಂತಾದ ಧಾನ್ಯಗಳ ತಳಿ ಅಭಿವೃದ್ಧಿಯಲ್ಲಿ ತೊಡಗಿಕೊಂಡಿದೆ.

ಮಕ್ಕಳಿಗೆ ಪೌಷ್ಟಿಕಾಂಶಭರಿತ ಆಹಾರ ಪೂರೈಸಲು ಐಸಿಡಿಎಸ್ ( ಏಕೀಕೃತ ಶಿಶು ಅಭಿವೃದ್ಧಿ ಯೋಜನೆ) ಯೋಜನೆಯಲ್ಲಿ ಸಿರಿಧಾನ್ಯಗಳನ್ನು ಬಳಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ಮಾತುಕತೆ ನಡೆಯುತ್ತಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ರಾಗಿ ಮತ್ತು ಜೋಳವನ್ನು ಈಗಾಗಲೇ ಸಾರ್ವಜನಿಕರಿಗೆ ಪೂರೈಸುತ್ತಿದೆ. ಆದರೆ ಇಲ್ಲಿಯೂ ಧಾನ್ಯಗಳ ಅಗತ್ಯ ಪ್ರಮಾಣದ ಪೂರೈಕೆಯದೇ ಸಮಸ್ಯೆ. ಸರ್ಕಾರವು ಬೆಂಗಳೂರಿನ 198 ವಾರ್ಡ್‌ಗಳಲ್ಲಿ ತರಲು ಉದ್ದೇಶಿಸಿರುವ 'ಇಂದಿರಾ ಕ್ಯಾಂಟೀನ್'ಗಳಲ್ಲಿ ಸಿರಿಧಾನ್ಯಗಳನ್ನು ಬಹು ಪ್ರಮಾಣದಲ್ಲಿ ಬಳಸಲು ಸರ್ಕಾರ ಚಿಂತನೆ ನಡೆಸಿದೆ. ಏಪ್ರಿಲ್ 28 ರಿಂದ 30 ರವರೆಗೆ ಸಾವಯವ ಹಾಗೂ ಸಿರಿಧಾನ್ಯಗಳ ರಾಷ್ಟ್ರ ಮಟ್ಟದ ವ್ಯಾಪಾರಿ ಮೇಳ ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಕೃಷಿಕರು, ಮಾರಾಟಗಾರರು, ಸ್ಥಳೀಯ ಕಂಪನಿಗಳು, ಹೋಟೆಲ್ ಉದ್ದಿಮೆದಾರರು ಭಾಗವಹಿಸಿದ್ದರು.

(ಮೂಲ ಲೇಖನ – ಸೌಮ್ಯ ಅಜಿ, ಎಕನಾಮಿಕ್ ಟೈಮ್ಸ್)



ರಾಜು ಅಡಕಳ್ಳಿ

# ಕೈಗಾರಿಕಾಭಿವೃದ್ಧಿಯ ಉತ್ತುಂಗದತ್ತ...

**ನೂತನ ಕೈಗಾರಿಕಾ ನೀತಿ 2014–19**

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಸಮರ್ಥನೀಯವಾದ, ಸಮತೋಲಿತವಾದ ಕೈಗಾರಿಕಾ ಪ್ರಗತಿಯನ್ನು ಸಾಧಿಸುವ ಮೂಲಕ ಪ್ರಗತಿಪರ ಕರ್ನಾಟಕ ನಿರ್ಮಾಣ ಮಾಡಲು ಮತ್ತು ಅತಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಕ್ಕೆ ಅನುವಾಗಿಸಲು ನೂತನ ಕೈಗಾರಿಕಾ ನೀತಿ 2014–19 ನ್ನು ಅಳವಡಿಸಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ವಿಶೇಷ ಚೇತನರು, ಮಾಜಿ–ಯೋಧರು ಮತ್ತು ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಪ್ರಮಾಣದ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ನೀಡಿ ಹೊಸ ಕೈಗಾರಿಕೆಗಳನ್ನು ಉತ್ತೇಜಿಸುವುದು ಇದರ ಉದ್ದೇಶ.

ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ / ರಾಜ್ಯಮಟ್ಟದ ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ ಅನುಮೋದಿಸಿದ 17,293 ಕೋಟಿ ರೂ. ಹೂಡಿಕೆಯ 124 ಯೋಜನೆಗಳ ಈಗಾಗಲೇ ಜಾರಿಗೊಂಡಿದ್ದು, 1.6 ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸಲಾಗಿದೆ. ಹಾಗೂ 2.8 ಲಕ್ಷ ಕೋಟಿ ರೂ. ಹೂಡಿಕೆಯ 1,492 ಯೋಜನೆಗಳು ಪ್ರಗತಿಯಲ್ಲಿವೆ.

**ಸಾಧನೆಗಳು:**

ಇನ್‌ವೆಸ್ಟ್ ಕರ್ನಾಟಕ–2016 ವಿಶ್ವ ಹೂಡಿಕೆದಾರರ ಸಮಾವೇಶವನ್ನು 3ನೇ ಫೆಬ್ರವರಿಯಿಂದ 5ನೇ ಫೆಬ್ರವರಿ 2016ರವರೆಗೆ ಯಶಸ್ವಿಯಾಗಿ ನಡೆಸಲಾಗಿದೆ. ಈ ಸಮಾವೇಶಕ್ಕೆ ವಿಶ್ವದಾದ್ಯಂತದಿಂದ ಅಭೂತಪೂರ್ವ ಬೆಂಬಲ ದೊರೆತಿದೆ. ರೂ.1,77,764 ಕೋಟಿ ಬಂಡವಾಳ ಹೂಡಿಕೆಯನ್ನು ಒಳಗೊಂಡ 1080 ಯೋಜನೆಗಳಿಗೆ ಅನುಮೋದನೆ ನೀಡಿದೆ. ಈ ಯೋಜನೆಗಳಿಂದ 4,82,138 ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ.

ಭಾರತ ಸರ್ಕಾರದ ಕೈಗಾರಿಕಾ ನೀತಿ ಮತ್ತು ಪ್ರವರ್ಧನೆ ಇಲಾಖೆಯ ಹೇಳಿಕೆಯ ಅನ್ವಯ ಕರ್ನಾಟಕವು ಬಂಡವಾಳ ಆಕರ್ಷಣೆಯಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಕರ್ನಾಟಕವು 2016ರ ಜನವರಿಯಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ರೂ.1,54,173 ಕೋಟಿ ಬಂಡವಾಳ ಆಕರ್ಷಿಸಿದೆ. ರೂ.1,27,820 ಕೋಟಿ ಬಂಡವಾಳ ಹೂಡಿಕೆಯನ್ನು ಒಳಗೊಂಡ 122 ಒಡಂಬಡಿಕೆಗಳಿಗೆ ಸಹಿ ಮಾಡಲಾಗಿದ್ದು ಇದರಿಂದ 1,69,880 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ.

ಕರ್ನಾಟಕದಲ್ಲಿ ಹೂಡಿಕೆ ಮಾಡುವಂತೆ ಹೂಡಿಕೆದಾರರನ್ನು ಪ್ರೇರೇಪಣೆ ಮಾಡುವ ಉದ್ದೇಶದಿಂದ ಪ್ರವಾಸಿ ಭಾರತೀಯ ದಿವಸ್–2017 ಸಮಾವೇಶವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಸಮಾವೇಶದಲ್ಲಿ 2000 ವಿದೇಶಿ ಪ್ರತಿನಿಧಿಗಳೂ ಸೇರಿದಂತೆ 7,200 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಫೆಬ್ರವರಿ 2017ರಲ್ಲಿ "ಮೇಕ್ ಇನ್ ಇಂಡಿಯಾ" ಸಮಾವೇಶವನ್ನು ಯಶಸ್ವಿಯಾಗಿ ನಡೆಸಲಾಗಿದೆ.

1712 ಯೋಜನಾ ಪ್ರಸ್ತಾವನೆಗಳಿಗೆ ರೂ. 307,997 ಕೋಟಿ ಬಂಡವಾಳ ಹೂಡಲು ಅನುಮೋದನೆ. ಇದರಿಂದ 8.65 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರೆಯುವ ನಿರೀಕ್ಷೆ. ರೂ. 22.175 ಕೋಟಿ ಬಂಡವಾಳ ಹೂಡಿಕೆ ಒಳಗೊಂಡ 1.16 ಲಕ್ಷ ಎಂಎಸ್‌ಎಂಇಗಳನ್ನು ಸ್ಥಾಪಿಸಲಾಗಿದೆ. ಇವುಗಳಿಂದ 10.3 ಲಕ್ಷ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ 2807 ವಸತಿ ಕಾರ್ಯಗಾರಗಳನ್ನು ನಿರ್ಮಿಸಲಾಗಿದೆ. 230 ಉದ್ಯಮಿಗಳೀಗೆ ಮೂಲ ಬಂಡವಾಳ, 627 ಅತೀ ಸಣ್ಣ ಕೈಗಾರಿಕಾ ಘಟಕಗಳೀಗೆ ಶೇ.60 ರಷ್ಟು ಬಂಡವಾಳ ಹೂಡಿಕೆ ಸಹಾಯಧನವನ್ನು ನೀಡಲಾಗಿದೆ. 15,350 ಯುವಕರಿಗೆ ವಿವಿಧ ಯೋಜನೆಯಡಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗಿದೆ.

ನೂತನ ಜವಳಿ ನೀತಿ 2013–18 ರ ನೀತಿಯಡಿ 1,918 ಕೋಟಿ ರೂ. ಬಂಡವಾಳ ಹೂಡಿಕೆಯಾಗಿದ್ದು, 96,568 ಜನರಿಗೆ ಉದ್ಯೋಗಾವಕಾಶ ಲಭಿಸಿದೆ.

ಕರ್ನಾಟಕ ಸರ್ಕಾರದ ಉದ್ಯಮಗಳು ಹಾಗೂ ನಿಗಮಗಳಾದ ಕೆಎಸ್‌ಎಸ್‌ಐಡಿಸಿ, ಎಂಸಿ ಅಂಡ್ ಎ, ಕೆಎಸ್ ಅಂಡ್ ಡಿಎಲ್, ಎಂ.ಎಸ್.ಐಎಲ್, ಎಂ.ಇ.ಐ. ಇತ್ಯಾದಿಗಳು ಕಳೆದ 4 ವರ್ಷಗಳಲ್ಲಿ ಲಾಭಗಳಿಕೆಯಲ್ಲಿ ಗಣನೀಯ ಹೆಚ್ಚಳವನ್ನು ಸಾಧಿಸಿವೆ. 8415 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆದಾರರಿಗೆ ರೂ.320.80 ಕೋಟಿ ಬಂಡವಾಳ ಹೂಡಿಕೆ ಸಬ್ಸಿಡಿ ಬಿಡುಗಡೆ. ಗ್ರಾಮೀಣ ಪ್ರದೇಶಗಳಲ್ಲಿನ 2897 ಗ್ರಾಮೀಣ ಅತಿಸಣ್ಣ ಉದ್ದಿಮೆಗಳಿಗೆ ಒಟ್ಟು ರೂ.148.75 ಕೋಟಿ ಮೊತ್ತದ ಸಾಲ ಮಂಜೂರು. ಮುಖ್ಯಮಂತ್ರಿಗಳ ಉದ್ಯೋಗ ಸೃಷ್ಟಿ ಕಾರ್ಯಕ್ರಮದ ಅಡಿಯಲ್ಲಿ ಶೇಕಡ 35ರವರೆಗೆ ಸಬ್ಸಿಡಿ ನೀಡಲಾಗಿದೆ.

**ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ**

ಕೆಐಎಡಿಬಿ ಮೂಲಕ 13,574 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರದಿಂದ ಅಂತಿಮ ಅಧಿಸೂಚನೆ ನೀಡಲಾಗಿದೆ. 15,052 ಎಕರೆಗಳ ಸರ್ಕಾರಿ ಜಮೀನನ್ನು ಕೆಐಎಡಿಬಿಗೆ ಉಚಿತವಾಗಿ ಹಸ್ತಾಂತರಿಸಿದೆ. 93 ಕೋಟಿ ರೂಪಾಯಿ ಯೋಜನಾ ವೆಚ್ಚದಲ್ಲಿ ಏರೋಸ್ಪೇಸ್








ಕಾಮನ್ ಫಿನಿಷಿಂಗ್ ಫೆಸಿಲಿಟಿ (ACFF) ಕೇಂದ್ರ ಸ್ಥಾಪನೆ ಮಾಡಲು ಉದ್ದೇಶಿಸಿದೆ. ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕಾಭಿವೃದ್ಧಿ ನಿಗಮವು (KSSIDC) ಪ್ಲಾಟ್‌ಗಳು/ಶೆಡ್‌ಗಳ ಅಭಿವೃದ್ಧಿಗಾಗಿ 317 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ–2016) ನಿಯಮಾವಳಿ–1994 ರಲ್ಲಿ ಜೀವನ ನಡೆಸಲು ಕಲ್ಲು ಗಣಿಗಾರಿಕೆಯನ್ನೇ ಅವಲಂಬಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಾಂಗಗಳಿಗೆ / ಆರ್ಥಿಕವಾಗಿ ಹಿಂದುಳಿದವರಿಗೆ ಮತ್ತು ಅಂಗವಿಕಲರಿಗೆ ಗುತ್ತಿಗೆ ಮಂಜೂರಾತಿಗೆ ಮೀಸಲಾತಿ ನಿಗದಿಪಡಿಸಲಾಗಿದೆ.

ಕೆ.ಐ.ಎ.ಡಿ.ಬಿ./ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರು / ಹಂಚಿಕೆ ಮಾಡಲಾದ ಫ್ಲಾಟ್ / ಶೆಡ್ಡುಗಳ ಒಟ್ಟು ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

**2017–18ನೇ ಸಾಲಿನ ಹೊಸ ಯೋಜನೆಗಳು:**

ಚೆನ್ನೈ–ಬೆಂಗಳೂರು–ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ ಯೋಜನೆಯಡಿಯಲ್ಲಿ ತುಮಕೂರು ಕೈಗಾರಿಕಾ ಘಟಕಕ್ಕಾಗಿ ಕೆಐಎಡಿಬಿಯಿಂದ ಭೂಸ್ವಾಧೀನಕ್ಕಾಗಿ ಒಂದು ಬಾರಿ ಅನುದಾನವಾಗಿ 400 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಇಂಡಿಯನ್ ಮಷಿನ್ ಟೂಲ್ ತಯಾರಕರ ಸಂಸ್ಥೆಯೊಂದಿಗೆ ಸಮಲೋಚಿಸಿ ಭಾರತ ಸರ್ಕಾರದ ಭಾರಿ ಕೈಗಾರಿಕೆ ಮಂತ್ರಾಲಯದ ನೆರವಿನೊಂದಿಗೆ ತುಮಕೂರು ಜಿಲ್ಲೆಯ ವಸಂತ ನರಸಾಪುರದಲ್ಲಿ 542 ಎಕರೆ ಜಮೀನಿನಲ್ಲಿ "ಮಷಿನ್ ಟೂಲ್ ಕೈಗಾರಿಕಾ ಪಾರ್ಕ್"ನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದೆ.

ರಾಜ್ಯದಲ್ಲಿನ ಇಂಜಿನಿಯರಿಂಗ್ ತಯಾರಿಕಾ ಕೈಗಾರಿಕೆಗಳಿಗೆ ಉತ್ತೇಜನ ನೀಡಲು, ಭಾರತ ಸರ್ಕಾರದೊಂದಿಗೆ ಶೇ.50 ರಷ್ಟು ವೆಚ್ಚವನ್ನು ಹಂಚಿಕೊಳ್ಳುವುದರ ಮೂಲಕ ಕೇಂದ್ರ ತಯಾರಿಕಾ ತಂತ್ರಜ್ಞಾನ ಸಂಸ್ಥೆಯ (CMTI) ಸಹಯೋಗದೊಂದಿಗೆ ಅದರ ಆವರಣದಲ್ಲಿ ನಿಖರ ಮಾಪನ ಪ್ರಯೋಗಾಲಯವನ್ನು (Predision Metrology Lab) ಸ್ಥಾಪಿಸಲು ಪ್ರಸ್ತಾಪಿಸಿದೆ.






ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ (ಎಂಎಸ್‌ಎಂಇ) ಮಾರುಕಟ್ಟೆ ನೆರವು ನೀಡುವುದಕ್ಕಾಗಿ ಬೃಹತ್ ತಯಾರಕರು / ಸಾರ್ವಜನಿಕ ವಲಯದ ಉದ್ಯಮಗಳನ್ನು ಒಂದೆಡೆ ತರಲು, ರಾಷ್ಟ್ರ ಮಟ್ಟದಲ್ಲಿ ವರ್ತಕರ ಅಭಿವೃದ್ಧಿ ಮೇಳವನ್ನು ಆಯೋಜಿಸಲಾಗುವುದು. ಬೆಂಗಳೂರನ್ನು ಭಾರತದ ವಿದ್ಯುತ್ ಚಾಲಿತ ವಾಹನಗಳ ರಾಜಧಾನಿ (ಎಲೆಕ್ಟ್ರಿಕ್ ವೆಹಿಕಲ್ ಕ್ಯಾಪಿಟಲ್) ಯನ್ನಾಗಿ ಮಾಡಲು ಇಚ್ಛಿಸಿದೆ.

ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಸಾರ್ವಜನಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವ ಸಲುವಾಗಿ 4 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಮೊದಲ ಬಾರಿಗೆ ಸಣ್ಣ ಮತ್ತು ಅತೀ ಸಣ್ಣ ಉದ್ಯಮಗಳನ್ನು ಸ್ಥಾಪಿಸುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸಾಲ ಪಡೆಯುವ ಸಂದರ್ಭದಲ್ಲಿ ಹಣಕಾಸು ಸಂಸ್ಥೆಗಳು ವಿಧಿಸುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರ ಶುಲ್ಕಗಳನ್ನು ಭರಿಸಲಾಗುವುದು.

**ಪ.ಜಾ / ಪ.ಪಂ. ಉದ್ಯಮಿಗಳಿಗೆ ವಿಶೇಷ ಆದ್ಯತೆ:**

ಕೌಶಲ್ಯ ಅಭಿವೃದ್ಧಿ, ಬಂಡವಾಳ ನೆರವು ನೀಡಿಕೆ, ಜಮೀನಿನ ಹಂಚಿಕೆಗೆ ಸಬ್ಸಿಡಿ ನೀಡಲು ವಿಶೇಷ ಯೋಜನೆಗಳು.

**ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ:**

ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪ್ರಸುತದಲ್ಲಿ ಶೇ.4 ರ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು 50 ಲಕ್ಷ ರೂ.ಗಳಿಂದ 2 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು. ಮಹಿಳೆಯರಿಗಾಗಿಯೇ ಐದು ಕೈಗಾರಿಕಾ ಪ್ರದೇಶಗಳನ್ನು ಮೀಸಲಿರಿಸಲಾಗಿದ್ದು ನೂತನ ಕೈಗಾರಿಕಾ ನೀತಿಯಲ್ಲಿ ಪ್ಲಾಟುಗಳು ಮತ್ತು ಶೆಡ್‌ಗಳ ಹಂಚಿಕೆಯಲ್ಲಿ ಮಹಿಳೆಯರಿಗೆ ಶೇಕಡ 5ರಷ್ಟು ಮೀಸಲು ಸೌಲಭ್ಯ, ಪ್ರೋತ್ಸಾಹಧನ ಹಾಗೂ ರಿಯಾಯಿತಿ ನೀಡಲಾಗಿದೆ.





# ಗಾಂಧೀ ಭವನದ ರೂವಾರಿ ಹೊ. ಶ್ರೀನಿವಾಸಯ್ಯ


**ವೇಮಗಲ್ ಸೋಮಶೇಖರ್**
ಚಿತ್ರಗಳು : ಡಾ. ಎಸ್. ನಾರಾಯಣಸ್ವಾಮಿ


**ಡಾ.** ಹೊ ಶ್ರೀನಿವಾಸಯ್ಯನವರು ವೃತ್ತಿಯಿಂದ ಇಂಜನಿಯರ್. ಪ್ರವೃತ್ತಿಯಿಂದ ಗಾಂಧೀ ತತ್ವೋಪಾಸಕರು. ತುಂಬು ಚಟುವಟಿಕೆಯ ಶಿಸ್ತಿನ ಸೇವಕರಾಗಿ ಸ್ವಾತಂತ್ರ್ಯ ಹೋರಾಟದಲ್ಲೂ ಮುಖ್ಯ ಪಾತ್ರ ವಹಿಸಿದ ಇವರು ಅನೇಕ ಸಂಘ ಸಂಸ್ಥೆಗಳಲ್ಲಿ ಯಾವುದೇ ಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸಿ ಹಿರಿಯ ಕಿರಿಯರೆಲ್ಲರಿಗೂ ಆತ್ಮೀಯ ವ್ಯಕ್ತಿಯಾಗಿದ್ದರು. ಗ್ರಾಮೀಣ ರೈತ ಕುಟುಂಬದಲ್ಲಿ ಜನಿಸಿ ಸ್ವಯಂ ಪ್ರತಿಭೆ ಸಾಹಸಗಳಿಂದ ಉಚ್ಚ ವ್ಯಾಸಂಗ ಮಾಡಿ ಎಚ್.ಎ.ಎಲ್. ಬಿ.ಇ.ಎಂ.ಎಲ್. ಕಾರ್ಖಾನೆಯಲ್ಲಿ ಮುಖ್ಯ ಹುದ್ದೆಯಲ್ಲಿದ್ದವರು. ಸಾಹಿತ್ಯ ಕೃಷಿ ಅವರ ಪ್ರೀತಿಯ ಹವ್ಯಾಸ. ಇವರಲ್ಲಿದ್ದ ಅಪೂರ್ವ ವ್ಯಕ್ತಿತ್ವ, ಬಹುಮುಖ ಪ್ರತಿಭೆ, ನಿರಂತರ ಸ್ವಾರ್ಥ ರಹಿತ ಸಾರ್ವಜನಿಕ ಸೇವೆ, ಸೇವಾ ಮನೋಭಾವ, ಸೌಜನ್ಯ, ನಿರಾಡಂಬರ, ಸರಳತೆ ಹಾಗೂ ಪರಿಶುದ್ಧ ಜೀವನ ಇಂದಿನ ಯುವ ಜನತೆಗೆ ದಾರಿದೀಪವಾಗಿದೆ.

ಹೊನ್ನಪ್ಪ ಮತ್ತು ತಿಮ್ಮಮ್ಮ ದಂಪತಿ ಶ್ರೀನಿವಾಸಯ್ಯನವರನ್ನು ಹೆತ್ತ ಪುಣ್ಯವಂತರು. ತಂದೆಯ ಊರು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯ ಚೌದ್ರಿಕೊಪ್ಪಲು. ತಾಯಿಯ ಊರು ಚೌದ್ರಿಕೊಪ್ಪಲಿನಿಂದ ಒಂದೂವರೆ ಕಿ.ಮೀ ದೂರದಲ್ಲಿನ ಅದಮಗೆರೆ. ಸುಮಾರು 1901ರಲ್ಲೇ ಮಲ್ಲೇಶ್ವರಕ್ಕೆ ಬಂದು ನೆಲಸಿದ ಇವರಿಗೆ 1925ರ ಜನವರಿ ನಾಲ್ಕರಂದು ಶ್ರೀನಿವಾಸಯ್ಯನವರು ಹುಟ್ಟಿದರು. ಮಲ್ಲೇಶ್ವರದ ನಾರ್ಮಲ್ ಶಾಲೆ ನಂತರ ಬಾಯ್ಸ್ ಮಿಡ್ಲ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡಿ ಶಿಸ್ತಿನಿಂದ ಬದುಕುವುದನ್ನು ರೂಢಿಸಿಕೊಂಡರು.

ಮಹಾತ್ಮ ಗಾಂಧೀಜಿ 1934ರಲ್ಲಿ ತಮ್ಮ ಸಂಗಡಿಗರೊಂದಿಗೆ ಹರಿಜನರ ಏಳ್ಗೆಗಾಗಿ ಪ್ರವಾಸ ಮಾಡುತ್ತಾ ಜನವರಿ ನಾಲ್ಕರಂದು ಬೆಂಗಳೂರಿಗೆ ಆಗಮಿಸಿ ಮಲ್ಲೇಶ್ವರಕ್ಕೂ ಬಂದಿದ್ದಾಗ ಒಂಬತ್ತು ವರ್ಷದ ಬಾಲಕ ಶ್ರೀನಿವಾಸಯ್ಯನಿಗೆ ಮಹಾತ್ಮರನ್ನು ಹತ್ತಿರದಿಂದ ಕಾಣುವ ಸೌಭಾಗ್ಯ ದೊರಕಿತು. ಅವರ ಭಾವನವರ



ಅಣ್ಣಾ ಹಜಾರೆ ಅವರೊಂದಿಗೆ ಹೊ. ಶ್ರೀನಿವಾಸಯ್ಯ



ಕಿರಣ್ ಬೇಡಿ ಅವರೊಂದಿಗೆ

**300ಕ್ಕೂ ಹೆಚ್ಚು ಸಂಘ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿರುವ ಕರ್ನಾಟಕದ ಏಕೈಕ ವ್ಯಕ್ತಿ ಹೊ.ಶ್ರೀನಿವಾಸಯ್ಯನವರು. ಇವರ ಒಂಬತ್ತು ದಶಕಗಳ ಬದುಕು ಹಲವಾರು ಏಳುಬೀಳುಗಳನ್ನು ಕಂಡು ಕಠಿಣ ಪರಿಶ್ರಮದಿಂದ ಅತ್ಯಂತ ಸರಳ ಹಾಗೂ ಪ್ರಾಮಾಣಿಕತೆಯಿಂದ ರೂಪಿತಗೊಂಡಿದ್ದು ಸ್ವಾತಂತ್ರ್ಯದ ಚಳವಳಿಯಲ್ಲಿ ಅವರು ವಹಿಸಿದ ಧೈರ್ಯ, ಸ್ಥೈರ್ಯ ಇಂದಿನ ಸಮಾಜಕ್ಕೆ ಅಪೂರ್ವ ಮಾದರಿಯಾಗಿದೆ.**

ಪ್ರೇರಣೆಯಿಂದ ಆಗಾಗಲೇ ಖಾದಿಯನ್ನು ಧರಿಸಲು ಪ್ರಾರಂಭಿಸಿದ್ದ ಶ್ರೀನಿವಾಸಯ್ಯನವರು ಮತ್ತಷ್ಟು ಗಾಂಧಿಯವರ ಪ್ರಭಾವಕ್ಕೆ ಒಳಗಾದರು. ಶ್ರೀನಿವಾಸಯ್ಯನವರ 12ನೇ ವಯಸ್ಸಿನಲ್ಲಿ ಅಂದರೆ 1937ರಲ್ಲಿ ಇವರ ತಂದೆ ನಿಧನ ಹೊಂದಿದರು. ಮನೆಯಲ್ಲಿ ಉಳಿದವರು ತಾಯಿ ಮತ್ತು ತಂಗಿ ಮಾತ್ರ.. 1942ರಲ್ಲಿ ಅವರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿದ್ದಾಗಲೇ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು. ಅದೇ ವರ್ಷ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಮಲ್ಲೇಶ್ವರದಲ್ಲಿ ಗಾಂಧಿ ಸಾಹಿತ್ಯ ಸಂಘವನ್ನು ಸ್ಥಾಪಿಸಿ ಗ್ರಂಥ ಭಂಡಾರವನ್ನೂ ಆರಂಭಿಸಿದರು. ನಂತರ ಬಾಪು ಕರೆಯ ಮೇರೆಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬ್ರಿಟಿಷರ ವಿರುದ್ಧ ಚಳವಳಿಯನ್ನು ತೀವ್ರಗೊಳಿಸುವ ಅಂಗವಾಗಿ ರಹಸ್ಯ ಪತ್ರಿಕೆಗಳ ಪ್ರಕಟಣೆ ಮತ್ತು ಅವುಗಳನ್ನು ಹಂಚುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಈ ಕಾರ್ಯಗಳಿಗೆಲ್ಲಾ ಪ್ರೇರಣೆ ನೀಡಿದವರು ಸಿದ್ಧವನಹಳ್ಳಿ ಕೃಷ್ಣಶರ್ಮರು. ಈ ಕಾರ್ಯಗಳಿಂದ ಶೀನಿವಾಸಯ್ಯನವರು ಆರು ತಿಂಗಳು ಜೈಲು ಶಿಕ್ಷೆ ಕೂಡ ಅನುಭವಿಸಿದರು.. 1946ರಲ್ಲಿ ಮದರಾಸಿನಲ್ಲಿ ನಡೆದ ಅಖಿಲ ಭಾರತ ಹಿಂದಿ ಸಮ್ಮೇಳನದಲ್ಲಿ ಗಾಂಧೀಜಿ ಅವರ ಜೊತೆ ಮೂರು ದಿನ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ಹೀಗೆ 1947ರವರೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ ವಹಿಸಿದರು.

ಕಡುಬಡತನ ಹಿನ್ನೆಲೆಯಿಂದ ಬಂದ ಶ್ರೀನಿವಾಸಯ್ಯನವರು ಸರ್ಕಾರ ನೀಡಿದ ಸ್ಕಾಲರ್‌ಷಿಪ್‌ನಿಂದ ತಮ್ಮ ಇಂಜಿನಿಯರಿಂಗ್ ಪದವಿ ಮುಗಿಸಿದ್ದು 1949ರಲ್ಲಿ ಹೆಚ್.ಎ.ಎಲ್.ನಲ್ಲಿ ಡಿಸೈನರ್ ಆಗಿ ಸೇರಿದ ಇವರು ರಜಾ ದಿನಗಳಲ್ಲಿ ತಾಯಿಯ ಆದೇಶದಂತೆ ತಂದೆಯ ಊರಾದ ಚೌದ್ರಿಕೊಪ್ಪಲಿಗೆ ಹೋಗಿ ವ್ಯವಸಾಯದ ಎಲ್ಲಾ ಅನುಭವ ಪಡೆದು ಅಲ್ಲಿಯೂ ಎಲ್ಲರ ಪ್ರೀತಿ ಗಳಿಸಿದರು. ನಂತರ ಚೌದ್ರಿಕೊಪ್ಪಲಿನಲ್ಲಿ ರೈತ ಸೇವಾ ಸಂಘ, ಶ್ರೀರಾಮ ಯುವಜನ ಸೇವಾ ಸಂಸ್ಥೆ ಹಾಗೂ ಶ್ರೀ ರಾಮ ಮಂದಿರವನ್ನು ಸ್ಥಾಪಿಸಿ ಹಲವು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಚೌದ್ರಿಕೊಪ್ಪಲು ಗ್ರಾಮ ಮಾದರಿ ಗ್ರಾಮವಾಗಲು ಕಾರಣರಾದರು.

ಮಲ್ಲೇಶ್ವರದಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಶ್ರೀರಾಮ ಮಂದಿರ ಟ್ರಸ್ಟ್, ಶ್ರೀ ರಾಮ ಕೊ ಅಪರೇಟಿವ್ ಬ್ಯಾಂಕ್ (1953), ಶೇಷಾದ್ರಿಪುರಂನಲ್ಲಿ ಆಂಜನೇಯ ಕೋ-ಅಪರೇಟಿವ್ ಬ್ಯಾಂಕ್(1964) ಮುಂತಾದವನ್ನು ಪ್ರಾರಂಭಿಸಿದರು.

ಶ್ರೀನಿವಾಸಯ್ಯನವರು ಬಿ.ಎಚ್.ಇ.ಎಲ್. ಕಾರ್ಖಾನೆಯ ವತಿಯಿಂದ 1954 ಮತ್ತು 57ರಲ್ಲಿ ಜರ್ಮನಿಗೆ ಹೋಗಿ ಸುಮಾರು ಮೂರು ವರ್ಷಗಳ ಕಾಲ ರೈಲ್ ಕೋಚ್ ನಿರ್ಮಾಣದಲ್ಲಿ ತರಬೇತಿ ಪಡೆದರು. ಆ ಪ್ರವಾಸ ಕಥನವೇ 'ನಾ ಕಂಡ ಜರ್ಮನಿ'. ಈ ಕೃತಿಯನ್ನು ಪಿ.ಯು.ಸಿ. ಮೊದಲನೇ ತರಗತಿಗೆ ಎರಡು ಬಾರಿ ಪಠ್ಯ ಪುಸ್ತಕವನ್ನಾಗಿ ಆರಿಸಲಾಯಿತು. ಸಾಹಿತ್ಯ ಅಕಾಡೆಮಿಯ ಬಹುಮಾನವೂ ಪಡೆದ ಈ ಕೃತಿಯು ಇಂಗ್ಲೀಷ್ ಸೇರಿದಂತೆ ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿದೆ. ಆತ್ಮ ಕಥೆಯೂ



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರಾದ ಎನ್ ಆರ್ ವಿಶುಕುಮಾರ್, ಉಪ ನಿರ್ದೇಶಕರಾದ ಎಚ್ ಬಿ ದಿನೇಶ್ ಹಾಗೂ ಕಡಿದಾಳ್ ಶಾಮಣ್ಣ ಅವರೊಂದಿಗೆ

ಸೇರಿದಂತೆ 80ಕ್ಕೂ ಮೀರಿದ ಕೃತಿಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಇವರು ರಚಿಸಿ ಪ್ರಕಟಿಸಿದ್ದಾರೆ.

1962-63ರಲ್ಲಿ ಆಕಾಶವಾಣಿಯ ಸಂಪರ್ಕವೂ ಇವರಿಗೆ ದೊರೆಯಿತು. ಇವರ ಮೊದಲ ರೇಡಿಯೂ ಭಾಷಣ "ಕೈ ಕೆಸರಾದರೆ ಬಾಯಿ ಮೊಸರು".

ಗಾಂಧೀ ಶತಮಾನೋತ್ಸವ ಸಂದರ್ಭದಲ್ಲಿ(1969) ಗಾಂಧೀ ಸಾಹಿತ್ಯ ಸಂಘದಲ್ಲಿ ಪ್ರಕೃತಿ ಚಿಕಿತ್ಸಾ ತರಗತಿಗಳನ್ನು ಶ್ರೀನಿವಾಸಯ್ಯನವರು ಪ್ರಾರಂಭಿಸಿ ನಂತರದಲ್ಲಿ ಪ್ರಕೃತಿ ಜೀವನ ಕೇಂದ್ರವನ್ನು ಪ್ರಾರಂಭಿಸಿದರು. ವಾರಕ್ಕೊಂದು ಸಲ ಉಚಿತ ಸಲಹಾ ವ್ಯವಸ್ಥೆಯನ್ನೂ ಒದಗಿಸಿದರು. ಆ ದಿನಗಳಲ್ಲಿ ಕನ್ನಡದಲ್ಲಿ ಪ್ರಕೃತಿ ಜೀವನದ ಬಗ್ಗೆ ಯಾವ ಪತ್ರಿಕೆಯೂ ಇರಲಿಲ್ಲ. ಆಗ ಇವರು 'ಪ್ರಕೃತಿ ಜೀವನ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಕನ್ನಡದಲ್ಲಿ 1972ರಲ್ಲಿ ಪ್ರಾರಂಭಿಸಿ ದೇ.ಜವರೇಗೌಡರಿಂದ ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿಸಿದರು. (ಈಗ ಮಾಸ ಪತ್ರಿಕೆಯಾಗಿ ಪ್ರಕಟವಾಗುತ್ತಿದೆ.) ಕರ್ನಾಟಕದಲ್ಲಿ ಪ್ರಕೃತಿ ಚಿಕಿತ್ಸೆ ಬೆಳೆಯಲು ಶ್ರೀನಿವಾಸಯ್ಯನವರು ಮುಖ್ಯ ಪಾತ್ರ ವಹಿಸಿದರು.

ಶ್ರೀನಿವಾಸಯ್ಯನವರು ಸಮಾಜ ಸೇವಾ ಸಂಸ್ಥೆಗಳಿಗೆ ಸಹಾಯ ಮಾಡುವ ಉದ್ದೇಶದಿಂದ 1979ರಲ್ಲಿ ತಮ್ಮ ಪತ್ನಿ ಹೆಸರಿನಲ್ಲಿ 'ಜಯಶ್ರೀ ಟ್ರಸ್ಟ್' ಸ್ಥಾಪನೆ ಮಾಡಿದರು. ಒಕ್ಕಲಿಗರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಮತ್ತು ಖಜಾಂಚಿಯಾಗಿ ಸುಮಾರು 20 ವರ್ಷಗಳ ಕಾಲ ಸೇವೆ ಸಲ್ಲಿಸಿ ಇಂಜಿನಿಯರಿಂಗ್ ಕಾಲೇಜು ಮತ್ತು ವೈದ್ಯಕೀಯ ಕಾಲೇಜು ಪ್ರಾರಂಭವಾಗಲು ಶ್ರಮಿಸಿದರು.

ಆಚಾರ್ಯ ವಿನೋಬಾ ಅವರ ಕಾರ್ಯದರ್ಶಿಯಾಗಿದ್ದ ಜಯದೇವ್ ಅವರ ಆಹ್ವಾನದ ಮೇರೆಗೆ ಪವನಾರ್ ಆಶ್ರಮಕ್ಕೆ ಭೇಟಿ ನೀಡಿ 11-09-1982ರಂದು ನಡೆದ ವಿನೋಬಾ ಅವರ 88ನೇ ಕೊನೆ ಜನ್ಮ ದಿನಾಚರಣೆಯಲ್ಲಿ ಭಾಗಿಯಾದರು. ಆಗ ವಿನೋಬಾಜಿಯವರು ಕನ್ನಡದಲ್ಲಿ ಆಶೀರ್ವದಿಸಿದ್ದು ಶ್ರೀನಿವಾಸಯ್ಯನವರಿಗೆ ಆಶ್ಚರ್ಯವನ್ನುಂಟುಮಾಡಿತು. ಇದಾದ ಕೆಲವು ದಿವಸಗಳಲ್ಲಿ ವಿನೋಬಾಜಿ (15-12-1982) ನಿಧನ ಹೊಂದಿದರು.

1975ರಿಂದ ಕಡಿದಾಳ್ ಮಂಜಪ್ಪನವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದರು. ಸರ್ದಾರ್ ವೆಂಕಟರಾಮಯ್ಯನವರು ಕಾರ್ಯದರ್ಶಿಯಾಗಿದ್ದರು. ಏತನ್ಮಧ್ಯೆ ಬಿ.ಇ.ಎಂ.ಎಲ್.ನಲ್ಲಿ ಉಪ ವ್ಯವಸ್ಥಾಪಕರಾಗಿ 1983ರಲ್ಲಿ ನಿವೃತ್ತಿ ಹೊಂದಿದ್ದ ಶ್ರೀನಿವಾಸಯ್ಯನವರು ಗಾಂಧೀಭವನಕ್ಕೆ ಆಗಾಗ್ಗೆ ಹೋಗುತ್ತಿದ್ದರು. ಇವರಲ್ಲಿದ್ದ ಆಸಕ್ತಿಯನ್ನು ಕಂಡ ಕಡಿದಾಳ್ ಮಂಜಪ್ಪನವರು ಕರ್ನಾಟಕ ಸ್ಮಾರಕ ನಿಧಿ ಅಧ್ಯಕ್ಷರನ್ನಾಗಿ 1985ರಲ್ಲಿ ಇವರನ್ನು ನೇಮಿಸಿದರು. ತತ್ಪರಿಣಾಮವಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಇವರು ಕಳೆದ 30 ವರ್ಷಗಳಲ್ಲಿ ಗಾಂಧೀಭವನವನ್ನು ವಿಸ್ತರಿಸಿ ಭವ್ಯವಾಗಿ ಬೆಳೆಸಿದರು.

ತಮ್ಮ ಜೀವಿತಾವಧಿಯ ಏಳು ದಶಕಗಳ ಕಾಲ ಜೋಪಾನವಾಗಿ ಹಾಗೂ ಪರಿಶ್ರಮದಿಂದ ಸಂಗ್ರಹಿಸಿದ್ದ ಜೀವಮಾನದ ಸಾಧನೆ ಎಂದೇ ಹೇಳಬಹುದಾದ 20,000 ಅಮೂಲ್ಯ ಪುಸ್ತಕಗಳ ಸಂಗ್ರಹ ಹಾಗೂ ಸ್ಮರಣಿಕೆಗಳನ್ನು ಗಾಂಧಿಭವನಕ್ಕೆ ನೀಡಿದರು.

ಶ್ರೀರಾಮ ಮಂದಿರ ಟ್ರಸ್ಟ್ ವತಿಯಿಂದ 1976ರಲ್ಲಿ ವೃದ್ಧಾಶ್ರಮ ಪ್ರಾರಂಭಿಸಿ, ಅತಿ ಕಡಿಮೆ ವೆಚ್ಚದಲ್ಲಿ ಉತ್ತಮ ಮಟ್ಟದ ಸಂಸ್ಥೆ ಪ್ರಾರಂಭಿಸಿದರು. ಮಲ್ಲೇಶ್ವರದ ಹಿರಿಯ ನಾಗರಿಕರಿಗೆ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿ ಹಿರಿಯ ನಾಗರಿಕ ವೇದಿಕೆಯನ್ನು ಸ್ಥಾಪಿಸಿದರು.

300ಕ್ಕೂ ಹೆಚ್ಚು ಸಂಘ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿರುವ ಕರ್ನಾಟಕದ ಏಕೈಕ ವ್ಯಕ್ತಿ ಹೊ.ಶ್ರೀನಿವಾಸಯ್ಯನವರು. ಇವರ ಒಂಬತ್ತು ದಶಕಗಳ ಬದುಕು ಹಲವಾರು ಏಳುಬೀಳುಗಳನ್ನು ಕಂಡು ಕಠಿಣ ಪರಿಶ್ರಮದಿಂದ ಅತ್ಯಂತ ಸರಳ ಹಾಗೂ ಪ್ರಾಮಾಣಿಕತೆಯಿಂದ ರೂಪಿತಗೊಂಡಿದ್ದು ಸ್ವಾತಂತ್ರ್ಯದ ಚಳವಳಿಯಲ್ಲಿ ಅವರು ವಹಿಸಿದ ಧೈರ್ಯ, ಸ್ಥೈರ್ಯ ಇಂದಿನ ಸಮಾಜಕ್ಕೆ ಅಪೂರ್ವ ಮಾದರಿಯಾಗಿದೆ. ಅವರು ಕೇವಲ ಒಬ್ಬ ವ್ಯಕ್ತಿಯಾಗಿ ಬದುಕದೆ ಆದರ್ಶದ ಬಹು ದೊಡ್ಡ ಶಕ್ತಿಯಾಗಿ ಬದುಕಿ 'ಕರ್ನಾಟಕದ ಗಾಂಧೀ' ಎಂದೇ ಹೆಸರು ಪಡೆದಿದ್ದ ಹಿರಿಯ ಗಾಂಧಿವಾದಿ ಡಾ.ಹೊ.ಶ್ರೀನಿವಾಸಯ್ಯನವರು ಏಪ್ರಿಲ್ ಆರರಂದು ಇನ್ನಿಲ್ಲವಾದರು.

# ಕಾರ್ಮಿಕ ಶಕ್ತಿಯ ದ್ಯೋತಕ ಮೇ 1

**ಮೇ 1 ರಂದು ಇಡೀ ವಿಶ್ವದಾದ್ಯಂತ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತಿದೆ. ಮೇ ದಿನಕ್ಕೆ ಮಹತ್ತರವಾದ ಚಾರಿತ್ರಿಕ ಮಹತ್ವವಿದೆ. ತತ್ಕಾರಣ ಅದೊಂದು ಅಂತರ್ ರಾಷ್ಟ್ರೀಯ ಮಾಹಿತಿಯ ದಿನವಾಗಿದೆ. ಮೇ ದಿನಾಚರಣೆಯು ಶ್ರಮಜೀವಿಗಳ ಸಂಕಲ್ಪ ಶಕ್ತಿಯ ಸಂಕೇತ**

ಡಾ. ಆರ್. ಶಂಕರಪ್ಪ

**1886**ರ ಮೇ 4. ಮಂಗಳವಾರ. ರಾತ್ರಿ ಎಂಟೂವರೆ ಗಂಟೆಯ ಸಮಯ ಚಿಕಾಗೋ ನಗರದ ಹೇ ಮಾರ್ಕೆಟ್ ಚೌಕಿನ ಬಳಿಯಲ್ಲಿ ಡಿಸ್‌ಪ್ಲೇನ್ಸ್ ಓಣಿಯಲ್ಲಿ ನಿಂತಿದ್ದ ಒಂದು ದೊಡ್ಡ ಬಂಡಿಯ ಸುತ್ತಲೂ ಸುಮಾರು 2500 ಜನರು ನೆರೆದಿದ್ದರು. ಕಾರ್ಮಿಕರ ಪತ್ರಿಕೆಯೊಂದರ ಸಂಪಾದಕನಾಗಿದ್ದ. ಆಗಸ್ಟ್ ಸ್ಪೈಜ್ ಒಮ್ಮೆಲೆ ಅಲ್ಲಿ ನಿಂತಿದ್ದ ಹಳೆಯ ಬಂಡಿಯ ಮೇಲೆ ಹತ್ತಿ ತನ್ನ ಪ್ರತಿಭಟನಾತ್ಮಕ ಭಾಷಣ ಆರಂಭಿಸಿದನು. ಹಿಂದಿನ ದಿನ ಮ್ಯಾಕ್-ಕಾರ್ಮಿಕ್ ರೀಪರ್ ಪ್ಲಾಂಟ್‌ನಲ್ಲಿ ಮುಷ್ಕರ ನಿರತ ಕಾರ್ಮಿಕ ಮೇಲೆ ಪೊಲೀಸರು ಗುಂಡು ಹಾರಿಸಿದ್ದರು. ಪೊಲೀಸರ ಆ ದೌರ್ಜನ್ಯವನ್ನು ಖಂಡಿಸುತ್ತ ಆಗಸ್ಟ್ ಸ್ಪೈಜ್ ಆವೇಶದಿಂದ ಮಾತಾಡಿದನು. ಅವನು ನಂತರ ಆಲ್ಬರ್ಟ್ ಪಾರ್ಸನ್ಸ್ ನೆರೆದ ಜನಸ್ತೋಮವನ್ನುದ್ದೇಶಿಸಿ ಮಾತಾಡಿದನು. ಅವನು ಮಾತು ಮುಗಿಸುತ್ತಲೇ ಮೆಥಾಡಿಸ್ಟ್ ಚರ್ಚಿನಲ್ಲಿ ಸಾಮಾನ್ಯ ಬೋಧಕನಾಗಿದ್ದ ಸ್ಯಾಮುವೆಲ್ ಫೀಲ್ಡನ್ ತನ್ನ ಭಾಷಣ ಶುರು ಮಾಡಿದನು. ಹೀಗೆ ಕಾರ್ಮಿಕ ಪತ್ರಿಕೆ ಸಂಪಾದಕ, ಕಾರ್ಮಿಕರ ನಾಯಕ ಹಾಗೂ ಚರ್ಚಿನ







ಬೋಧಕನ ಬದುಕಿನ ವಿವಿಧ ಕ್ಷೇತ್ರದ ಮೂವರೂ ಮಾತಾಡುತ್ತ ಅಮೇರಿಕನ್ ಸಮಾಜದ ಹುಳುಕು-ಕೊಳಕುಗಳನ್ನು ಬಿಚ್ಚಿ ಬಯಲಿಗಿಟ್ಟರು.

ಅವರ ಮಾತು ರಾತ್ರಿ ಹತ್ತೂವರೆ ಗಂಟೆಯವರೆಗೂ ಮುಂದುವರೆದೇ ಇತ್ತು. ಅಷ್ಟರಲ್ಲಿಯೇ 176 ಸಶಸ್ತ್ರ ಪೊಲೀಸರ ಒಂದು ಗುಂಪು ದಿಢೀರನೆ ಬಂದು ಅಲ್ಲಿಯ ಜನಸಮೂಹದ ಮೇಲೆ ದಾಳಿ ಮಾಡಿತು. ಒಮ್ಮೆಲೆ ಒಂದು ಡೈನಮೈಟ್ ಬಾಂಬ್ ಆಸ್ಫೋಟಿಸಿದ ಸದ್ದು ಕೇಳಿಸಿತು ಜನರು ದಿಗಿಲುಗೊಂಡು ದಿಗ್ಭ್ರಾಂತರಾದರು. ಯಾರೋ ಅಪರಿಚಿತರು ಒಗೆದಿದ್ದ ಆ ಬಾಂಬು ಪೊಲೀಸರ ಮಧ್ಯದಲ್ಲಿ ಆಸ್ಫೋಟಿಸಿತ್ತು. ಅಂಥ ಬಾಂಬ್ ಅನ್ನು ಹಿಂದೆ ಯಾರೂ ಬಳಸಿರಲಿಲ್ಲ. ಒಂದೇ ಕಡೆಗೆ ಗುಂಪುಗೂಡಿ ನಿಂತಿದ್ದ ಪೊಲೀಸರ ಮಧ್ಯೆ ಸಿಡಿದ ಆ ಬಾಂಬು ಒಬ್ಬನನ್ನು ಕೊಂದು ಡಜನುಗಟ್ಟಲೆ ಪೊಲೀಸರನ್ನು ಗಂಭೀರವಾಗಿ ಗಾಯಗೊಳಿಸಿತು. ವಿಹ್ವಲಗೊಂಡ ಪೊಲೀಸರು ವಿವೇಕಹೀನರಾಗಿ ದಶದಿಕ್ಕುಗಳಲ್ಲೂ ಯದ್ವಾ-ಬಿದ್ರಿ ಗುಂಡು ಹಾರಿಸಿದರು. ಪರಿಣಾಮವಾಗಿ ನಾಲ್ಕು ಜನ ಕಾರ್ಮಿಕರು ನೆಲಕ್ಕುರುಳಿ ಅರೆ ಕ್ಷಣದಲ್ಲಿಯೇ ಹೆಣವಾದರು ಇನ್ನು ಹತ್ತಾರು ಜನರು ಮಾರಣಾಂತಿಕವಾಗಿ ಗಾಯಗೊಂಡರು.

ಈ ದುರ್ಘಟನೆಯ ಪರಿಣಾಮ ಇನ್ನೂ ಭೀಕರವಾಗಿತ್ತು. ಮುಂದಿನ ಅನೇಕ ವಾರಗಳವರೆಗೆ ಚಿಕಾಗೋ ನಗರದಲ್ಲಿ ಅಷ್ಟೇ ಅಲ್ಲ, ರಾಷ್ಟ್ರದ ಎಲ್ಲಾ ನಗರಗಲ್ಲಿಯೂ ವಾಕ್ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ ಹೇಳ ಹೆಸರಿಲ್ಲದಂತೆ ಕಾಣೆಯಾದವು. ನೂರಾರು ಕಾರ್ಮಿಕರು ನಾಯಕರು ಬಂಧನಕ್ಕೊಳಗಾದರು. ಹಲವಾರು ಜನಾಂಗೀಯ ಸಮುದಾಯದ ಮುಖಂಡರು ಕೂಡ ಬಂಧಿಸಲ್ಪಟ್ಟರು. ಪೊಲೀಸರ ವಿವೇಕಹೀನ ಉದ್ಧಟತನದಿಂದಾಗಿ ಉದ್ಭವಿಸಿದ್ದ ಆ ಹಿಂಸೆಯ ಹೊಣೆಯನ್ನು ನೈಟ್ಸ್ ಆಫ್ ಲೇಬರ್ (ಏಟಿರುಣ ಠಜಿ ಟಚಿಭಠಣಡಿ) ಹೆಗಲಿಗೆ ಹೊರಿಸಿ ಎಲ್ಲರೂ ಅವರನ್ನೇ ದೂಷಿಸಲಾರಂಭಿಸಿದರು. ಪತ್ರಿಕೆಗಳು ವ್ಯಾಪಾರಸ್ತರು ಹಾಗೂ ಜನಸಾಮಾನ್ಯರು ಎಲ್ಲರೂ ಲೇಬರ್ ಯೂನಿಯನ್‌ಗಳ ಮೇಲೆ ಹರಿಹಾಯತೊಡಗಿದರು. ದೈನಂದಿನ ಬದುಕು ಏರುಪೇರಾಗಿ ಎಲ್ಲೆಲ್ಲಿಯೂ ಹಾಹಾಕಾರ ಕಾಣಿಸಿಕೊಂಡಂತೆಯೇ ಜನರು ಕಾಯ್ದೆ ಮತ್ತು ಸುವ್ಯವಸ್ಥೆಗಾಗಿ ಪ್ರಲಾಪಿಸ ಹತ್ತಿದರು. 1893 ರ ಜೂನ್‌ನಲ್ಲಿ ಇಲಿನಾಯ್ ಗವರ್ನರ್ ಜಾನ್ ಪೀಟರ್ ಆಲ್ಟ್‌ಜೇಲ್ಡ್ ಉಳಿದ 3 ಕೈದಿಗಳಿಗೆ ಕ್ಷಮಾದಾನ ಮಾಡಿದನು.

ಹೇ ಮಾರ್ಕೆಟ್‌ನಲ್ಲಿ ನಡೆದ ಸಭೆ, ಅಂದು ಒಗೆಯಲಾದ ಬಾಂಬು, ತಥಾಕಥಿತ ಹೇ ಮಾರ್ಕೆಟ್ ಬಂಡಾಯ, ವಿಚಾರಣೆ, ಶಿಕ್ಷೆ ಮತ್ತು ಆ ನಂತರ ನಡೆದ ಎಲ್ಲ ಘಟನೆಗಳು-ಇವುಗಳನ್ನೆಲ್ಲ ಒಟ್ಟಾಗಿಸಿ ಹೇ ಮಾರ್ಕೆಟ್ ಹತ್ಯಾಕಾಂಡವೆಂದು ಕರೆಯಲಾಗುತ್ತದೆ. 1886ರ ನಂತರ ಚಿಕಾಗೋ ನಗರ ಅನೇಕ ಬಾರಿ ಬದಲಾವಣೆಗಳನ್ನು ಕಂಡಿದೆ. ಹಳೆಯ ಕಟ್ಟಡಗಳು ಕುಸಿದು ಅವುಗಳ ಜಾಗದಲ್ಲಿ ಬೃಹತ್ ಕಟ್ಟಡಗಳು ತಲೆ ಎತ್ತಿ ನಿಂತಿವೆ. ನವ-ನವೀನ ರಸ್ತೆಗಳು ನಿರ್ಮಾಣವಾಗಿವೆ. ಆದರೂ ಹೇ ಮಾರ್ಕೆಟಿಗೆ ಸಂಬಂಧಿಸಿದ ಸ್ಥಳಗಳು ಇವತ್ತಿಗೂ ಹಾಗೆಯೇ ಉಳಿದುಕೊಂಡಿವೆ.

**ಹೇ ಮಾರ್ಕೆಟ್ ಹೋರಾಟ : ನಡೆದು ಬಂದ ದಾರಿ**

8 ಗಂಟೆಗಳ ದುಡಿಮೆಯ ದಿನಕ್ಕಾಗಿ ಮೇ ಡೇ ಪ್ರತಿಭಟನಾ ಮೆರವಣಿಗೆ, ಹೇ ಮಾರ್ಕೆಟ್ ಬಾಂಬು, ವಿಚಾರಣೆ, ಶಿಕ್ಷೆ ಇತ್ಯಾದಿಗಳೆಲ್ಲವೂ ಪ್ರಪಂಚದ ಮೂಲೆ-ಮೂಲೆಗಳ ಮೇಲೆ

ಪ್ರಭಾವ ಬೀರಿದ ಘಟನಾವಳಿಗಳ ಒಂದು ಸರಪಳಿಯನ್ನೇ ಪ್ರಾರಂಭಿಸಿದವು.

ಹೇ ಮಾರ್ಕೆಟ್ ಬಾಂಬು ದುರಂತ ನಂತರ ಸಾರ್ವಜನಿಕರ ಅಭಿಪ್ರಾಯ ಕಾರ್ಮಿಕರ ಆಂದೋಲನಕ್ಕೆ ವಿರುದ್ಧವಾಗಿ ರೂಪಗೊಂಡಿದ್ದರಿಂದ ಹೋರಾಟದ ತೀವ್ರತೆ ಕುಗ್ಗಿ ದುರ್ಬಲವಾಗಿದ್ದರೂ ಅಮೇರಿಕನ್ ಫೆಡರೇಶನ್ ಆಫ್ ಲೇಬರ್ ತನ್ನ 8 ಗಂಟೆಯ ದಿನದ ಅಂದೋಲನವನ್ನು ಕೈ ಬಿಡಲು ನಿರಾಕರಿಸಿತು. ಆದರೆ ವಾಸ್ತವವಾಗಿ ಆಂದೋಲನ ತನ್ನ ಮೊದಲಿನ ಶಕ್ತಿ ಸಾಮರ್ಥ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪರಿಣಾಮವಾಗಿ, ಆನೇಕ ಕಾರ್ಖಾನೆ ವಿಭಾಗಗಳಲ್ಲಿ ಈ ಮುಂಚೆ 8 ಗಂಟೆಯ ಬೇಡಿಕೆಯನ್ನು ಪೂರೈಸಿಕೊಂಡು ನೆಮ್ಮದಿಯಿಂದ ದುಡಿಯುತ್ತಿದ್ದವರು ಕೂಡ ಈಗ ಮತ್ತೆ 10–12 ಗಂಟೆಗಳಷ್ಟು ದೀರ್ಘಕಾಲ ದುಡಿಯುವ ದಾರುಣ ಸ್ಥಿತಿ ನಿರ್ಮಾಣವಾಯಿತು. ಅಮೇರಿಕನ್ ಫೇಡೆರೇಶನ್ ಆಫ್ ಲೇಬರ್ 1888ರ ಡಿಸೆಂಬರ್‌ನಲ್ಲಿ ನಡೆದ ಸೇಂಟ್ ಲೂಯಿಯಲ್ಲಿ ಸಮಾವೇಶದಲ್ಲಿ ಕಾರ್ಮಿಕರಾಂದೋಲನವನ್ನು ಪುನರುಜ್ಜೀವನಗೊಳಿಸಲುವ ಉದ್ದೇಶದಿಂದ 1890 ಮೇ 1 ರ ದಿನಾಚರಣೆಯನ್ನು ಅಧಿಕೃತವಾಗಿಯೇ ಘೋಷಿಸಿತು. 8 ಗಂಟೆಗಳ ದುಡಿಮೆಯನ್ನು ದಿನ ಮತ್ತೆ ಜಾರಿಗೆ ಬರಲೇಬೇಕು ಎಂಬ ಘೋಷಣೆಯಡಿಯಲ್ಲಿ ಹೋರಾಡದ ಸಿದ್ಧತೆಗಳು ಭರದಿಂದ ಸಾಗಿದವು 8 ಗಂಟೆಗಳ ದುಡಿಮೆ, 8 ಗಂಟೆಗಳ ವಿಶ್ರಾಂತಿ, 8 ಗಂಟೆಗಳು ನಮ್ಮ ಖಾಸಗಿ ಇಚ್ಛೆಯ ಕಾರ್ಯಕ್ಕೆ ಎಂಬ ಘೋಷಣೆ ಎಲ್ಲೆಲ್ಲಿಯೂ ಅನುರಣಿಸತೊಡಗಿತು.

1889ರ ಜುಲೈ ತಿಂಗಳಲ್ಲಿ ಸ್ಯಾಮ್ಯುವೆಲ್ ಗಾಂಪರಸ್ಸ್ ಹಾಗೂ ಅಮೇರಿಕನ್ ಫೆಡರೇಶನ್ ಆಫ್ ಲೇಬರ್ ಸಾಕಷ್ಟು ಶ್ರಮ ವಹಿಸಿ ಹಣ ಸಂಗ್ರಹಿಸಿದರು– ಪ್ಯಾರಿಸ್‌ನಲ್ಲಿ ನಡೆಯಲಿದ್ದ ಅಂತರಾಷ್ಟ್ರೀಯ ಕಾರ್ಮಿಕರ ಸಮಾವೇಶದಲ್ಲಿ ಪಾಲ್ಗೊಳ್ಳಲು ಒಬ್ಬ ಪ್ರತಿನಿಧಿಯನ್ನು ಕಳುಹಿಸುವುದಕ್ಕಾಗಿ 1889ರ ಜುಲೈ 14 ರಂದು ಜರುಗಲಿದ್ದ ಫ್ರಾನ್ಸ್ ಕ್ರಾಂತಿಯ ಹಾಗೂ ಬ್ಯಾಸ್ಟಾಯಿಲ್ ದಿನದ ಶತಮಾನೋತ್ಸವದ ಅಂಗವಾಗಿಯೇ ವಿಶ್ವ ಕಾರ್ಮಿಕರ ಅಧಿವೇಶನ ಪ್ಯಾರಿಸ್‌ನಲ್ಲಿ ಜರುಗಲಿತ್ತು, ಈ ಅಧಿವೇಶನದಲ್ಲಿ ಅಮೇರಿಕನ್ ಲೇಬರ್ ಫೆಡರೇಶನ್ನಿನ  ಪ್ರತಿನಿಧಿಯಾಗಿ ಪಾಲ್ಗೊಂಡಿದ್ದ ಹ್ಯೂ ಮ್ಯಾಕ್‌ಗ್ರೆಗರ್ ಅಂತರಾಷ್ಟ್ರೀಯ ಲೇಬರ್ ಕಾಂಗ್ರೆಸ್‌ನಲ್ಲಿ ಮಾತಾಡುತ್ತ, ಮೇ ದಿನವನ್ನು ಅಂತರಾಷ್ಟ್ರೀಯ ಕಾರ್ಮಿಕರ ದಿನವನ್ನಾಗಿ ಸ್ವೀಕರಿಸಬೇಕೆಂದು ಕೇಳಿಕೊಂಡನು. ಪ್ರತಿವರ್ಷ ಮೇ 1 ರಂದು 8 ಗಂಟೆಗಳ ದುಡಿಮೆಯನ್ನು ದಿನ, ಪ್ರಜಾಸತ್ತೆ, ಕಾರ್ಮಿಕರ ಸಂಘಟನೆಯ ಹಕ್ಕು ಮುಂತಾದವುಗಳಿಗಾಗಿ ಕಾರ್ಮಿಕರು ಬೃಹತ್ ಮೆರವಣಿಗೆಯನ್ನು ನಡೆಸಿ ತಮ್ಮ ಬೇಡಿಕೆಗಳನ್ನು ಮಂಡಿಸಿ ಆಗ್ರಹಿಸಬೇಕೆಂದು ಸೂಚಿಸಿದನು. ಜೊತೆಗೆ ಆ ದಿನವು 'ಚಿಕಾಗೋ ಹುತಾತ್ಮರ' ಸಂಸ್ಮರಣೀಯ ದಿನವಾಗಬೇಕೆಂದು ಹೇಳಿದನು. ಆ ನಂತರ 1892 ರಲ್ಲಿ ಸ್ವಿಜರ್‌ಲ್ಯಾಂಡಿನ ಜಿನಿವಾ ನಗರದಲ್ಲಿ ನಡೆದ ಒಂದು ಅಂತರಾಷ್ಟ್ರೀಯ ಸಮಾಜವಾದಿ ಸಮ್ಮೇಳನದಲ್ಲಿ ನೈಟ್ಸ್ ಆಫ್ ಲೇಬರ್ ಇಬ್ಬ ಪ್ರತಿನಿಧಿ ಇಂಥದ್ದೇ ಗೊತ್ತುವಳಿಯನ್ನು ಮಂಡಿಸಿದನು. ಅದನ್ನು ಆ ಸಮ್ಮೇಳನ ಸ್ವೀಕರಿಸಿತು.




ಕಾರ್ಮಿಕ ದಿನಾಚರಣೆಯ ಪಿತಾಮಹನೆಂದೇ ಪ್ರಖ್ಯಾತನಾಗಿದ್ದ ಪೀಟರ್ ಜೆ. ಮ್ಯಾಕ್‌ಗಾಯರ್ ಕೂಡ ಮೊದಲಿನ ಸೆಪ್ಟೆಂಬರ್ ತಿಂಗಳಿನ ಮೊದಲನೇ ಸೋಮವಾರದ ಕಾರ್ಮಿಕರ ದಿನಾಚರಣೆಗೆ ಬದಲಾಗಿ, ಮೇ ದಿನಾಚರಣೆಯನ್ನೇ ಬೆಂಬಲಿಸಲಾರಂಭಿಸಿದನು. ಕ್ರಮೇಣ ಪ್ರಪಂಚದಾದ್ಯಂತ ಮೇ ಒಂದನೇ ದಿನವು ಅಂತರಾಷ್ಟ್ರಿಯ ಕಾರ್ಮಿಕರ ದಿನಾಚರಣೆಯಾಗಿ ಅಚರಿಸಲ್ಪಡತೊಡಗಿತು.

ಆದರೆ ಗ್ರೂವರ್ ಕ್ಲಿವ್‌ಲ್ಯಾಂಡ್ 1894ರಲ್ಲಿ ಇದ್ದಕ್ಕಿದ್ದಂತೆ ಅಮೇರಿಕದಲ್ಲಿ ಸೆಪ್ಟೆಂಬರ್ ಮೊದಲನೇ ಸೋಮವಾರವನ್ನೇ ಕಾರ್ಮಿಕ ದಿನವನ್ನಾಗಿ ಆಚರಿಸಲಾಗುವುದೆಂದು ಘೋಷಿಸಿದನು. ಅಷ್ಟೇ ಅಲ್ಲ, ಅಂದು ರಾಷ್ಟ್ರೀಯ ರಜಾ ದಿನವನ್ನಾಗಿ ಘೋಷಿಸುವ ಉದ್ದೇಶದಿಂದ ಒಂದು ಮಸೂದೆಗೆ ಸಹಿ ಹಾಕಿದನು. 1882ರಿಂದಲೂ ಇಂಥ ಒಂದು ಮಸೂದೆಗಾಗಿ ಪೀಟರ್ ಮ್ಯಾಕ್‌ಗಾಯರ್ ಇನ್ನಿತರ ಟ್ರೇಡ್ ಯೂನಿಯನ್‌ಗಳು ಒತ್ತಾಯಿಸುತ್ತಲೇ ಬಂದಿದ್ದವು. ಪ್ರಾಯಶಃ ಈಗ ಮೇ ಡೇ ಬಗ್ಗೆ ಅಮೇರಿಕನ್ ಕಾರ್ಮಿಕರಾಂದೋಲನ ತೋರುತ್ತಿದ್ದ ಉತ್ಸಾಹವನ್ನು ತಗ್ಗಿಸುವ ಉದ್ದೇಶದಿಂದಲೇ ಕ್ಲಿವ್‌ಲ್ಯಾಂಡ್ ಕಾರ್ಮಿಕರ ಹಳೆಯ ಬೇಡಿಕೆಯನ್ನು ಈಡೇರಿಸುವ ನೆಪದಲ್ಲಿ ಸೆಪ್ಟೆಂಬರ್ ಮೊದಲ ಸೋಮವಾರವನ್ನು ಕಾರ್ಮಿಕ ದಿನವನ್ನಾಗಿ ಘೋಷಿಸಿದನು ಮುಂದೆ 1950ರಿಂದ ಅಮೇರಿಕನ್ ಬಾರ್ ಅಸೋಸಿಯೇಷನ್ ಮೇ ಡೇ ಯನ್ನು ಅಮೇರಿಕೆಯ 'ಲಾ ಡೇ' ಎಂದು ಕರೆಯಲಾರಂಭಿಸಿತು.

ಇಂದು ಕೆನಡ ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ಮಾತ್ರ ಸೆಪ್ಟೆಂಬರ್ ಮೊದಲನೇ ಸೋಮವಾರವನ್ನು ಕಾರ್ಮಿಕರ ದಿನವನ್ನಾಗಿ ಆಚರಿಸುತ್ತಿದ್ದರೆ. ವಿಶ್ವದ ಉಳಿದೆಲ್ಲ ಕಾರ್ಮಿಕರು ಮೇ 1 ನ್ನು ಕಾರ್ಮಿಕರ ಅಂತರಾಷ್ಟ್ರೀಯ ದಿನವನ್ನಾಗಿ ಆಚರಿಸುತ್ತಿದ್ದಾರೆ.





# ಧರ್ಮ ಸಮನ್ವಯದ ಜೈನ ಕೇಂದ್ರ
# ಶ್ರವಣಬೆಳಗೊಳ

ಡಾ.ಎಸ್. ನಂಜುಂಡಸ್ವಾಮಿ

**ಕ್ರಿ.ಶ. 1780ರಲ್ಲಿ ರಚಿತವಾದ ಅನಂತ ಕವಿಯ ಬೆಳ್ಗೊಳದ ಗೊಮ್ಮಟೇಶ್ವರ ಚರಿತ್ರೆಯಲ್ಲಿ ಹೇಳಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ.1827ರಲ್ಲಿ ಮಹಾಮಸ್ತಕಾಭಿಷೇಕವನ್ನು ನಡೆಸಿ ದತ್ತಿಗಳನ್ನು ನೀಡಿದರೆಂದು ಶಾಸನದಿಂದ ತಿಳಿದುಬರುತ್ತದೆ. ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಗಳು 30,000 ರೂ.ಗಳನ್ನು ಖರ್ಚು ಮಾಡಿ 1887 ಮಾರ್ಚ್ 14 ರಂದು ಮಹಾಮಸ್ತಕಾಭಿಷೇಕವನ್ನು ಮಾಡಿಸಿದರೆಂದು ಇಂಡಿಯನ್ ಆಂಟಿಕ್ವೆರಿ ಸಂಶೋಧನಾ ಪತ್ರಿಕೆಯಲ್ಲಿ ಹೇಳಿದೆ. 1909ರಲ್ಲಿ ಶಾಂತಿರಾಜ ಸ್ವಾಮಿಗಳು ಮಹಾಮಸ್ತಕಾಭಿಷೇಕದ ನೇತೃತ್ವ ವಹಿಸಿದ್ದರು.  1925, 1940, 1953 ರಲ್ಲಿ ಮೈಸೂರು ರಾಜರ ಆಶ್ರಯದಲ್ಲಿ ಮಹಾಮಸ್ತಕಾಭಿಷೇಕಗಳು ನಡೆದುದರ ಉಲ್ಲೇಖವಿದೆ.**

ಶ್ರವಣ ಬೆಳಗೊಳವು ನಮ್ಮ ರಾಜ್ಯದ ಅತ್ಯಂತ ಪ್ರಾಚೀನ ಜೈನ ಧರ್ಮದ ನೆಲೆಬೀಡು.  ಈ ಊರು ಐತಿಹಾಸಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವವನ್ನು ಪಡೆದಿದ್ದು, ಧರ್ಮ ಸಮನ್ವಯದ ವಿಷಯದಲ್ಲಿ ಅತ್ಯಂತ ವಿಶೇಷತೆಯನ್ನು ಪಡೆದಿದೆ. ಶ್ರವಣಬೆಳಗೊಳದ ಚಂದ್ರಗಿರಿ ಅಥವಾ ಚಿಕ್ಕಬೆಟ್ಟವು ದೊಡ್ಡ ಬೆಟ್ಟಕ್ಕಿಂತ ಪ್ರಾಚೀನ ಶಾಸನಗಳು ಮತ್ತು ಸ್ಮಾರಕಗಳನ್ನು ಹೊಂದಿದೆ.  ಇಂದ್ರಗಿರಿ ಅಥವಾ ದೊಡ್ಡಬೆಟ್ಟವು ಗೊಮ್ಮಟೇಶ್ವರನ ಪ್ರತಿಷ್ಠಾಪನೆಯ ನಂತರ ಮಹತ್ವಕ್ಕೆ ಬಂದಿತು. ಎರಡೂ ಬೆಟ್ಟಗಳ ಮಧ್ಯೆ ಇರುವ ಬೆಳ್ಗೊಳ ಅಥವಾ ಶ್ರವಣಬೆಳಗೊಳ ಊರಿನಲ್ಲಿ ಬೃಹತ್ ಜೈನಬಸದಿಗಳು ಮತ್ತು ಜೈನಮಠದ ಸ್ಥಾಪನೆಯಾದ ನಂತರ ಊರು ಬೆಳೆದು ಪ್ರವರ್ಧಮಾನಕ್ಕೆ ಬಂದಿತು.



ಶ್ರವಣಬೆಳಗೊಳ ಬೆಟ್ಟಗಳ ಆಸುಪಾಸಿನಲ್ಲಿರುವ ಊರುಗಳಲ್ಲಿ ಬಸದಿಯ ನಿರ್ಮಾಣದಂತಹ ಚಟುವಟಿಕೆಗಳು ನಡೆದು, ಅವೂ ಜೈನಕೇಂದ್ರಗಳಾಗಿ ಬೆಳೆದವು. ಶ್ರವಣಬೆಳಗೊಳ ಚಿಕ್ಕಬೆಟ್ಟದಲ್ಲಿ 271 ಶಾಸನಗಳು, ದೊಡ್ಡ ಬೆಟ್ಟದಲ್ಲಿ 172 ಶಾಸನಗಳು, ಶ್ರವಣಬೆಳಗೊಳ ಊರಿನಲ್ಲಿ 80 ಶಾಸನಗಳು, ಶ್ರವಣಬೆಳಗೊಳದ ಸುತ್ತಮುತ್ತ ಇರುವ ಗ್ರಾಮಗಳಲ್ಲಿಯೂ ಸುಮಾರು 80 ಶಾಸನಗಳೂ ಇದ್ದು. ಕ್ರಿ.ಶ. 6ನೇ ಶತಮಾನದಿಂದ 19ನೇ ಶತಮಾನದವರೆಗಿನ ಕಾಲಮಾನಕ್ಕೆ ಸೇರಿದವುಗಳಾಗಿವೆ. ಚಿಕ್ಕಬೆಟ್ಟದ ಶಾಸನಗಳು 6ನೇ ಶತಮಾನದಿಂದ ಆರಂಭವಾದರೆ, ದೊಡ್ಡ ಬೆಟ್ಟದ ಶಾಸನಗಳು 10ನೇ ಶತಮಾನದಿಂದ ಆರಂಭವಾಗುತ್ತವೆ.


**ಭದ್ರಬಾಹು ಚಂದ್ರಗುಪ್ತರು :** ಉತ್ತರ ಭಾರತದಿಂದ ಅನೇಕ ಜೈನಯತಿಗಳೊಡನೆ ದಕ್ಷಿಣಕ್ಕೆ ಬಂದ ಶ್ರುತಕೇವಲಿ ಭದ್ರಬಾಹು ಮತ್ತು ಮೌರ್ಯ ಸಾಮ್ರಾಟ ಚಂದ್ರಗುಪ್ತ (ಕ್ರಿ.ಪೂ.324–299) ಇವರುಗಳು, ಕಟವಪ್ರ ಶೈಲದ ಅಂದರೆ ಚಿಕ್ಕಬೆಟ್ಟದ ಗುಹೆಯಲ್ಲಿ ಬೀಡುಬಿಟ್ಟು ಸಲ್ಲೇಖನ ವಿಧಿಯಿಂದ ಸಮಾಧಿ ಮರಣವನ್ನು ಹೊಂದಿದರು ಎಂಬುದು ಜೈನಸಾಹಿತ್ಯದ ಸಾಂಪ್ರದಾಯಿಕ ಕಥೆಗಳಿಂದ ಮತ್ತು ಚಿಕ್ಕಬೆಟ್ಟದಲ್ಲಿರುವ ಚಂದ್ರಗುಪ್ತ ಬಸದಿಯ ಶಿಲ್ಪಗಳಿಂದ ಹಾಗೂ ಈ ಬಸದಿಯ ಮುಂದೆ ಬಂಡೆಯ ಮೇಲಿರುವ ಸು. ಕ್ರಿ.ಶ.7ನೇ ಶತಮಾನದ ಶಾಸನದಿಂದ ತಿಳಿದುಬರುತ್ತದೆ. ಇವರು ವಾಸವಾಗಿದ್ದ ಗುಹೆಯನ್ನು ಗುರುತಿಸಿ ಸಂರಕ್ಷಿಸಿದ್ದು, ಗುಹೆಯ ಬಂಡೆಯ ಮೇಲೆ ಕೆತ್ತಲಾಗಿರುವ ಭದ್ರಬಾಹುವಿನ ಪಾದಗಳ ಮುಂದೆ ಇರುವ ಕ್ರಿ.ಶ.11ನೇ ಶತಮಾನದ ಶಾಸನದಲ್ಲಿ ಜಿನಚಂದ್ರನೆಂಬುವನು ಭದ್ರಬಾಹುವಿನ ಪಾದಗಳಿಗೆ ವಂದಿಸಿದನೆಂದು ಹೇಳಿದೆ.

**ಗೊಮ್ಮಟೇಶ್ವರನ ಸ್ಥಾಪನೆ–ಮಹಾಮಸ್ತಕಾಭಿಷೇಕದ ಉಲ್ಲೇಖಗಳು**

ಗಂಗರ ಇಮ್ಮಡಿ ಮಾರಸಿಂಹ ಮತ್ತು ನಾಲ್ಕನೆಯ ರಾಚಮಲ್ಲ ಎಂಬ ಅರಸರಿಗೆ ಮಂತ್ರಿಯಾಗಿದ್ದ ಚಾಮುಂಡರಾಯನು, ದೊಡ್ಡ ಬೆಟ್ಟದ ಮೇಲೆ ಗೊಮ್ಮಟೇಶ್ವರನ ಬೃಹತ್ ಮೂರ್ತಿಯನ್ನು ಸ್ಥಾಪಿಸಿದನು. ಚಾಮುಂಡರಾಯ ಪುರಾಣವೆಂಬ ಜೈನಧರ್ಮದ ಶಲಾಕಾ ಪುರುಷರ ಚರಿತ್ರೆಗೆ ಸಂಬಂಧಿಸಿದ ಕೃತಿಯನ್ನೂ ರಚಿಸಿದನು. ಚಾಮುಂಡರಾಯ ಪುರಾಣದಲ್ಲೂ ಗೊಮ್ಮಟೇಶ್ವರ ಸ್ಥಾಪನೆಯ ಉಲ್ಲೇಖವಿಲ್ಲ. ಬದಲಿಗೆ ಗೊಮ್ಮಟೇಶ್ವರನ ಪದತಲದಲ್ಲಿರುವ ಹತ್ತನೆಯ ಶತಮಾನದ ಶಾಸನಗಳು "ಚಾಮುಂಡ ರಾಜಂ ಮಾಡಿಸಿದಂ" ಎಂದು ಹೇಳಿವೆ. ಗೊಮ್ಮಟೇಶ್ವರ ಮೂರ್ತಿಯ ಆವರಣದ ಮಹಾದ್ವಾರದ ಇಕ್ಕೆಲಗಳಲ್ಲಿ ಬೊಪ್ಪಣ್ಣ ಪಂಡಿತನೆಂಬ ಕವಿಯು ರಚಿಸಿದ ಕ್ರಿ.ಶ. 12ನೇ ಶತಮಾನದ ಅಂದರೆ ಸು. ಕ್ರಿ.ಶ. 1180ರ "ಗೊಮ್ಮಟ ಜಿನೇಂದ್ರ ಸ್ತವ ಶಾಸನ" ದಲ್ಲಿ ಗೊಮ್ಮಟೇಶ್ವರನನ್ನು ಗಂಗರ ನಾಲ್ಕನೆಯ ರಾಚಮಲ್ಲನ ಮಂತ್ರಿ ಚಾಮುಂಡರಾಯನು ಮಾಡಿಸಿದನೆಂದು ಸ್ಪಷ್ಟವಾಗಿ ಹೇಳಿದೆ. ನಾಲ್ಕನೇ ರಾಚಮಲ್ಲನ ಕಾಲ ಕ್ರಿ.ಶ.975 ರಿಂದ 986, ಗೊಮ್ಮಟನ ಪ್ರತಿಷ್ಠೆಯು ಕ್ರಿ.ಶ.981–82ರ ಅವಧಿಯಲ್ಲಿ ಆಗಿರಬಹುದೆಂದು ಊಹಿಸಬಹುದು. ಗೊಮ್ಮಟೇಶ್ವರನ ಸ್ಥಾಪನೆಯ ಕಾಲ ಕ್ರಿ.ಶ.982 ಎಂದು ನಂಬಲಾಗಿದೆ.

ಗೊಮ್ಮಟೇಶ್ವರ ಪ್ರತಿಷ್ಠಾಪನೆಯ ವಿಚಾರ ಕಲ್ಯಾಣ ಚಾಲುಕ್ಯರ ಚಕ್ರವರ್ತಿ ತೈಲಪನ ಮಗ ಸತ್ಯಾಶ್ರಯನ ಕಾಲದಲ್ಲಿ ಲಕ್ಕುಂಡಿಯಲ್ಲಿದ್ದ ಅಂದರೆ ಇಂದಿನ ಲಕ್ಷ್ಮೇಶ್ವರದಲ್ಲಿದ್ದ ಜಿನಧರ್ಮಪತಾಕೆ ಅತ್ತಿಮಬ್ಬೆಗೆ ತಿಳಿಯಿತೆಂದು, ಆಗ ಅತ್ತಿಮಬ್ಬೆಯು ಗೊಮ್ಮಟೇಶ್ವರನನ್ನು ನೋಡುವವರೆಗೆ ಅನ್ನಾಹಾರಗಳನ್ನು ಸೇವಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ, ದೂರದಿಂದ ಪಥಶ್ರಮವನ್ನು ಲೆಕ್ಕಿಸದೆ ನಡೆದುಕೊಂಡು ಬಂದು ನೋಡಿದಳೆಂದು, ಅವಳು ಗೊಮ್ಮಟೇಶ್ವರನ ದರ್ಶನ ಮಾಡಿದ ತಕ್ಷಣ ಅಕಾಲ ವೃಷ್ಟಿಯಾಯಿತೆಂದು ರನ್ನ ಮಹಾಕವಿಯು ಅಜಿತಪುರಾಣದಲ್ಲಿ ವರ್ಣಿಸಿದ್ದಾನೆ. ಅಜಿತಪುರಾಣದ ರಚನೆಯ ಕಾಲ ಶಕವರ್ಷ 915ರ ವಿಜಯ ನಾಮ ಸಂವತ್ಸರ, ಅಂದರೆ ಕ್ರಿ.ಶ.993. ಈ ವೇಳೆಗೆ ಗೊಮ್ಮಟೇಶ್ವರನ ಸ್ಥಾಪನೆ ಆಗಿತ್ತು. ಮಸ್ತಕಾಭಿಷೇಕವು 12 ವರ್ಷಗಳಿಗೊಮ್ಮೆ ನಡೆಯುವ ಮಹೋತ್ಸವ. 982ರಲ್ಲಿ ಗೊಮ್ಮಟೇಶ್ವರ ಪ್ರತಿಷ್ಠೆಯಾಗಿ 12 ವರ್ಷದ ಬಳಿಕ 993ರಲ್ಲಿ ಮಸ್ತಕಾಭಿಷೇಕ ನಡೆದಿರಬಹುದು. ಬಹುಶಃ ಅತ್ತಿಮಬ್ಬೆಯು ಮಹಾಮಸ್ತಕಾಭಿಷೇಕಕ್ಕೇ ಬಂದಿರಬಹುದು ಎಂದು ಊಹಿಸಬಹುದು.


ಪಿರಿಯಾಪಟ್ಟಣದ ದೊಡ್ಡಯ್ಯ ಕವಿಯು ಕ್ರಿ.ಶ.1550 ರಲ್ಲಿ ತಾನು ರಚಿಸಿರುವ "ಬಾಹುಬಲಿ ಶತಕಂ" ಎಂಬ ಸಂಸ್ಕೃತ ಕಾವ್ಯದಲ್ಲಿ ಗೊಮ್ಮಟೇಶ್ವರನ ಪ್ರತಿಷ್ಠಾಪನೆಯು ಕಲ್ಕಿ ವರ್ಷ 600ರ ವಿಭವ ಸಂವತ್ಸರ ಚೈತ್ರ ಶುದ್ಧ ಪಂಚಮಿಯಂದು ಭಾನುವಾರ ನಡೆಯಿತು ಎಂದು ಹೇಳಿದ್ದಾನೆ. ಈ ಕಾಲವು ಕ್ರಿ.ಶ.981 ಮಾರ್ಚ್ 13ಕ್ಕೆ ಸರಿ ಹೊಂದುತ್ತದೆಂದು ಗೋವಿಂದಪೈ ಅವರು ಹೇಳಿದ್ದಾರೆ. ಕ್ರಿ.ಶ. 1780 ರಲ್ಲಿ ಅನಂತ ಕವಿಯು ರಚಿಸಿರುವ "ಬೆಳ್ಗೊಳದ ಗೊಮ್ಮಟೇಶ್ವರ ಚರಿತ್ರೆ" ಎಂಬ ಕಾವ್ಯದಲ್ಲಿ ದೊಡ್ಡಯ್ಯ ಕವಿಯು ಹೇಳಿರುವ ತಾರೀಖನ್ನೇ ಹೇಳಲಾಗಿದೆ. ಗೊಮ್ಮಟೇಶ್ವರನಿಗೆ ಭವ್ಯವಾದ ರೀತಿಯಲ್ಲಿ ನಡೆದ ಮಹಾಮಸ್ತಕಾಭಿಷೇಕದ ವರ್ಣನೆಯನ್ನೂ ಅನಂತ ಕವಿಯು ಮಾಡಿದ್ದಾನೆ. ಸಿದ್ಧರ ಬಸದಿಯ ಕಂಬದ ಮೇಲಿರುವ ಕ್ರಿ.ಶ.1398ರ ಶ್ರವಣಬೆಳಗೊಳದ ಶಾಸನದಲ್ಲಿ ಶ್ರವಣಬೆಳಗೊಳದ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು(ಪಂಡಿತ) ತಮ್ಮ ಕಾಲಾವಧಿಯಲ್ಲಿ ಏಳು ಮಹಾಮಸ್ತಕಾಭಿಷೇಕಗಳನ್ನು ನಡೆಸಿದರೆಂದು ಉಲ್ಲೇಖಿಸಲಾಗಿದೆ. ಕ್ರಿ.ಶ. 1615ರಲ್ಲಿ ರಚಿತವಾದ ಪಂಚಬಾಣಕವಿಯ "ಭುಜಬಲಿ ಚರಿತೆ" ಯಲ್ಲಿ ಗುರುಶಾಂತವರ್ಣಿಗಳು ಮಹಾಮಸ್ತಕಾಭಿಷೇಕವನ್ನು ನಡೆಸಿದರೆಂದು ಹೇಳಿದೆ. ಮಸ್ತಕಾಭಿಷೇಕಕ್ಕಾಗಿ 90 ಕಂಬಗಳ ಅಟ್ಟಣಿಗೆಯನ್ನು ನಿರ್ಮಿಸಿದ್ದರೆಂದು ಅದರಲ್ಲಿ ಹೇಳಿದೆ. ಚಾವುಂಡರಾಯನು ಗೊಮ್ಮಟೇಶ್ವರನನ್ನು ಸ್ಥಾಪಿಸಿದುದು, ಮಹಾಮಸ್ತಕಾಭಿಷೇಕವನ್ನು ನಡೆಸಿದ್ದು, ಗುಳ್ಳಕಾಯಿ ಅಜ್ಜಿಯ ಕಥೆ ಇವುಗಳು ಸವಿಸ್ತಾರವಾಗಿ ಭುಜಬಲಿ ಚರಿತೆಯಲ್ಲಿ ಹೇಳಲ್ಪಟ್ಟಿದೆ.



ಮೈಸೂರು ಅರಸರಾದ ಇಮ್ಮಡಿ ರಾಜ ಒಡೆಯರು (1637–38), ಚಿಕದೇವರಾಜ ಒಡೆಯರು (1673–1704), ದೊಡ್ಡ ಕೃಷ್ಣರಾಜ ಒಡೆಯರು (1714–32) ಗೊಮ್ಮಟೇಶ್ವರನಿಗೆ ಮಹಾಮಸ್ತಕಾಭಿಷೇಕಗಳನ್ನು ನಡೆಸಿದರೆಂದು ತಿಳಿದುಬರುತ್ತದೆ. 1678ರಲ್ಲಿ ಚಿಕ್ಕದೇವರಾಜ ಒಡೆಯರ ಮಂತ್ರಿಯಾಗಿದ್ದ ಜೈನಧರ್ಮೀಯನಾದ ವಿಶಾಲಾಕ್ಷ ಪಂಡಿತನು ಮಹಾಮಸ್ತಕಾಭಿಷೇಕವನ್ನು ಮಾಡಿಸಿದನೆಂದು ಕ್ರಿ.ಶ. 1780ರಲ್ಲಿ ರಚಿತವಾದ ಅನಂತ ಕವಿಯ ಬೆಳ್ಗೊಳದ ಗೊಮ್ಮಟೇಶ್ವರ ಚರಿತ್ರೆಯಲ್ಲಿ ಹೇಳಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ.1827ರಲ್ಲಿ ಮಹಾಮಸ್ತಕಾಭಿಷೇಕವನ್ನು ನಡೆಸಿ ದತ್ತಿಗಳನ್ನು ನೀಡಿದರೆಂದು ಶಾಸನದಿಂದ ತಿಳಿದುಬರುತ್ತದೆ. ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಗಳು 30,000 ರೂ.ಗಳನ್ನು ಖರ್ಚು ಮಾಡಿ 1887 ಮಾರ್ಚ್ 14 ರಂದು ಮಹಾಮಸ್ತಕಾಭಿಷೇಕವನ್ನು ಮಾಡಿಸಿದರೆಂದು ಇಂಡಿಯನ್ ಆಂಟಿಕ್ವೆರಿ ಸಂಶೋಧನಾ ಪತ್ರಿಕೆಯಲ್ಲಿ ಹೇಳಿದೆ. 1909ರಲ್ಲಿ ಶಾಂತಿರಾಜ ಸ್ವಾಮಿಗಳು ಮಹಾಮಸ್ತಕಾಭಿಷೇಕದ ನೇತೃತ್ವ ವಹಿಸಿದ್ದರು. 1925, 1940, 1953 ರಲ್ಲಿ ಮೈಸೂರು ರಾಜರ ಆಶ್ರಯದಲ್ಲಿ ಮಹಾಮಸ್ತಕಾಭಿಷೇಕಗಳು ನಡೆದುದರ ಉಲ್ಲೇಖವಿದೆ. 1982 ಮಾರ್ಚ್ ತಿಂಗಳಲ್ಲಿ ಗೊಮ್ಮಟೇಶ್ವರ ಸಂಸ್ಥಾಪನೆಯ ಸಹಸ್ರ ಮಾನೋತ್ಸವ ಮತ್ತು ಮಹಾಮಸ್ತಕಾಭಿಷೇಕಗಳು ವಿಜೃಂಭಣೆಯಿಂದ ಜರುಗಿದವು. ಈಗ ಮುಂದಿನ ವರ್ಷ ಅಂದರೆ 2018 ಫೆಬ್ರವರಿ 7 ರಿಂದ 26 ರವರೆಗೆ ಗೊಮ್ಮಟೇಶ್ವರನಿಗೆ ಮಹಾಮಸ್ತಕಾಭಿಷೇಕ ನಡೆಯಲಿದೆ.

**ಆಚಿಯಕ್ಕನು ನಿರ್ಮಿಸಿದ ಅಕ್ಕನ ಬಸದಿ– ಧರ್ಮ ಸಮನ್ವಯದ ಉದಾಹರಣೆ**

ಶ್ರವಣಬೆಳಗೊಳದ ಊರೊಳಗೆ ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ಅಕ್ಕನ ಬಸದಿ ಇದೆ. ಶ್ರವಣಬೆಳಗೊಳದಲ್ಲಿ ಸಂಪೂರ್ಣವಾಗಿ ಹೊಯ್ಸಳ ಶೈಲಿಯಲ್ಲೇ ನಿರ್ಮಿತವಾಗಿರುವ ಬಸದಿ ಎಂದರೆ ಅಕ್ಕನ ಬಸದಿಯೊಂದೇ. ಶಾಂತಲೆಯು ನಿರ್ಮಿಸಿದ ಚಿಕ್ಕಬೆಟ್ಟದ ಸವತಿ ಗಂಧವಾರಣ ಬಸದಿಯೂ ಹೊಯ್ಸಳ ಶೈಲಿಯಲ್ಲಿ ಇಲ್ಲ. ಅಕ್ಕನ ಬಸದಿಯು ಗರ್ಭಗೃಹ, ಸುಖನಾಸಿ, ನವರಂಗ, ಮುಖ ಮಂಟಪಗಳಿಂದ ಕೂಡಿದೆ. ಬಸದಿಯಲ್ಲಿ ಐದು ಅಡಿ ಎತ್ತರದ ನಿಂತಿರುವ ಪಾರ್ಶ್ವನಾಥನ ವಿಗ್ರಹವಿದೆ. ಈ ವಿಗ್ರಹದ ತಲೆಯ ಮೇಲೆ ಏಳು ಹೆಡೆ ಸರ್ಪವಿದೆ. ಸುಖನಾಸಿಯಲ್ಲಿ ಧರಣೇಂದ್ರ ಮತ್ತು



ಪದ್ಮಾವತಿಯರ ಸುಂದರ ವಿಗ್ರಹಗಳಿವೆ. ನವರಂಗದಲ್ಲಿ ನಾಲ್ಕು ಸ್ಥಂಭಗಳು, ಮೇಲ್ಛಾವಣಿಯಲ್ಲಿ ಒಂಭತ್ತು ಭುವನೇಶ್ವರಿಗಳೂ ಇವೆ.

ಈ ಬಸದಿಯನ್ನು ವೀರಬಲ್ಲಾಳನ ಬಳಿ ಸಂಧಿ ವಿಗ್ರಹಿ ಮತ್ತು ಮಹಾ ಪ್ರಧಾನ ಮಂತ್ರಿಯಾಗಿದ್ದ ಸ್ಮಾರ್ತಭಾಗವತ ಪಂಥದ ಚಂದ್ರಮೌಳಿ ಎಂಬುವವನ ಪತ್ನಿಯಾದ ಜೈನಧರ್ಮೀಯಳಾದ ಆಚಿಯಕ್ಕನು ಕ್ರಿ.ಶ. 1181 ಡಿಸೆಂಬರ್ 25 ರಂದು ಪ್ರತಿಷ್ಠಾಪಿಸಿದಳು. ಚಂದ್ರಮೌಳಿಯ ಕೋರಿಕೆಯಂತೆ ರಾಜನಾದ ವೀರಬಲ್ಲಾಳನು ಈ ಬಸದಿಗೆ ಬೊಮ್ಮೆಯನಹಳ್ಳಿಯನ್ನು ದತ್ತಿ ಹಾಕಿಕೊಟ್ಟನು. ಈ ಬಸದಿಯನ್ನು ಮತ್ತು ದತ್ತಿಯಾಗಿ ಬಂದ ಬೊಮ್ಮೆಯನಹಳ್ಳಿಯನ್ನು ಚಂದ್ರಮೌಳಿ ಮತ್ತು ಆಚಿಯಕ್ಕ ಇಬ್ಬರೂ ಅಧ್ಯಾತ್ಮಿ ಬಾಲಚಂದ್ರ ಎಂಬ ಜೈನಮುನಿಗೆ ಧಾರೆಯೆರೆದು ಕೊಟ್ಟರು. ಸ್ಮಾರ್ತಭಾಗವತ ಪಂಥಕ್ಕೆ ಸೇರಿದ ರುದ್ರಭಟ್ಟನೆಂಬ ಕವಿಯು ಮಂತ್ರಿ ಚಂದ್ರಮೌಳಿ ಮತ್ತು ಆಚಿಯಕ್ಕ ಇವರ ಬಳಿ ಆಶ್ರಿತನಾಗಿದ್ದನು. ಚಂದ್ರಮೌಳಿಯು ರುದ್ರಭಟ್ಟನಿಂದ ವಿಷ್ಣುಪುರಾಣದ ಆಧಾರಿತ ಜಗನ್ನಾಥ ವಿಜಯವೆಂಬ ಚಂಪೂಕಾವ್ಯವನ್ನು ಬರೆಸಿದನು. ರುದ್ರಭಟ್ಟನು ತನ್ನ ಕಾವ್ಯದಲ್ಲಿ ಚಂದ್ರಮೌಳಿ ಮತ್ತು ಆಚಿಯಕ್ಕ ಇವರುಗಳನ್ನು ಹಾಡಿ ಹೊಗಳಿದ್ದಾನೆ. ಸ್ಮಾರ್ತ ಬ್ರಾಹ್ಮಣ ಅಧಿಕಾರಿಯ ಪತ್ನಿ ಜೈನ ಧರ್ಮೀಯಳು. ಬಸದಿಯನ್ನು ನಿರ್ಮಿಸುತ್ತಾಳೆ. ಶೈವಧರ್ಮೀಯನಾದ ರಾಜ ವೀರ ಬಲ್ಲಾಳನು ಈ ಬಸದಿಗೆ ದತ್ತಿ ಬಿಡುತ್ತಾನೆ. ಇದೇ ಅಧಿಕಾರಿಯು ಸ್ಮಾರ್ತಬ್ರಾಹ್ಮಣ ಕವಿಯಿಂದ ವೈಷ್ಣವಧರ್ಮದ ಕಾವ್ಯವನ್ನು ಬರೆಸುತ್ತಾನೆ. ಇದು ಅಂದಿನ ಕಾಲದ ಧರ್ಮಸಮನ್ವಯಕ್ಕೊಂದು ಉತ್ತಮ ಉದಾಹರಣೆ.

### ಬುಕ್ಕರಾಯನ ಶಾಸನ ಮತ್ತು ಬಸದಿಗಳ ರಕ್ಷಣೆ–ಜೈನ ಧರ್ಮದ ರಕ್ಷಣೆ

ಶ್ರವಣಬೆಳಗೊಳ ಊರ ಮಧ್ಯದಲ್ಲಿ ಭಂಡಾರ ಬಸದಿ ಎಂಬ ಬೃಹತ್ ಬಸದಿ ಇದೆ. ಹೊಯ್ಸಳರ ಒಂದನೇ ನರಸಿಂಹನ ಮಂತ್ರಿಯೂ, ಚಮೂಪನೂ ಮತ್ತು ಭಂಡಾರಿಯೂ ಆಗಿದ್ದ ಹುಳ್ಳನು ಕ್ರಿ.ಶ.1171ರಲ್ಲಿ ಈ ಬಸದಿಯನ್ನು ನಿರ್ಮಿಸಿದನು. ಅದಕ್ಕೆ ಈ ಬಸದಿಗೆ ಭಂಡಾರಿಯಯ್ಯನ ಬಸದಿ ಅಥವಾ ಭಂಡಾರ ಬಸದಿ ಎಂಬ ಹೆಸರು ಬಂದಿದೆ. ಈ ಬಸದಿಯ ಆವರಣದಲ್ಲಿ ಪೂರ್ವದಿಕ್ಕಿನಲ್ಲಿ ವಿಜಯನಗರದ ಅರಸು ಒಂದನೆಯ ಬುಕ್ಕರಾಯನು ಹಾಕಿಸಿರುವ ಕ್ರಿ.ಶ. 1368 ಆಗಸ್ಟ್ 24ರ ಶಿಲಾ ಶಾಸನವು ಅಂದಿನ ಕಾಲದಲ್ಲಿ ನಡೆದ ಧರ್ಮ ಸಂರಕ್ಷಣೆ, ಧರ್ಮ ಸಮನ್ವಯತೆ ಮತ್ತು ಸಹಬಾಳ್ವೆಗೆ ಅತ್ಯಂತ ಉಜ್ವಲವಾದ ಉದಾಹರಣೆಯಾಗಿದೆ.

ಒಂದನೆಯ ಬುಕ್ಕರಾಯನು ರಾಜ್ಯವಾಳುತ್ತಿದ್ದಾಗ (1356–1377) ಜೈನರಿಗೂ, ಭಕ್ತರಿಗೂ(ಶ್ರೀವೈಷ್ಣವರಿಗೂ) ಸಂವಾಜ (ವ್ಯಾಜ್ಯಗಳು ಅಥವಾ ಕಾದಾಟಗಳು) ಉಂಟಾಗುತ್ತವೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಧಾರ್ಮಿಕವಾಗಿ, ಸಾಮಾಜಿಕವಾಗಿ ಪ್ರಬಲರಾಗಿದ್ದ ಶ್ರೀ ವೈಷ್ಣವರು, ದುರ್ಬಲರಾಗಿದ್ದ ಜೈನ ಧರ್ಮೀಯರ ಮೇಲೆ, ಜೈನ ಬಸದಿಗಳ ಮೇಲೆ, ಮೇಲೆ ಅನ್ಯಾಯವನ್ನು ಮಾಡುತ್ತಿದ್ದರೆಂದು ಶಾಸನದಲ್ಲಿ ಹೇಳಿದೆ. ಅಂದರೆ ಬಹುಶಃ ಬಸದಿಗಳನ್ನು ಒಡೆಯುವುದು, ಜೈನಧರ್ಮದ ಅನುಯಾಯಿಗಳನ್ನು ಅಲ್ಲಿಂದ ಓಡಿಸುವುದು ಮುಂತಾದ ಕೃತ್ಯಗಳಲ್ಲಿ ತೊಡಗಿದ್ದರೆಂದು ತೋರುತ್ತದೆ.

ಜೈನಧರ್ಮದ ನೆಲೆಗಳಾಗಿದ್ದ, ಆನೆಯಗೊಂದಿ, ಹೊಸಪಟ್ಟಣ, ಪೆನುಗೊಂಡೆ, ಕಲ್ಲೇಹ ಪಟ್ಟಣ(ಮಾಗಡಿಯ ಬಳಿಯ ಕಲ್ಯ) ಮೊದಲಾದ ಕಡೆಗಳಲ್ಲಿದ್ದ ಭವ್ಯ ಜನರು(ಜೈನಧರ್ಮೀಯರು) ಈ ಅನ್ಯಾಯದ ಬಗ್ಗೆ ಬುಕ್ಕರಾಜನಿಗೆ ದೂರು ಕೊಡುತ್ತಾರೆ. ಆಗ ಬುಕ್ಕರಾಯನು, ಮುಖ್ಯವಾಗಿ ತಿರುಮಲೆ (ಮಾಗಡಿಯ ಬಳಿಯ ತಿರುಮಲೆ), ತಿರುನಾರಾಯಣಪುರ (ಮೇಲುಕೋಟೆ)ಮೊದಲಾದ ಕಡೆಗಳಲ್ಲಿದ್ದ ತಿರುಮಲೆ ತಾತಾಚಾರ್ಯನೇ ಮೊದಲಾದ ಶ್ರೀ ವೈಷ್ಣವ ಧರ್ಮದ ಸಕಲ ಆಚಾರ್ಯರನ್ನು, ಶೈವ ಮೊದಲಾದ ಎಲ್ಲ ಧರ್ಮದವರನ್ನು, ಸಕಲ ಸಾತ್ವಿಕರು, ಮೋಷ್ಟಿಕರು, ತಿರುಪಣಿ, ತಿರುವಿಡಿ, ತಂಣ್ಣೀರು ಮೊದಲಾದ ನಾಲ್ವತ್ತೆಂಟು ಜನಗಳನ್ನು, ಸಾವಂತಬೋವ ಒಕ್ಕಲುಗಳು, ತಿರಿಕುಲ, ಜಾಂಬವ ಕುಲ ಒಳಗಾದ ಹದಿನೆಂಟು ನಾಡ ಶ್ರೀ ವೈಷ್ಣವರನ್ನು ತನ್ನ ಎದುರಿಗೆ ಕರೆಸಿ, ಜೈನರ ಕೈಯ್ಯನ್ನು ಹಿಡಿದು, ವೈಷ್ಣವರ ಕೈಗೆ ಕೊಟ್ಟು, ಅಂದರೆ ಶ್ರೀವೈಷ್ಣವ ಮತ್ತು ಜೈನ ಎರಡೂ ಧರ್ಮದ ಜನಗಳ ಕೈಮೇಲೆ ಕೈಯನ್ನು ಇಡಿಸಿ, ವೈಷ್ಣವ ದರ್ಶನಕ್ಕೂ, ಜೈನದರ್ಶನಕ್ಕೂ ಯಾವುದೇ ಭೇದವಿಲ್ಲವೆಂದು ಹೇಳಿ, ಜೈನ ಬಸದಿಗಳಿಗೆ ಪೂರ್ವ ಮರ್ಯಾದೆಯಂತೆ ಪಂಚಮಹಾವಾದ್ಯಗಳ ಮರ್ಯಾದೆ ಸಲ್ಲಬೇಕೆಂದು, ವೈಷ್ಣವರ ದೆಸೆಯಿಂದ ಜೈನಧರ್ಮಕ್ಕೆ ಹಾನಿವೃದ್ಧಿಯಾದರೆ, ಅದು ವೈಷ್ಣವಧರ್ಮಕ್ಕೆ ಆದ ಹಾನಿವೃದ್ಧಿಗೆ ಸಮ, ವೈಷ್ಣವದರ್ಶನಕ್ಕೂ, ಜೈನದರ್ಶನಕ್ಕೂ ಭೇದವಿಲ್ಲ, ವೈಷ್ಣವಧರ್ಮದವರು, ಜೈನಧರ್ಮವನ್ನು ರಕ್ಷಿಸಿಕೊಂಡು ಬರುವುದು, ಜೈನ ಬಸದಿಗಳಿಗೆ ಶ್ರೀ ವೈಷ್ಣವ ಅಂಗರಕ್ಷಣೆ ನೀಡುವುದು ಎಂದು ಆದೇಶ ಮಾಡಿದನು. ಈ ಅಂಗರಕ್ಷೆಗೆ ಜೈನರು ವರ್ಷಕ್ಕೆ ಮನೆಗೆ ಒಂದು ಹಣವನ್ನು ನೀಡುವಂತೆಯೂ ಕಟ್ಟು ಮಾಡಿದನು. ಈ ಕಟ್ಟಳೆಯನ್ನು ಮೀರುವವನು ರಾಜದ್ರೋಹಿ, ಸಂಘ ಸಮುದಾಯ ದ್ರೋಹಿ ಎಂದು ಘೋಷಿಸಿದನು. ಇದರಿಂದ ಬಸದಿಗಳ ನಾಶ, ಜೈನರ ಮೇಲಿನ ಹಲ್ಲೆಗಳು ನಿಂತು ಹೋಗಿ ಸಾಮರಸ್ಯ ಉಂಟಾಯಿತು. ಶ್ರವಣಬೆಳಗೊಳದಲ್ಲಿದ್ದ ಎಲ್ಲ ಜೈನ ಬಸದಿಗಳೂ ಸುಸ್ಥಿತಿಯಲ್ಲಿ ಉಳಿದುಕೊಂಡು ಬರಲು ಇದೂ ಕಾರಣವೆಂದು ಹೇಳಬಹುದು. ಬುಕ್ಕರಾಯನ ಕಾಲದಲ್ಲಿ ಮತ್ತೆ ಜೈನ ಧರ್ಮದ ಸಾಹಿತ್ಯವೂ ರಚನೆಯಾಗತೊಡಗಿತು. ಈ ಶಾಸನವು ಮಾಗಡಿ ತಾಲ್ಲೂಕಿನ ಕಲ್ಲೇಹದಲ್ಲೂ ಇದೆ. ಪೆನುಗೊಂಡೆ ಮೊದಲಾದ ಕಡೆ ಇದ್ದಿರಬಹುದು ಆದರೆ ಸಿಕ್ಕಿಲ್ಲ. ಈ ಘಟನೆಯು ನಡೆದಿರುವುದು ಶ್ರವಣಬೆಳಗೊಳದಲ್ಲೇ ಎಂದು ಹೇಳಬಹುದು.



# ಬೆಳಕಿನ ಮಹಾಮಾರ್ಗ ಬುದ್ಧ ಪೂರ್ಣಿಮೆ

ಬನ್ನೂರು ಕೆ. ರಾಜು

**ಬುದ್ಧ ಆಗಲೂ ಇದ್ದ**
**ಈಗಲೂ ಇದ್ದಾನೆ;**
**ಕರುಣಾಳುಗಳ ಎದೆಗಡಲಲ್ಲಿ**
**ಕಾರುಣ್ಯದ ನದಿಯಾಗಿ**
**ತಣ್ಣಗೆ ಹರಿಯುತ್ತಿದ್ದಾನೆ**
**ಅಹಿಂಸೆಯ ಹೂವರಳಿಸುವವರ**
**ಹೂ ಮನದಲ್ಲಿ**
**ದೇವ ಮಲ್ಲಿಗೆಯಾಗಿ ನಗುತ್ತಿದ್ದಾನೆ**

ಶಾಂತಿಯ ಕಡಲಾಗಿ, ಸಾಂತ್ವನದ ಮಡಿಲಾಗಿ ಜಗತ್ತಿನಗಾಡಾಂಧಕಾರ ಕಳೆವ ದಿವ್ಯಜ್ಯೋತಿಯಾಗಿ ಅವಿರ್ಭವಿಸಿದ ಮಹಾಬೆಳಕೇ ಭಗವಾನ್ ಬುದ್ಧ. ಬುದ್ಧ ಮೂಲತಃ ಮಾನವತಾವಾದಿ. ಸಮತಾವಾದಕ್ಕೆ ಮನ್ನಣೆಕೊಟ್ಟ ಮಹಾತ್ಮ. ಆದ್ದರಿಂದಲೇ ಇವತ್ತಿಗೂ ಬುದ್ಧನ ತತ್ವಾದರ್ಶಗಳು ಪ್ರಸ್ತುತ. ಇದನ್ನು ಪಾಲಿಸಿದರೆ ಪ್ರಪಂಚವೇ ಸುಕೃತ.

ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಭರತಖಂಡದಲ್ಲಿ ಜನ್ಮತಳೆದ ಬೌದ್ಧಧರ್ಮ ಇವತ್ತಿಗೂ ಜಗತ್ತಿನ ಪ್ರಮುಖ ಧರ್ಮಗಳಲ್ಲೊಂದಾಗಿದೆ. ಸರ್ವರಿಗೂ ಲೇಸನ್ನೇ ಬಯಸುವ ಬೌದ್ಧಧರ್ಮ ಲೋಕಪ್ರಿಯ. "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ಮಾನವಧರ್ಮವನ್ನು ಪ್ರತಿಪಾದಿಸುವ ಸಮಾಜವಾದದ ಬೆಳಕಿನ ಜೀವಧಾತು ಬೇರುಗಳು ಬೌದ್ಧಧರ್ಮದಲ್ಲುಂಟು. ಹಾಗಾಗಿ ಬೌದ್ಧಧರ್ಮ ಬಹು ಅಕರ್ಷಣೀಯ. ಇವರ ಪ್ರವರ್ತಕ ಬುದ್ಧದೇವನೂ ಅಷ್ಟೇ ಲೋಕಮಾನ್ಯ.

ಬುದ್ಧ ಪೂರ್ಣಿಮೆಯ ಮಹತ್ವ: ಬುದ್ಧ ಜನಿಸಿದ್ದು ಲುಂಬಿಣಿ ಎಂಬ ವನದ ಶಾಲವೃಕ್ಷದ ಕೆಳಗೆ. ಅಂದು ವೈಶಾಖ ಮಾಸದ ಶುದ್ಧ ಹುಣ್ಣಿಮೆ. ಆಶ್ಚರ್ಯವೆಂದರೆ ಅವನು ಬೋಧಿವೃಕ್ಷದ ಕೆಳಗೆ ಭವ್ಯತಪಸ್ಸು ಕೈಗೊಂಡು ದಿವ್ಯಜ್ಞಾನ ಪಡೆದದ್ದು ಸಹ ವೈಶಾಖ ಮಾಸದ ಶುದ್ಧ ಹುಣ್ಣಿಮೆಯಂದೇ. ಇನ್ನೂ ಆಶ್ಚರ್ಯವೆಂದರೆ ಅವನು ಮಹಾಪರಿನಿರ್ವಾಣ ಹೊಂದಿದ್ದು ಕೂಡ ಎರಡು ವೃಕ್ಷಗಳ ಕೆಳಗೆ. ಅಂದೂ ಸಹ ವೈಶಾಖಮಾಸದ ಶುದ್ಧ ಹುಣ್ಣಿಮೆ. ವೃಕ್ಷಕ್ಕೂ, ಹುಣ್ಣಿಮೆಗೂ, ಬುದ್ಧನಿಗೂ ಬಹಳ ನಂಟು. ಹೀಗೆ ಬುದ್ಧಜನನವಾದದ್ದು, ಬುದ್ಧಜ್ಞಾನಿಯಾದದ್ದು, ಬುದ್ಧ ಮಹಾಪರಿನಿರ್ವಾಣ ಹೊಂದಿದ್ದು ಈ ಮೂರು ಪ್ರಮುಖ ಘಟನೆಗಳೂ ಬುದ್ಧನಜೀವನದಲ್ಲಿ ವೈಶಾಖ ಮಾಸದ ಶುದ್ಧ ಹುಣ್ಣಿಮೆಯಂದೇ ಘಟಿಸಿರುವುದರಿಂದ ಅದು ಬುದ್ಧ ಪೂರ್ಣಿಮೆಯಾಗಿಯೇ ಪ್ರಸಿದ್ಧಿ. ಈ ದಿನ ಅತ್ಯಂತ ವಿಶಿಷ್ಟವಾದದ್ದು ಅದರಲ್ಲೂ ವಿಶೇಷವಾಗಿ ಬೌದ್ಧಧರ್ಮೀಯರಿಗೆ ಮಹಾ ಪವಿತ್ರದಿನ. ಇದನ್ನು ಬುದ್ಧಜಯಂತಿಯ ಮಹಾಹಬ್ಬವಾಗಿ ಬಹಳ ಶ್ರದ್ಧಾಭಕ್ತಿಗಳಿಂದ ಜಗತ್ತಿನಾದ್ಯಂತ ಆಚರಿಸಲಾಗುತ್ತದೆ.

ಆಚರಣೆಯ ವಿಧಾನ: ಬುದ್ಧ ಪೂರ್ಣಿಮೆಯ ಪೂಜ್ಯ ದಿನದಂದು ಬೌದ್ಧರು ಮುಂಜಾನೆ ಸ್ನಾನ ಮಾಡಿ ಶ್ವೇತವಸ್ತ್ರಧರಿಸಿ ಬೌದ್ಧ ವಿಹಾರದಲ್ಲಿ ಸಂಗಮಗೊಳ್ಳುತ್ತಾರೆ. ಅಲ್ಲಿ ಬುದ್ಧನ ಬದುಕು, ಬುದ್ಧೋಪದೇಶ, ಬುದ್ಧತತ್ವಾದರ್ಶಗಳೆಲ್ಲದರ ಚಿಂತನ-ಮಂಥನ ನಡೆಸುತ್ತಾರೆ. ಕೊಲೆ ಮಾಡುವುದಿಲ್ಲ, ಕಳ್ಳತನ ಮಾಡುವುದಿಲ್ಲ, ಮದ್ಯಪಾನ ಮಾಡುವುದಿಲ್ಲ, ವ್ಯಭಿಚಾರ ಮಾಡುವುದಿಲ್ಲ, ಸುಳ್ಳು ನುಡಿಯುವುದಿಲ್ಲ ಎಂಬ ಬುದ್ಧನ ಪಂಚಶೀಲ ತತ್ವಗಳ ಪ್ರತಿಜ್ಞೆ ಮಾಡುತ್ತಾರೆ. ಅಂದು ಮನೆಗಳನ್ನು ಶುದ್ಧ ಮನದಿಂದ ಸ್ವಚ್ಛಗೊಳಿಸಿ ಅಲಂಕರಿಸಿ ಗೋಡೆಗಳ ಮೇಲೆ ಬುದ್ಧನಜಾತಕ ಕಥೆಗಳನ್ನು ಹೇಳುವ ಚಿತ್ರಗಳನ್ನು ಬಿಡಿಸಿ ತೂಗುಹಾಕುತ್ತಾರೆ. ಪಾಯಸದಂತಹ ಸಿಹಿ ಅಡುಗೆ ಮಾಡಿ ತಾವೂ ಉಂಡು ಇತರರಿಗೂ ಉಣಿಸಿ ವಿಶೇಷವಾಗಿ ಬಡಬಗ್ಗರಿಗೆ, ದೀನದಲಿತರಿಗೆ ಬಡಿಸಿ ಬುದ್ಧನ ಹೆಸರಿನ ಹಬ್ಬದ ಸಂತಸವನ್ನು ಹಂಚಿಕೊಳ್ಳುತ್ತಾರೆ. ಬೋಧಿವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನೋದಯವಾದ ಕಾರಣ ಅಂದು ಬೋಧಿವೃಕ್ಷವನ್ನು ಭಕ್ತಿಯಿಂದ ಪೂಜಿಸುತ್ತಾರೆ.

ಬುದ್ಧನೆಂದರೆ: ಬುದ್ಧ ಎಂಬುದು ಬುದ್ಧನ ಹುಟ್ಟು ಹೆಸರಲ್ಲ. ಹಲವು ಜನ್ಮಗಳ ತಪಸ್ಸಾಧನೆಯಿಂದ ಅವನು ಪಡೆದ ಮಹಾಸ್ಥಾನ ಅದು. ಬುದ್ಧ ಎಂದರೆ ಶ್ರೇಷ್ಠ ಜ್ಞಾನಿ. ಜ್ಞಾನದ ಮಹಾಬೆಳಕನ್ನು ಕಂಡವನು ಎಂದರ್ಥ. ಬುದ್ಧ ಎಂದರೆ ಸ್ವಪ್ರಯತ್ನ, ಸ್ವಶಕ್ತಿಯಿಂದ ತಮ್ಮ ಅಂತಃಶಕ್ತಿಯ ಸತ್ವದಿಂದಲೇ ಶ್ರೇಷ್ಠ ಜ್ಞಾನಗಳಿಸಿ ಎಲ್ಲರ ಹಿತಕ್ಕಾಗಿ, ಎಲ್ಲರ ನೆಮ್ಮದಿಗಾಗಿ ಅಪಾರ ಕರುಣೆಯಿಂದ ಆ ಜ್ಞಾನವನ್ನು ಜನರಿಗೆ ತಿಳಿಸಿದವನು ಎಂದರ್ಥ. ಸತ್ಯದ ಸ್ವರೂಪವನ್ನು ಅರಿತವನು ಎಂಬ ಅರ್ಥದಲ್ಲಿ ಬುದ್ಧನನ್ನು 'ತಥಾಗತ' ಎಂಬುದಾಗಿಯೂ ಕರೆಯಲ್ಪಡಲಾಗಿದೆ.

**ಸಿದ್ಧಾರ್ಥ ಬುದ್ಧನಾದ:** ಅದೊಂದು ದಿನ ಜಗವೆಲ್ಲಾ ಮಲಗಿರಲು ಅವನೊಬ್ಬನೆದ್ದ. ಎದ್ದವನುಎಲ್ಲಾ ಭೋಗ-ಭಾಗ್ಯಗಳನ್ನೂ ತೊರೆದು, ಪ್ರೇಮದ ಪತ್ನೀ ಪುತ್ರರನ್ನೂ ಬಿಟ್ಟುಇಡೀ ರಾಜ್ಯವನ್ನು ತೃಣ ಸಮಾನವಾಗಿ ಭಾವಿಸಿ, ತಾನು ಸನ್ಯಾಸಿಯಾದ ಸುದ್ದಿಯನ್ನು ತನ್ನ ತಂದೆಗೆ ತಿಳಿಸಲು ಸೇವಕ ಚೆನ್ನನಿಗೆ ಹೇಳಿ ಸಿದ್ಧಾರ್ಥ ಹೊರಟೇಬಿಟ್ಟ.ತನ್ನ ಮೆಚ್ಚಿನ ಕುದುರೆ ಕಂಟಕನ ಮೇಲೆ ಮುಂದೆ ಸಿದ್ಧಾರ್ಥ, ಹಿಂದೆಚೆನ್ನ. ಕಣ್ತುಂಬ ಜಗದಕಲ್ಯಾಣವೇ ತುಂಬಿ ತುಳುಕಿತ್ತು. ಗುರಿ ಯಾವುದೋ ಮಹಾಬೆಳಕನ್ನು ಅರಸುತ್ತಾ ಸಾಗಿತ್ತು.

ಸಿದ್ಧಾರ್ಥ ಕಾಡುಮೇಡುಗಳೆನ್ನದೆ ಹಲವಾರು ವರ್ಷಗಳ ಕಾಲ ಚಿಂತನಶೀಲನಾಗಿ, ಸತ್ಯಶೋಧಕನಾಗಿ ತನ್ನಗುರಿ ಸಾಧಿಸಲುಅಲೆದಾಡಿದ.ಆದರೆ ತನ್ನೊಳಗೆ ಉದ್ಭವಿಸಿದ್ದ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ. ಆದರೆ ಹಠಬಿಡದ ಸಿದ್ಧಾರ್ಥ ಗಯಾದ ಬಳಿ ಬೋಧಿವೃಕ್ಷದಡಿ ಕುಳಿತು ದಿವ್ಯತಪಸ್ಸುಕೈಗೊಂಡ. 'ಜ್ಞಾನದ ಬೆಳಕು ಕಾಣದೆ ಎದ್ದೇಳುವುದಿಲ್ಲ' ಎಂದು ಪ್ರತಿಜ್ಞೆಗೈದ. ಅವನ ದೃಢ ಸಂಕಲ್ಪ ಫಲ ನೀಡಿತು. 35ನೇ ವಯಸ್ಸಿನಲ್ಲಿ (ಕ್ರಿ.ಪೂ. 528) ಗಯಾ ಬಳಿ ಬೋಧಿವೃಕ್ಷದಡಿಯಲ್ಲಿತಪೋನಿರತ ಸಿದ್ಧಾರ್ಥನಿಗೆ ವೈಶಾಖ ಶುಕ್ಲ ಪೂರ್ಣಿಮೆಯಂದುಜ್ಞಾನೋದಯವಾಗಿ ಬುದ್ಧನಾದ. ಆ ನಂತರಧರ್ಮೋಪದೇಶಕ್ಕೆ ಧರ್ಮಚಕ್ರ ಪ್ರವರ್ತನೆಗೆ ಹೊರಟ.

ಜ್ಞಾನದ ಮೇರು ಪರ್ವವಾದ ಬುದ್ಧಆಷಾಡ ಹುಣ್ಣಿಮೆಯಂದು ಕಾಶಿ ಬಳಿಯ ಜಿಂಕೆ ವನಕ್ಕೆ ಬಂದ. ಈಗ ಅದನ್ನು ಸಾರನಾಥಎನ್ನುತ್ತಾರೆ.ಜ್ಞಾನಸಿಂಧುವಾದ ಬುದ್ಧ ಪ್ರಪ್ರಥಮವಾಗಿ ಇಲ್ಲಿ ಉಪದೇಶ ಮಾಡಿದ. ಅನಂತರ ತಮ್ಮ ಶಿಷ್ಯರೊಡಗೂಡಿ ದೇಶಾದ್ಯಂತ, ಜಗದಾದ್ಯಂತ ಸಂಚರಿಸುತ್ತಾ ತಾನು ಕಂಡಜ್ಞಾನದ ಸಿಹಿಯನ್ನು ಬೋಧನೆಯ ಮೂಲಕ ಎಲ್ಲರಿಗೂ ಹಂಚಿದ.ಸುಮಾರು ನಲವತ್ತೈದು ವರ್ಷಗಳ ಕಾಲ ಬೋಧನೆಗಳನ್ನು ನಿರಂತರವಾಗಿ ಮಾಡಿದ ಭಗವಾನ್ ಬುದ್ಧಜಗದಕಣ್ಣಾದ.ಅವನು ಭೋದಿಸಿದ ಬೌದ್ಧತತ್ವ, ಬೌದ್ಧಮತ ವಿಶ್ವದೆಲ್ಲೆಡೆ ಹರಡಿತು.ಬೌದ್ಧಮತದ ಅನುಯಾಯಿಗಳನ್ನು ಬೌದ್ಧರುಎಂದುಕರೆಯಲಾಗುತ್ತದೆ.ಭಗವಾನ್ ಬುದ್ಧಅಜ್ಞಾನವನ್ನು ದೂರಸರಿಸಿ ಮೈತ್ರಿ ಮತ್ತು ಕರುಣೆಗಳನ್ನು ಬೆಳೆಸುವ ತಾವು ಬೋಧಿಸಿದ ಧರ್ಮದ ಸಾರವನ್ನೆಲ್ಲಾ ಈ ಒಂದು ಪದ್ಯದಲ್ಲಿ ಹಿಡಿದಿಟ್ಟು ಹೀಗೆ ಹೇಳಿದ್ದಾರೆ.

**ಸಬ್ಬ ಪಾಪಸ್ಸಅಕರಣಂ।**
**ಕುಸಲಸ್ಸಉಪಸಂಪದಾ॥**
**ಸಚಿತ್ತ ಪರಿಯೋದ ಪರನಂ।**
**ಏತಂ ಬುದ್ಧಾನುಸಾಸನಂ॥**

ಈ ಪದ್ಯವು ಪಾಲಿ ಭಾಷೆಯಲ್ಲಿದೆ.ಇದರಅರ್ಥಯಾವ ಪಾಪವನ್ನೂ ಮಾಡದಿರುವುದು, ಕುಶಲವನ್ನು ಸಂಪಾದಿಸುವುದು, ಚಿತ್ತವನ್ನು ಶುದ್ಧಿಗೊಳಿಸುವುದು, ಇದೇ ಬುದ್ಧನ ಶಾಸನ. 'ಧಮ್ಮಪದ' ಎಂಬ ಗ್ರಂಥದಲ್ಲಿ 26 ವರ್ಗ ಮತ್ತು ಮೇಲಿನ ಪದ್ಯದಂಥ 423 ಪದ್ಯಗಳು ಸಂಗ್ರಹಿಸಲ್ಪಟ್ಟಿವೆ. ವೈದಿಕ ಧರ್ಮದಲ್ಲಿಗೀತೆ ಹೇಗೋ ಬೌದ್ಧಧರ್ಮದಲ್ಲಿ 'ಧಮ್ಮಪದ' ಹಾಗೆ. ಬೌದ್ಧಧರ್ಮವನ್ನು ಅರಿತುಕೊಳ್ಳಲು ಧಮ್ಮಪದವೊಂದೇ ಸಾಕು. ಮಾನವನನ್ನುಕತ್ತಲಿಂದ ಬೆಳಕಿನತ್ತ ನಡೆಸುವಜ್ಞಾನ ದೀಪವಿದು.ಬುದ್ಧನ ಹಿಂದಿನ ಜನ್ಮಗಳನ್ನು 'ಬೋಧಿಸತ್ವ' ಎನ್ನುತ್ತಾರೆ.ಮುಂದೆ ಬುದ್ಧ ಭಗವಾನ್‌ನಾದ ಸಿದ್ಧಾರ್ಥ ಗೌತಮನೂ ಅನೇಕ ಬೋಧಿಸತ್ವ ಜನ್ಮಗಳನ್ನೆತ್ತಿದ್ದ.ಇಂತಹ 547 ಕಥೆಗಳು 'ತ್ರಿಪಿಟಕ'ದಲ್ಲಿವೆ. ಅವನ್ನು 'ಬುದ್ಧನಜಾತಕ ಕಥೆಗಳು' ಎನ್ನುತ್ತಾರೆ.ಇದು ಪಾಳಿ ಭಾಷೆಯಲ್ಲಿದ್ದುಇದರ ಮೂರು ಭಾಗಗಳೇ ಒಂದನೆಯದು ಸುತ್ತ ಪಿಟಕ, ಎರಡನೆಯದು ವಿನಯ ಪಿಟಕ, ಮೂರನೆಯದುಅಭಿಧರ್ಮ ಪಿಟಕ.

'ಬಹುಜನ ಹಿತಾಯ ಬಹುಜನ ಸುಖಾಯ' ಇದು ಬುದ್ಧದೇವನ ಮಹಾವಾಕ್ಯ.ಜಗತ್ತನ್ನು ಬೆಳಕಿನತ್ತ ಕೊಂಡೊಯ್ಯಲುತಾವು ಬದುಕಿರುವವರೆಗೂ ಅಂದಿನ ಬಹುಜನರ ಭಾಷೆ ಪಾಳಿಯಲ್ಲೆ ಧರ್ಮ ಪ್ರಚಾರ ಮಾಡಿಜನಮನ ಸ್ಪರ್ಶಿಸಿ ಬುದ್ಧತನ್ನ 80ನೇ ವಯಸ್ಸಿನಲ್ಲಿ ಉತ್ತರ ಪ್ರದೇಶದ ಕುಶೀನಗರದಲ್ಲಿ ಕ್ರಿ.ಪೂ. 483ರಲ್ಲಿ ವೈಶಾಖ ಪೂರ್ಣಿಮೆಯಂದು ಮಹಾಪರಿನಿರ್ವಾಣ ಹೊಂದಿದರು.ಹೀಗೆ ತಮ್ಮಉಜ್ವಲ ಧ್ಯೇಯೋದ್ದೇಶ. ಪ್ರಜ್ವಲ ತತ್ವಾದರ್ಶಗಳಿಂದ, ಶೋಧನೆ-ಬೋಧನೆಗಳ ಮೂಲಕ 'ಸರ್ವೇಜನೋಸುಖಿನೋಭವತು' ಎಂಬಂತೆಎಲ್ಲರ ಮನಸ್ಸುಗಳನ್ನು ಗೆದ್ದ ಬುದ್ಧ ನಿತ್ಯ ಸ್ಮರಣೀಯ. ಬುದ್ಧನಂಥ ಮಹಾತ್ಮನನ್ನು ಪಡೆದ ಭಾರತದೇಶವೇಧನ್ಯ.

**ಬುದ್ಧಂ ಶರಣಂ ಗಚ್ಛಾಮಿ**
**ಧರ್ಮಂ ಶರಣಂ ಗಚ್ಛಾಮಿ**
**ಸಂಘಂ ಶರಣಂ ಗಚ್ಛಾಮಿ**

## ಸಹಬಾಳ್ವೆ ಮತ್ತು ಶ್ರಮ ಸಂಸ್ಕೃತಿ ಪಾಠ ಕಲಿಸಿದ

# ಎನ್ ಎಸ್ ಎಸ್ ಶಿಬಿರ

**ಜಿ. ಚಂದ್ರಕಾಂತ್**
ಉಪ ನಿರ್ದೇಶಕರು
ಗುಲ್ಬರ್ಗಾ



"ಒಗ್ಗಟಿನಲ್ಲಿ ಬಲವಿದೆ. ಯಾರೂ ಮೇಲು ಕೀಳಲ್ಲ. ಪರಸ್ಪರ ದ್ವೇಷಾಸೂಯೆಗಳನ್ನು ಮರೆತು ಎಲ್ಲರೂ ಒಂದಾಗಿ ಸಹಬಾಳ್ವೆಯಿಂದ ಮತ್ತು ಜವಾಬ್ದಾರಿಯಿಂದ ಸ್ವಾವಲಂಬಿ ಬದುಕು ಸಾಗಿಸುವ ಬದುಕುವ ಮತ್ತು ಉದನೂರ ಗ್ರಾಮದವರೊಂದಿಗೆ ಬೆರೆಯುವ ಹಾಗೂ ಅವರ ಸಹಕಾರದಿಂದ ವಿವಿಧ ಕೆಲಸ ಕಾರ್ಯ ಕೈಗೊಳ್ಳುವ ಸುವರ್ಣಾವಕಾಶ ಈ ಶಿಬಿರ ಕಲ್ಪಿಸಿಕೊಟ್ಟಿತು. ಎನ್.ಎಸ್.ಎಸ್. ಎಂದರೆ ಕೇವಲ ಕೆಲಸ ಮಾಡಿಸುತ್ತಾರೆಂಬ ಭಾವನೆ ಇತ್ತು. ಶಿಬಿರದಲ್ಲಿ ಪಾಲ್ಗೊಂಡ ಬಳಿಕ ಈ ಭಾವನೆ ದೂರಾಯಿತು. ಶಿಸ್ತು, ಸಂಯಮ, ಸಹೋದರತೆ, ಸಮಯಪ್ರಜ್ಞೆ, ಉತ್ತಮ ಸೇವಾ ಮನೋಭಾವನೆ, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಹಾಗೂ ಜವಾಬ್ದಾರಿಯುತ ವ್ಯಕ್ತಿತ್ವ, ಬೇರೆ ಬೇರೆ ತರಗತಿಯವರು ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ನಾವೆಲ್ಲರೂ ಒಂದೆಂಬ ಭಾವನೆಯನ್ನು ರೂಪಿಸಿಕೊಳ್ಳಲು ಶಿಬಿರ ಸಹಕಾರಿಯಾಯಿತು. ಶಿಬಿರದಲ್ಲಿ ಶಿಬಿರಾಧಿಕಾರಿಗಳೇ ತಂದೆ ತಾಯಿಗಳಾಗಿ, ಶಿಬಿರಾರ್ಥಿಗಳೇ ಸೋದರ ಸೋದರಿಯರಾಗಿ, ಸಂದರ್ಶಕರೇ ಬಂಧು–ಬಾಂಧವರಾಗಿ ಕಂಡಿದ್ದರಿಂದ ಮನೆಯ ನೆನಪು ಬರಲಿಲ್ಲ. ತರಗತಿ ಕೋಣೆಯಲ್ಲಿ ಪೆನ್ನು ಲೇಖನಿ ಹಿಡಿದ ಕೈಗಳಿಗೆ ಈ ಶಿಬಿರದಲ್ಲಿ ಕೊಡಲಿ, ಹಾರೆ, ಗುದ್ದಲಿಗಳು ಬಂದಾಗ ಶ್ರಮ ಸಂಸ್ಕೃತಿಯ ವಿಶೇಷ ಅನುಭವ ನೀಡಿತು. ಸೇವಾನುಭವ ಜೀವನದುದ್ದಕ್ಕೂ ಸ್ಮರಣೆಯಲ್ಲಿರುವಂಥದ್ದು" ಎಂಬುದು ಶಿಬಿರಾರ್ಥಿಗಳಾದ ಅಶ್ವಿನಿ ಎಂ.ಆರ್., ಪೂಜಾ ರಾಚಯ್ಯ, ಭವ್ಯ ಶಿವಲಿಂಗಪ್ಪ ಮತ್ತು ಭಾಗ್ಯಶ್ರೀ ಪಾಟೀಲ ಅವರ ಮನದಾಳದ ಮಾತಾಗಿದೆ.

ಸಮಾಜದ ಮತ್ತು ಗ್ರಾಮಗಳ ಅಭಿವೃದ್ಧಿಗೆ ವಿದ್ಯಾರ್ಥಿಗಳ ಸೇವೆಯ ಅಗತ್ಯತೆಯನ್ನು ಮನಗಂಡು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ 1969ರಲ್ಲಿ ವಿವಿಧ ಕಾಲೇಜುಗಳಲ್ಲಿ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಈ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳು ಹುಟ್ಟಿಕೊಂಡವು. ಹೊಳೆಯ ರಭಸದ ಗತಿ, ಸದೃಢತೆ, ವಿಶಾಲತೆ, ಗಂಭೀರತೆ ಹೊಂದಿರುವ ಯುವ ಮತ್ತು ವಿದ್ಯಾರ್ಥಿ ಸಮುದಾಯವನ್ನು ದುಡಿಮೆ ಮತ್ತು ಹಳ್ಳಿಗಳ ಅಭಿವೃದ್ಧಿಗಾಗಿ ಬಳಸಿಕೊಳ್ಳಲು ಭಾರತದಲ್ಲಿರುವ ಹಳ್ಳಿಗಳ ಜನರ ಬದುಕಿಗೆ ಅತ್ಯವಶ್ಯಕವಾದ ಆರೋಗ್ಯ, ಪರಿಸರ ಮತ್ತು ನೈರ್ಮಲ್ಯ ಪ್ರಜ್ಞೆ, ಶೌಚಾಲಯ ನಿರ್ಮಾಣದಂತಹ ಹಲವಾರು ವಿಷಯಗಳ ಮತ್ತು ಶ್ರಮಶಕ್ತಿಯ ಬಗ್ಗೆ ಅರಿವು ಮೂಡಿಸುವಲ್ಲಿ ಕಲಬುರಗಿ ತಾಲೂಕಿನ ಉದನೂರ ಗ್ರಾಮದಲ್ಲಿ ಮಾರ್ಚ್ 20 ರಿಂದ 26ರವರೆಗೆ ಹಮ್ಮಿಕೊಂಡ ಆರು ದಿನಗಳ ವಾರ್ಷಿಕ ವಿಶೇಷ ಶಿಬಿರ ಯಶಸ್ವಿಯಾಯಿತು. "ಯುವಜನತೆ ಮತ್ತು ವೈಜ್ಞಾನಿಕ ಮನೋಭಾವ" ಶಿಬಿರದ ಘೋಷ ವಾಕ್ಯವಾಗಿತ್ತು.

ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕಲಬುರಗಿ ಮಹಿಳೆಯರ ಸರ್ಕಾರಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಸ್ನಾತಕೋತ್ತರ ಘಟಕಗಳಿಂದ ಕಾಲೇಜಿನ ಪ್ರಾಚಾರ್ಯ ಪ್ರೊ.ಖಂಡೇರಾವ ಮತ್ತು ಎನ್.ಎಸ್.ಎಸ್. ಘಟಕದ ಕಾರ್ಯಕ್ರಮ ಅಧಿಕಾರಿಗಳಾದ ಪ್ರೊ.ಶಿವಶರಣಪ್ಪ ಬಿರಾದಾರ, ಪ್ರೊ.ಮೀನಾಕ್ಷಿ ವಿಜಯಕುಮಾರ, ಪ್ರೊ. ಪ್ರಕಾಶ ಪಾಟೀಲ ಮತ್ತು ಶಿಬಿರಾಧಿಕಾರಿಗಳಾದ ಡಾ. ಭೀಮಣ್ಣ ಘನಾತೆ, ಡಾ.ರೂಪಾಲಿ ರಾಠೋಡ, ಪ್ರೊ. ಜ್ಯೋತಿ ರೆಡ್ಡಿ ಅವರ ನೇತೃತ್ವದಲ್ಲಿ ಜರುಗಿದ ಈ ಶಿಬಿರದಲ್ಲಿ ಒಟ್ಟು 150 ಮಹಿಳಾ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ಶಿಬಿರದ ಅವಧಿಯಲ್ಲಿ ಹಳ್ಳಿಯ ಜನರಿಗೆ ಮತ್ತು ಶಿಬಿರಾರ್ಥಿಗಳಿಗೆ ಉಪಯುಕ್ತವಾದ ನೈತಿಕ, ವೈಚಾರಿಕ, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ದೃಷ್ಟಿಕೋನಗಳ ಮೇಲೆ ಬೆಳಕು ಚೆಲ್ಲುವ ವಿವಿಧ ವಿಷಯಗಳ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಇದಲ್ಲದೆ ಪ್ರತಿದಿನ ವ್ಯಾಯಾಮ, ಯೋಗಾಸನ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಸಹ ಆಯೋಜಿಸಲಾಗಿತ್ತು.

ಶಿಬಿರದ ಅಂಗವಾಗಿ ಉದನೂರ ಗ್ರಾಮದಲ್ಲಿ ಶಿಬಿರಾರ್ಥಿಗಳು ಪ್ರತಿದಿನ ಶ್ರಮದಾನದಿಂದ ಸ್ವಚ್ಛತಾ ಕಾರ್ಯ ಕೈಗೊಂಡಿದ್ದಲ್ಲದೆ ಸ್ವಚ್ಛತೆಯ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಸಹ ಮೂಡಿಸಿದರು. ಶಿಬಿರದ ಸವಿ ನೆನಪಿಗಾಗಿ ಉದನೂರ ಗ್ರಾಮದ ಜೋಡ ಬಸವೇಶ್ವರ ಮಠದ ಆವರಣದ ಸ್ವಚ್ಛತೆ ಮಾಡುವುದರೊಂದಿಗೆ ನೀರಿನ ಟ್ಯಾಂಕ್ ದುರಸ್ತಿಗೊಳಿಸಿದರು. ಡಾ॥ ಶಾಲಿನಿ ಸಜ್ಜನ್ ಅವರ ನೇತೃತ್ವದಲ್ಲಿ ಜರುಗಿದ ರಕ್ತದಾನ ಶಿಬಿರದಲ್ಲಿ 05 ಶಿಬಿರಾರ್ಥಿಗಳು ರಕ್ತದಾನ ಮಾಡಿರುವುದರಿಂದ ಪ್ರೇರಣೆಗೊಂಡ ಗ್ರಾಮದ 15 ಜನರು ಸಹ ರಕ್ತದಾನ ಮಾಡಿದರು. ಶಿಬಿರಾರ್ಥಿಗಳು ಮನೆ ಮನೆಗೆ ಭೇಟಿ ನೀಡಿ ಸರ್ಕಾರದ ಸೌಲಭ್ಯಗಳ ಪ್ರಯೋಜನ ಪಡೆದುಕೊಂಡಿರುವವರ ಹಾಗೂ ಶೌಚಾಲಯ ಹೊಂದಿರುವವರ ಸಮೀಕ್ಷೆ ನಡೆಸಿದರಲ್ಲದೇ ಸ್ವಚ್ಛತೆ ಕಾಪಾಡುವಂತೆ ಗ್ರಾಮಸ್ಥರಲ್ಲಿ ಮನವಿ ಮಾಡಿದರು.





# ಕೃಷಿಯಲ್ಲಿಯೇ ನೆಮ್ಮದಿಯ ಬದುಕು

ಚಿತ್ರ–ಬರಹ :
**ಗಣಪತಿ ಹಾಸ್ಪುರ**

'ಹಳ್ಳಿಯಲ್ಲಿ ನೆಲೆಸುವ ಯುವಕರಿಲ್ಲ. ಕೃಷಿ ಕೆಲಸದಲ್ಲಿ ತೊಡಗಿಕೊಂಡು, ಅದನ್ನು ಮುನ್ನಡೆಸಿಕೊಂಡು ಹೋಗುವ ಮಕ್ಕಳೇ ಕಾಣುವುದಿಲ್ಲ....' ಎನ್ನುವ ಮಾತೇ ಪ್ರತೀ ದಿನ ಅಲ್ಲಲ್ಲಿ ಕೇಳಿ ಬರುತ್ತಲೇ ಇದೆ. ಇದರ ನಡುವೆ ಮಲೆನಾಡಿನ ಪ್ರದೇಶದಲ್ಲಿ ಅನೇಕ ಯುವಕರು ಕೃಷಿ ಕಸುಬಿನಲ್ಲಿಯೇ ಸಕ್ರಿಯವಾಗಿ ತಮ್ಮನ್ನು ಅರ್ಪಿಸಿಕೊಂಡು, ನೆಮ್ಮದಿಯ ಬದುಕನ್ನು ಕಟ್ಟಿಕೊಂಡಿದ್ದಾರೆ. ಅಂಥವರಲ್ಲಿ ಭಟ್ರಕೇರಿಯ ರಾಘವೇಂದ್ರ ಹೆಗಡೆ ಬಹಳ ವಿಶಿಷ್ಟವಾಗಿಯೇ ಕಾಣುತ್ತಾರೆ.

ಇವರು ಉ. ಕ. ಜಿಲ್ಲೆಯ ಯಲ್ಲಾಪುರ ತಾಲೂಕಿನ ಚವತ್ತಿ ಸಮೀಪದ ಭಟ್ರಕೇರಿಯವರು. ಕೂಡು ಕುಟುಂಬದಲ್ಲಿ ಜನಿಸಿರುವ ರಾಘವೇಂದ್ರ ಹೆಗಡೆ "ಹಾಸಿಗೆ ಇದ್ದಷ್ಟು ಕಾಲು ಚಾಚು".... ಎನ್ನುವ ಮಾತಿನಂತೆ; ಅನೇಕ ವರ್ಷಗಳ ಕಾಲ ಅವಿಭಕ್ತ ಕುಟುಂಬ ವ್ಯವಸ್ಥೆಗೆ ಹೊಂದಿಕೊಂಡವರು. ಕಷ್ಟ–ಸುಖಗಳನ್ನು ಸಮನಾಗಿ ಸ್ವೀಕರಿಸಿರುವ ಇವರು, ಅದರಲ್ಲಿಯೇ ಸಂತೃಪ್ತಿಯ ಜೀವನ ನಡೆಸಿದ್ದಾರೆ. ಕೃಷಿ ಕಸುಬಿನಲ್ಲಿ ಶ್ರದ್ಧೆಯಿಂದ ದುಡಿಯುತ್ತಿರುವ ರಾಘವೇಂದ್ರ ಹೆಗಡೆ 2004 ರಿಂದ ಸ್ವಂತ ನೆಲೆಯಲ್ಲಿ ಕೃಷಿ ಭೂಮಿಯನ್ನು ಸಾಗುವಳಿ ಮಾಡುತ್ತಾ, ಉತ್ತಮ ಇಳುವರಿಯನ್ನು ಪಡೆಯುತ್ತಿದ್ದಾರೆ. ನೆಮ್ಮದಿಯಿಂದ ಸಂಸಾರದ ನೌಕೆಯನ್ನು ಸಾಗಿಸುತ್ತಿದ್ದಾರೆ.

### ಕಂಗೊಳಿಸುವ ಅಡಿಕೆ ತೋಟ

ಭಟ್ರಕೇರಿಯ ರಾಘವೇಂದ್ರ ವೆಂ. ಹೆಗಡೆ ದೊಡ್ಡ ಜಮೀನು ಹೊಂದಿದ ಕೃಷಿಕರೇನು ಅಲ್ಲಾ. ಅವರದ್ದು ಕೇವಲ 34 ಗುಂಟೆ ಅಡಿಕೆ ತೋಟವಿದೆ! ಅದು ಸಹಾ ಒಂದೇ ಕಡೆಗೂ ಇಲ್ಲಾ. ಒಂದು ಕಡೆಗೆ 16 ಗುಂಟೆ; ಮತ್ತೊಂದು ಕಡೆ 18 ಗುಂಟೆ ಇದೆ. ಎರಡು ಕಡೆಯಲ್ಲಿರುವ ಅವರ ಅಡಿಕೆ ತೋಟ ಚೆನ್ನಾಗಿಯೇ ಇದೆ. ತಮಗೆ ಇಷ್ಟವಾದ ಪ್ರಗತಿಪರ ಕೃಷಿಕರ, ತಜ್ಞರ ಮಾರ್ಗದರ್ಶನದಲ್ಲಿ ತಮ್ಮ ಅಡಿಕೆ ತೋಟವನ್ನು ಸಾಗುವಳಿ ಮಾಡುತ್ತಿದ್ದಾರೆ. ಎರಡು ವರ್ಷಕ್ಕೊಮ್ಮೆ (ಒಂದೊಂದು ವರ್ಷ ಒಂದೊಂದು ತೋಟಕ್ಕೆ) ಎರಡು ಮರಕ್ಕೆ ಒಂದು ಹೆಡೆಗೆ ದಡ್ಡಿಗೊಬ್ಬರ ಹಾಕುತ್ತಾರೆ. ಮನೆಯ ಗೊಬ್ಬರ ಇದ್ದಷ್ಟನ್ನು ಹಾಕಿ, ಕಡಿಮೆ ಬಿದ್ದರೆ ತರಿಸಿಕೊಂಡು ಕೊಟ್ಟಿಗೆ ಗೊಬ್ಬರವನ್ನು ಸಕಾಲದಲ್ಲಿ ನೀಡುತ್ತಾರೆ. ಕಾಳು ಮೆಣಸು ಇರುವ ಅಡಿಕೆ ಮರಕ್ಕೆ ಪ್ರತೀ ಮರಕ್ಕೆ ಮೂರು ಕೇ. ಜಿ. ಗೊಬ್ಬರವನ್ನು ಹಾಕುತ್ತಾರೆ. ಅಷ್ಟೇ ಅಲ್ಲಾ ರಾಘವೇಂದ್ರ ಹೆಗಡೆ ಅವರು 2006ರಿಂದ ತೋಟಕ್ಕೆ ಸಾವಯವ ಗೊಬ್ಬರವನ್ನು ನೀಡಿ ಅಭಿವೃದ್ಧಿ ಮಾಡುತ್ತಿದ್ದಾರೆ.

ಇವರು ಎರಡು ಕಡೆಯ ತೋಟಕ್ಕೂ ಅಂತರ್ ಬಸಿಗಾಲುವೆಯನ್ನು ವ್ಯವಸ್ಥಿತವಾಗಿ ಅಳವಡಿಸಿಕೊಂಡಿದ್ದಾರೆ. ತೋಟಕ್ಕೆ ನೀರಾವರಿಯೂ ಉಂಟು. ಇವರದ್ದು ಸೊಪ್ಪಿನ ಬೆಟ್ಟ ದೂರವಿದೆ. ಹೀಗಾಗಿ ಪ್ರತೀ ವರ್ಷ ಮುಚ್ಚಿಗೆಯನ್ನು ಮಾಡುತ್ತಿಲ್ಲ. ಆದರೂ, ಪಕ್ಕದ ತೋಟದವರ ಬೆಟ್ಟದಲ್ಲಿ ಧಾರಾಳವಾಗಿ ಒಣ ಎಲೆ (ತೆರಕು) ಸಿಕ್ಕಿದ್ದರಿಂದ, ಅವರ ಒಪ್ಪಿಗೆಯ ಮೇರೆಗೆ ಮೂರು ವರ್ಷ ತೆರಕನ್ನು ತೋಟಕ್ಕೆ ಹಾಸಿದ್ದಾರೆ. ಅಲ್ಲದೇ, ಆಯಾ ವರುಷ ಸಮಯ ಸಿಕ್ಕಿದ್ದರೇ ಬೆಟ್ಟವನ್ನು ಸವರಿ; ಸಿಕ್ಕಿದ್ದಷ್ಟು ಸೊಪ್ಪನ್ನು ಅಡಿಕೆ ಮರದ ತಳದಲ್ಲಿ ಹಾಕಿ ತೋಟವನ್ನು ಪೋಷಿಸುತ್ತಾರೆ. ಹೀಗೆ ಶ್ರದ್ಧೆ–ನಿಷ್ಠೆಯಿಂದ ಸಾಗುವಳಿ ಮಾಡಿದ ರಾಘವೇಂದ್ರ ಹೆಗಡೆ ಅವರ ತೋಟ ಸೊಂಪಾಗಿದೆ. ಅವರ ಪರಿಶ್ರಮಕ್ಕೆ ತಕ್ಕ ಫಲವನ್ನು ನೀಡುತ್ತಿದೆ ಎಂದರೂ ತಪ್ಪಾಗಲಿಕ್ಕಿಲ್ಲ. ಭಟ್ರಕೇರಿಯ ಉತ್ಸಾಹಿ ಯುವ ಕೃಷಿಕರಾದ ಇವರು 2005 ರಲ್ಲಿ ಐದು ಕ್ವಿಂಟಲ್ ಅಡಿಕೆ ಪಡೆದಿದ್ದರು! ಈಗ ಅಷ್ಟೇ ಜಾಗದಲ್ಲಿ 18 ಕ್ವಿಂಟಲ್ (2015–16 ರಲ್ಲಿ) ಫಲ ಸಿಗುತ್ತಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ವರ್ಷ ಮುಂಗಾರು ಮಳೆ ಕೈಕೊಟ್ಟಿದೆ. ಎಲ್ಲಾ ಕಡೆಯೂ ಅಡಿಕೆ ಫೀಕು ಕಡಿಮೆ ಎಂದು ಹೇಳುತ್ತಿದ್ದಾರೆ. ಆದರೂ ನನ್ನ ತೋಟದಲ್ಲಿ 16 ರಿಂದ 17 ಕ್ವಿಂಟಲ್ ಸಿಗುವ ನಿರೀಕ್ಷೆಯಿದೆ ಎನ್ನುತ್ತಾರೆ ರಾಘವೇಂದ್ರ ಹೆಗಡೆ.

### ಮೆಣಸು ಕೃಷಿಯೂ ಉಂಟು

ತನ್ನ ಕೃಷಿ ಭೂಮಿಯಲ್ಲಿ ಮೈಮುರಿದು ದುಡಿಯುವ ರಾಘವೇಂದ್ರ ಹೆಗಡೆ ಕೇವಲ ಒಂದೇ ಕೃಷಿಗೆ ಅಂಟಿಕೊಂಡವರಲ್ಲಾ. ಬಾಳೆ, ಕೋಕೋ ಕೃಷಿಯನ್ನು ಮಾಡಿದವರು. ಸುಮಾರು ಐದು ವರ್ಷಗಳ ಕಾಲ 'ಬಂಗಾರ ಬೆಳೆ' ಎಂದೇ ಹೆಸರಾದ ವೆನಿಲ್ಲಾ ಕೃಷಿಯನ್ನು ಹೇರಳವಾಗಿ ಮಾಡಿದ್ದರು. ಆ ಕೃಷಿ ಇರುವ ಸಮಯದಲ್ಲಿ ಇವರು ಮುರಿ ಆಳಿನ ಲೆಕ್ಕದಲ್ಲಿ ಅಕ್ಕಪಕ್ಕದ ಬಂಧುಗಳ ತೋಟದಲ್ಲಿ ವೆನಿಲ್ಲಾ ಹೂವಿಗೆ ಪರಾಗಸ್ಪರ್ಶ ಮಾಡಿ; ಶಕ್ತಿ ಮೀರಿ ದುಡಿದಿದ್ದಾರೆ. ಶ್ರಮಕ್ಕೆ ತಕ್ಕ ಫಲ ಆ ಬೆಳೆಯಿಂದ ಸಿಗಲಿಲ್ಲ. ರಾಘವೇಂದ್ರ ಹೆಗಡೆ ಸುಮಾರು ಮೂರು ಕ್ವಿಂಟಲ್ ವೆನಿಲ್ಲಾ ಬೆಳೆದರೂ, ಕೇ. ಜಿ. ಗೆ 250 ರೂ. ಗೆ ತೃಪ್ತಿ ಪಡಬೇಕಾಯಿತು. ಆ ಕೃಷಿಗೆ ರೋಗ ಬಂದಿದ್ದರಿಂದ ಪರ್ಯಾಯ ಬೆಳೆ ಬೆಳೆಯಲು ಸಂಕಲ್ಪಿಸಿದರು. ಹಾಗೇ ಯೋಚಿಸಿ ಕಾರ್ಯರೂಪಕ್ಕೆ ಇಳಿಸಿದ್ದೇ ಈ ಕಾಳು ಮೆಣಸಿನ ಕೃಷಿ.

ನೆರೆಹೊರೆಯ ಕೃಷಿಕರಿಂದ ಕಾಳು ಮೆಣಸಿನ ಬಳ್ಳಿಗಳನ್ನು ತಂದು ಹೂಳಿದರು. ಈಗ ಭಟ್ರ ಕೇರಿಯ ರಾಘವೇಂದ್ರ ಹೆಗಡೆ ಅವರ ತೋಟದಲ್ಲಿ ಪಣಿಯೂರ್ ಹಾಗೂ ಲೋಕಲ್ ತಳಿಯ ಸುಮಾರು 400 ಬಳ್ಳಿಗಳಿವೆ! ಮೆಣಸು ಕೃಷಿಗೆ ಇವರು ಎರಡು ಭಾರೀ (ಜೂನ್ ಮತ್ತು ಆಗಸ್ಟ್‌ನಲ್ಲಿ) ತುತ್ತ, ಸುಣ್ಣವನ್ನು ಸಿಂಪಡಿಸುತ್ತಾರೆ. ಭಟ್ರ ಕೇರಿಯ ರಾಘು ಕಪ್ಪು ಬಂಗಾರದ ಕೃಷಿಯನ್ನು ಎಂದೂ ನಿರ್ಲಕ್ಷ್ಯ ಮಾಡಿದವರಲ್ಲಾ. ಅದು ಸೂಕ್ಷ್ಮ ಹಾಗೂ ನಾಜೂಕಿನ ಕೆಲಸ. ಅದನ್ನು ತಾಳ್ಮೆಯಿಂದ ನಿಭಾಯಿಸಿದರೇ, ಆ ಕೃಷಿಯಿಂದ ಉತ್ತಮ ಫಲ ಪಡೆಯಲು ಸಾಧ್ಯವಿದೆ ಎನ್ನುತ್ತಾರೆ.



ರಾಘವೇಂದ್ರ ಹೆಗಡೆ ಅವರಿಗೆ 2005ರಲ್ಲಿ ಕೇವಲ 5 ಕೇ. ಜಿ. ಕಾಳು ಸಿಕ್ಕಿತ್ತು! ಆಮೇಲೆ ಬಳ್ಳಿಗಳ ಸಂಖ್ಯೆ ಹೆಚ್ಚಿಸಿ, ಉತ್ತಮವಾಗಿ ನಿರ್ವಹಣೆ ಮಾಡಿದರು. ತೋಟದಲ್ಲಿರುವ ಬಳ್ಳಿಗಳು ಸೊಂಪಾಗಿ ಬಲಿತು, ಹೆಚ್ಚೆಚ್ಚು ಫಸಲು ಬಿಡಲು ಆರಂಭಿಸಿತು. ಅಂದರೇ 2012–13ರಲ್ಲಿ 50 ಕೇ. ಜಿ., 2013–14 ರಲ್ಲಿ ಒಂದೂವರೆ ಕ್ವಿಂಟಲ್, 2014–15 ರಲ್ಲಿ ಎರಡು ಕ್ವಿಂಟಲ್ ಹಾಗೂ 2015–16 ರಲ್ಲಿ ನಾಲ್ಕು ಕ್ವಿಂಟಲ್ ಮೆಣಸಿನ ಫಸಲು ಸಿಕ್ಕಿದೆ. ಅದರಲ್ಲಿ ಕಳೆದ ಸೀಜನ್ನಿನಲ್ಲಿ (2015–16 ರಲ್ಲಿ) ಒಂದೂವರೆ ಕ್ವಿಂಟಲ್ ಬಿಳಿಕಾಳು (ಬೋಳ್‌ಕಾಳು) ಮಾಡಿದ್ದೇನೆ ಎಂದು ರಾಘು ಹೆಮ್ಮೆಯಿಂದ ಹೇಳುತ್ತಾರೆ. ಈ ವರ್ಷ ಮೆಣಸಿನ ಬೆಳೆ ಚೆನ್ನಾಗಿಯೇ ಉಂಟು. ನನ್ನ ಲೆಕ್ಕಾಚಾರದ ಪ್ರಕಾರ ಏಳು ಕ್ವಿಂಟಲ್ ಸಿಗಬಹುದು ಎನ್ನುತ್ತಾರೆ.

### ಕಬ್ಬಿನ ಕೃಷಿಯೂ ಉಂಟು

ಈಚಿನ ದಿನಗಳಲ್ಲಿ ಮಲೆನಾಡಿನ ಪ್ರದೇಶದಲ್ಲಿಯೂ ಈ ಕೃಷಿ ವಿರಳವಾಗುತ್ತಿದೆ. ಅಂಥಹ ವಾತಾವರಣದ ಮಧ್ಯೆಯೂ ಭಟ್ರ ಕೇರಿಯ ರಾಘವೇಂದ್ರ ಹೆಗಡೆ ಸ್ನೇಹಿತರೊಂದಿಗೆ ಸೇರಿಕೊಂಡು ಕಬ್ಬಿನ ಕೃಷಿ ಮಾಡುತ್ತಿರುವುದು ವಿಶೇಷ! ಕಳೆದ ಮೂರು ವರ್ಷಗಳಿಂದ ಆ ಕೃಷಿಯಲ್ಲಿ ಸಕ್ರಿಯವಾಗಿ ಇವರು ತೊಡಗಿಕೊಂಡಿದ್ದಾರೆ. ಕಬ್ಬಿನ ಕೃಷಿಯಲ್ಲಿ ಪಾಲುದಾರರೊಂದಿಗೆ ಶ್ರಮಿಸುತ್ತಾ; ಅದರ ಲಾಭ– ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಾರೆ. ಕಳೆದ ಸೀಜನ್ನಿನಲ್ಲಿ ಇಪ್ಪತ್ತು ಎಸರು ಮಾಡಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

### ಹೈನುಗಾರಿಕೆಯೂ ಉಂಟು!

ಮಲೆನಾಡಿನ ಕೃಷಿಕರಿಗೆ "ಹೈನುಗಾರಿಕೆ" ಉಪ ಕಸುಬು ಎನ್ನುವುದಕ್ಕಿಂತ; ಅದೊಂದು ಜೀವನದ ಅವಿಭಾಜ್ಯ ಅಂಗವೆಂದರೂ ತಪ್ಪಾಗಲಿಕ್ಕಿಲ್ಲ. ಈ ಭಾಗದ ಕೃಷಿಕರಿಗೆ ಪ್ರತಿನಿತ್ಯ ಕೊಟ್ಟಿಗೆ ಚಾಕರಿಯಿಂದಲೇ ಕೆಲಸ ಆರಂಭವಾಗುತ್ತದೆ. ಭಟ್ರ ಕೇರಿಯ ರಾಘವೇಂದ್ರ ಹೆಗಡೆ ಈ ಕೆಲಸ ತನ್ನಿಂದ ಸಾಧ್ಯವಿಲ್ಲವೆಂದು ಹೈನುಗಾರಿಕೆಯನ್ನು ನಿರ್ಲಕ್ಷಿಸದೇ; ಅದರಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಸಧ್ಯ ಇವರು ಎರಡು ಆಕಳು, ಒಂದು ಕರುವನ್ನು ಚೆನ್ನಾಗಿಯೇ ಸಾಕುತ್ತಿದ್ದಾರೆ. ಹಿಂದೆ ದಿನಕ್ಕೆ 15 ಲೀಟರ್ ಹಾಲನ್ನು ಡೇರಿಗೆ ಕೊಡುತ್ತಿದ್ದೆ. ಈಗ ಒಂದೇ ಆಕಳು ಹಾಲು ಕೊಡುತ್ತಿದೆ. ಹೀಗಾಗಿ ಮನೆ ಖರ್ಚಿಗೆ ಇಟ್ಟುಕೊಂಡು ಮೂರು ಲೀಟರ್ (ದಿನಕ್ಕೆ) ಹಾಲನ್ನು ಮಾತ್ರ ಡೇರಿಗೆ ನೀಡುತ್ತಿದ್ದೇನೆಂದು ಹೇಳುತ್ತಾರೆ.

ರಾಘವೇಂದ್ರ ಹೆಗಡೆ ತಮ್ಮ ತೋಟದ ಪ್ರತಿಯೊಂದು ಕೆಲಸಗಳನ್ನು ಮಾಡಲು ಕೂಲಿ ಕಾರ್ಮಿಕರನ್ನೇ ಅವಲಂಬಿಸಿಕೊಂಡಿಲ್ಲ. ಅನೇಕ ಬಗೆಯ ಯಂತ್ರಗಳನ್ನು ಅವರು ಇಟ್ಟುಕೊಂಡಿದ್ದಾರೆ. ತೋಟದಲ್ಲಿ ಬಲಿತ ಕಳೆಯನ್ನು ತೆಗೆಯಲು ವೀಡರನ್ನು; ಕಾಳು ಮೆಣಸಿಗೆ ದ್ರಾವಣ ಸಿಂಪಡಿಸಲು ಪವರ್ ಸ್ಪ್ರೇ.... ಹೀಗೆ ವಿವಿಧ ಯಂತ್ರಗಳನ್ನು ಸ್ವಂತವಾಗಿ ಖರೀದಿಸಿರುವ ಅವರು, ಅವುಗಳನ್ನು ವ್ಯವಸ್ಥಿತವಾಗಿ ಬಳಕೆ ಮಾಡುತ್ತಿದ್ದಾರೆ. ಕೃಷಿ ಕಸುಬಿನಲ್ಲಿಯೇ ನೆಮ್ಮದಿಯನ್ನು ಕಂಡುಕೊಂಡಿರುವ ಭಟ್ರ ಕೇರಿಯ ರಾಘವೇಂದ್ರ ಹೆಗಡೆ ಸ್ವಾವಲಂಬಿಯಾಗಿ ಜೀವನ ನಡೆಸುತ್ತಿದ್ದಾರೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050